ಪ್ರಜಾವಾಣಿ ಭಾನುವಾರ • ಏಪ್ರಿಲ್ 13, 2025

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

REAL ESTATE SELLING

House

Chandra Layout

40X60 WEST with GF for sale. Genuine Buyers. No. 322/16, 6th Main Road, B.C.C Layout, Bangalore-40. Contact:- 8970624516/ 9972848099.

Jayanagar

JAYANAGAR 45X40 East facing, 1st Block, 30x50 Jayanagar 8th Block, old house, site value, Murali- 9845232711

Vijayanagar

VIJAYANAGAR PATTEGARPALYA: SALE 30X40 House, East, 6 BHK Duplex, E Katha, Fully Furnished. 8095976649/ 9620285339

J P Nagar

J.P.NAGAR 2ND, Behind Central Mall, Raggigudda Metro Station 40x60, Two unit house, E-Katha, 6,72,00,000/- 9739995042.

SALE JPNAGAR 2nd Phase Corner Property 30x40 Duplex-House 3BHK 1700sqft Granite-flooring Price 4cr Classic Estates 9845302589

BDA APPROVED Land 2400 Sft with Old Villa JPNagar Genuine Buyers Only. Brokers Excuse: 9341273990


ದಕ್ಷಿಣ ಭಾರತದ ಸ್ವಿಜ್ಜರ್ಲೆಂಡ್ (ಕೊಡೈಕೆನಾಲ್)ನಲ್ಲಿ

ಕೃಷಿ ಭೂಮಿ ಖರೀದಿಸಿ @ ಪ್ರತಿ ಚದರ ಅಡಿಗೆ ರೂ. Rs. 50/-

ವಾಣಿಜ್ಯ / ವಸತಿ ಜಮೀನು @ ಪ್ರತಿ ಚದರ ಅಡಿಗೆ ರೂ. 230/-

ವಾಟ್ಸ್‌ಪ್ ಮಾಡಿ: 80884 10424

ಚೆಟ್ಟಿಯಾರ್ ರಿಯಲ್ ಎಸ್ಟೇಟ್ಸ್



SALE

CHAMRAJPET

COMMERCIAL BUILDING

18,000 SFT,

RENTAL INCOME 7.5 LACS

SALE PRICE 12.50 CRORES

Call: 89713-79031 / 96111-99900

Vidyaranyapura

RESIDENTIAL HOUSE for SALE, at Vidyaranyapura NORTH EAST Corner, 40 Square Building DUPLEX with Lift, BDA, Layout, BBMP Katha. Contact: 9731474000

1 BHK NORTH FACING & 2 BHK EAST FACING SHOPS FOR RENT GOOD LOCATION: 8296895858

Villas/Bunglows

General

SALE VILLAS, Apartments at a Reasonable price. Bank Auctions, Bank Transactions. Value for money. Clear Titles. Vacant Possession. Arun 9845077299.

Industrial & Factory

Mysore Road

SALE INDUSTRIAL CONVERSION LAND 2.14 ACRES RAMANAGARA MYSORE ROAD HIGHWAY FACING 4.90Cr/ Acre Karthik 9741501616

LAND With BUILDINGS

Available in

Bangalore, Mysore & Talakad

0.5 Acre to 33 acres for School, University, 5 Star Hotel, Resorts, Software Park, Agri Business, Warehouse, Tourism Etc. On; Rent, Lease, JV, BTS, Investment.

VILLA- FARM PLOTS- ON BULK SALE

Email: mga65dev@gmail.com

Mob: +91 97311 87809



RENT/SALE

PRIME PROPERTY

200 Meters FROM GLOBAL TECH PARK, RR NAGAR

COMMERCIAL BUILDING 13000+ Sq.ft

RENTAL: 4.8 LAKHS / Per Month

SALE PRICE: 7.8 Crores

Call: 7760038250 | 9900596322

VAIBHAV CITY

BMRDA ಅನುಮೋದನೆ ಆದ 'A' ಖಾತಾ ನಿವೇಶನಗಳು

ನೆಲಮಂಗಲದಲ್ಲಿ ಮನೆ ನಿರ್ಮಾಣಕ್ಕೆ ಅತ್ಯುತ್ತಮ ಸೈಟುಗಳು

ನೆಲಮಂಗಲ

ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿದೆ

ನೆಲಮಂಗಲದಿಂದ ಕೇವಲ ಒಂದು ಕಿಲೋಮೀಟರ್



- ನೋಂದಣಿಗೆ ಸಿದ್ಧವಾಗಿದೆ
- ಮನೆ ಕಟ್ಟಲು ಸೂಕ್ತವಾಗಿದೆ
- ಬ್ಯಾಂಕಿನಿಂದ ಸಾಲ ಸೌಲಭ್ಯ
- ಲೇಔಟ್ ಅಭಿವೃದ್ಧಿಗೊಂಡಿದೆ

Site Dimensions: 30x40, 30x50

ಸೌಕರ್ಯಗಳು: ಬೀದಿ ದೀಪದೊಂದಿಗೆ ವಿದ್ಯುತ್ ಕಂಬಗಳು, ಡಾಂಬರ್ ರಸ್ತೆಗಳು, ಪ್ರತ್ಯೇಕ ನೀರಿನ ಸಂಪರ್ಕ, ರಸ್ತೆ ಬದಿ ಮರಗಳು, ಒಳಚರಂಡಿ ವ್ಯವಸ್ಥೆ.

ಹೆಚ್ಚಿನ ವಿವರಗಳಿಗಾಗಿ ಕರೆ ಮಾಡಿ 96064 42860



Dr. N. Ramaiah Institute of Education (R.)

GURUKULA VIDYA KENDRA SCHOOL

Ramagiri, Bettahalasur, Bangalore North Taluk - 562157.

AFFILIATED TO I.C.S.E. : KA417



Dr. N. Ramaiah
Chairman

ADMISSIONS OPEN FOR 2025-26

We care, we share and for the future we prepare





We believe ...

- Providing quality education to our children
- We have ever evolving curricular and co-curricular activities
- Inculcating values of humanness, moral integrity and religious diversity in our students
- Stressing on the holistic development of each child
- We are a school that strives in academic, sporting & artistic pursuits
- Growing by learning is our way of learning

FACILITIES

- School Transport
- Sports
- Dance
- Labs
- AV Room
- Yoga
- Music
- Art & Craft
- Mentoring
- Library

OUR OBJECTIVES

- Learning through Innovation
- Pursuing Excellence
- Growing by learning



X-ICSE March 2023 & 2024 Result : 100%

Contact : 96325 85077 / 8197817779

: dnr.gvkramagiri@gmail.com

: http//ka417cisce.org

SCAN FOR WEBSITE LINK

Ramagiri, Bettahalasur, Bangalore North Taluk - 562157. (Near to Dravid Padukone Centre for Sports Excellence)

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Sites

Anjanapura

SALE 50X80 Commercial-Site Anjanapura 8th-Block on 80ft Road North`Facing &`50x80 Residential Site Anjanapura 40ft Road South`Facing Call:9980978986

ANJANAPURA 10TH block BDA 40x60 Site for Sale, ready for Construction (Owner meeting) Contact: 9845535348

ANJANAPURA BDA Sites For Sale, 1st Block, 20x30, W/F, Price 63 Lakhs Negotioble: 9740150364 /8884707773

20'X30' BDA Site for sale in Anjanapura 5th 'G' Block ,for immediate registration 68L,Direct:9008716584

Airport Road

"SALE 40X60 North East Corner`Site 60`feet`Road BIAAPA approved ₹1.44`Crore, before International Airport opp.KIADB Aero`Park "Sri.Ganesh Estate"- 9845286505"

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

WANTED ANJANAPURA Banashankari 6th Stage JPNagar Near Kanakapura Road Any Measurement Immediate Settlement Call: 9964627255

SITE FOR SALE: BANASHANKARI 6th Stage 3rd Block, 30x40 North Facing, Site.#2011, Price 13500/-Sqft. Call: Owner. 9740148870.

SITE FOR`SALE IN BANASHANKARI 6th STAGE 4TH 'B' BLOCK 40x60 WEST FACING 2.05Cr. CONTACT- 9535575774

Bannerghatta Road

BANNERGHATTA ROAD, Hulimavu, North facing Residential 40x40 E-Katha BBMP near Raghavendra Swamy Math 1,84,00,000/-, 9739995042

BANNERAGATTA ROAD Nandanavana Layout 30x40, 40x60, 50x80 Rs 3500/- to 5000/- Psft BROCKERS EXCUSE: 9449655947

Basavanagudi

48X37 PLUS common passage. Site for sale Total 1904 sqft, East facing, Back portion, VVPuram, Basavanagudi. Only Genuine buyers Contact: 9148711123

Intl Airport Road

30x40 Converted Plots @ 2,50,000/-
208/- per sq.ft, 90 minutes Journey from Yelahanka
Clear Documents | Ready for Registration
9343510635 | 9010559539

Jayanagar

40X60 WEST Facing Site for Sale Jayanagar`1st Block, Madhavan`Park. Naveen-9611880033. Brokers`Excuse

JAYANAGAR 8TH Block 30x50 East, No.625, Sale 35,000/- Sft. Behind Prabha Eye Hospital, Krishna- 9845059328

SALE SITE 50x60 4th Block Jayanagar Purely Residential Contact: 9611844667 8123515830

J P Nagar

PROPERTY FOR Sale In JPNagar 7th Phase Adjoining RBI Layout 1860sqft South West Corner 9880175555

Kengeri

BDA 50X80 East Facing Commercial Property on Kengeri Railway Station Road Prime Location Genuine Buyers Contact: 9148514646

SITE FOR SALE W/F 30X40 CLEAR TITLES E-KHATA NEAR NEW ORCHID SCHOOL KOMMAGHATTA CONTACT: 9945191143

Basaweshwaranagar

40×60 BASVESHWARNAGAR 30×41 Rajajinagar, 50×75 Malleshwapur, 80×100 Race Course Road Site's Residential, Commercial Sale: 8660075308

Kanakapura Road

SITE FOR SALE Judicial Layout Thalagattpura 30x40 North`East and North West`Corner BBMP A katha 30`Feet Road. Call: 9341050991/ 9740148870.

30X40 W/F BDA SITE JP.Nagar 9th Phase, 5th A Block. Rs.13,250 per Sqft. Negotiable. Call: Dr.Roopak. 9880299011.

Kempegowda Layout

KEMPEGOWDA LAYOUT BDA, 40x60 East 5th Block M Sector Near Metro Station 100 ft Road: 9731594565/ 9663005859

NADAPRABHU KEMPEGOWDA LAYOUT 8th Block 40X60 East Facing, Arkavati Layout alternate site sale. Contact: 9686469799

KEMPEGOWDA LAYOUT, COMMERCIAL BDA SITE FOR SALE 20x30, 30x40, 40x60, 50x80, Contact Kumar: 9945119449

NADAPRABHU KEMPEGOWDA layout, Sir M.Vishweshwaraiah. Sites for sale. 20x30,30x40, 40x60, 50x80. Manjunatha 9742568746, 9900701637.

Magadi Road

"BEL 2ND-STAGE 50x80 South facing Betterment A-Katha near Gandhi Park, Good Location, Brokers Excuse. 9845408408"

40×50 NORTH-EAST Corner, Site for Sale, Tavarekere 'Raynold Gardens'. Genuine Buyers only Contact: 9845502228, 9844918445

Malleshwaram

MALLESHWARAM 40X80 site for sale with building North facing 5th Cross Maruthi Extension Near Malleshwaram Railway Station Call 8660065216

Nagarabhavi

NAGARABHAVI RHCS LAYOUT 2nd Stage BDA Approved 30x60 East Facing 40' Road 12500/- PSft: 9845488488

"40X60 NORTH Facing Site sale at Vinayaka Layout (Near`Bande Maarama Temple) 40`feet wide Road. 9880031654"

SITE FOR SALE AT NAGARBHAVI 40x60 SQFT NORTH FACING CONTACT: 94483 77834 NO BROKERS PLEASE

Nelamangala

RASHI SPLENDOUR, 50X80 NORTH WEST CORNER, BIAAPA APPROVED SITE FOR SALE, GATED COMMUNITY, CLUB HOUSE WITH SWIMMING POOL, BUYERS ONLY CONTACT 9902052259

North

30X40 SITE for sale, Baba layout, Dwarakanagar, Near Brindavan college, 10,000/- per sqft. Negotiable. Contact:- 8466822113, 9632440841

Rajajinagar

PRIME LOCATION Premium_Property FOR SALE in West of Chord Road, 45X85 West'facing, Rs.35000/Sqft More Details Call: 9538679777

Rajarajeshwari Nagar

SALE 30X40 West Facing 40feet Road-@ RR Nagar Kenchenahalli Remco Layout`16000 Per`sft Genuine-Buyers Call: Aaradhana Properties: 9980659543

MYLASANDRA 40X66 2 adj plot for Sale Krishna County Layout, W/F, Rate 11800/-sqft near BEML 7th stage (broker excuse) Call: 9886519864.

UNIVERSITY LAYOUT Rajarajeswari Nagar 30x40 SF Behind RR Nagar Police Station 17200/- Per Sqft: 9845488488

Vijayanagar

SITE FOR_SALE 30x45 North`Facing @_Vijayanagar Marenahalli @_Good Location Price 19000/- Sqft Negotiable 7676900174 9945569909

Vishweshwariah Layout

"30X38 RESIDENTIAL BBMP_SITE SALE ARUNACHALAM LAYOUT NEAR_100_FEET ROAD VISHWESHWARAIH LAYOUT. (OWNER)- 9845143579"

AVAILABLE, VISHWESHWARAIAH Layout, 6th Block, No.129, 30x40, East Facing Near KEL Collage, Owner: 9845062822/ 8660751684

VISHWESHWARAIA LAYOUT 40x60 BDA SITE Sale East Facing 40 Feet Road Developed Area Buyers. Contact: 9035470616

"VISHVESWARAIAH LAYOUT 6th Block near KLE Law College 40x60 North 100%`Vastu, 90%`White. 7022218837

DIRECT OWNER #1340, 30x40 BDA Site Sale VISHVESWARAIAH LAYOUT BLOCK-2, Close to 100'ft Road. 9742681666

"VISHVESWARAIAH LAYOUT 6th-Block 30x40 East facing Site 40'feet Road for sale. 9886294610 (Brokers Excuse)"

Mysore

MYSORE KBL SILICON CITY PH3 SITES SALE EAST WEST FACING 30X45 30X50 REASONABLE RATES CHANDRU 9844754873



ನ್ಯಾಷನಲ್ ಸಿಲ್ಕ್ ಎಕ್ಸ್ ಪೋ

ನೈಸರ್ಗಿಕ ನಾರು ರೇಷ್ಮೆಯ ಪ್ರದರ್ಶನ ಮತ್ತು ಮಾರಾಟ

ಸಿಲ್ಕ್, ಕಾಟನ್ ಸೀರೆ | ಡಿಸೈನ್ & ಸಾಂಪ್ರದಾಯಿಕ ಉಡುಗೆ | ಕುರ್ತಿ | ಫ್ಯಾಬ್ರಿಕ್ | ಇನ್ನೂ ಹಲವು

ಕೊನೆಯ 4 ದಿನಗಳು Time: 11am to 9pm

UP TO 50% DISCOUNT BY WEAVERS

ಹೊಸ ಹಾಗೂ ಇತ್ತೀಚಿನ ವೈವಿಧ್ಯಮಯ ವಿನ್ಯಾಸಗಳೊಂದಿಗೆ ಮದುವೆಯ ವಿಶೇಷ ಸಂಗ್ರಹ

ಭಾರತದಾದ್ಯಂತದ 150+ ಅಧಿಕೃತ ನೇಯ್ಗೆ ತಜ್ಞರಿಂದ ತಯಾರಿಸಿದ ಶುದ್ಧ ರೇಷ್ಮೆ ಮತ್ತು ಹತ್ತಿ ಸೀರೆಗಳು

ಬನಾರಸ್ ಸಿಲ್ಕ್, ಜಾಮದನಿ, ಲಕ್ನೋ ಚಿಕಾನ್, ಕಾಂಚಿಪುರಂ, ಬಿಹಾರ್ ಟಸ್ಸಾರ್ ಮತ್ತು ಮಟ್ಕಾ ಸಿಲ್ಕ್, ಚತ್ತೀಸ್‌ಗಢ್ ಕೊಸಾ ಸಿಲ್ಕ್, ಗುಜರಾತ್ ಪಟೋಲಾ ಮತ್ತು ಬಾಂಧಿನಿ, ಪಶ್ಚಿಮ ಬಂಗಾಳದ ಬಯಾಲು, ಬಲೂಚರಿ, ಢಕಾಯಿ ಜಾಮದನಿ, ಬಲುಚರಿ, ಕಾಂತಾ ಮತ್ತು ಹ್ಯಾಂಡ್ ಪ್ರಿಂಟೆಡ್ ಸಿಲ್ಕ್, ಧರ್ಮಾವರಂ, ಪೈಥಾನಿ, ಚಾಂದೇರಿ, ಎರಿ (ಅಹಿಂಸಾ) ಸೀರೆ, ಶಿಬೋರಿ & ಅಜ್ರಾಕ್ ಪ್ರಿಂಟ್, ಹ್ಯಾಂಡ್ ಕಲಾಂಕರಿ, ರಾಜಸ್ಥಾನಿ ಬಾಂಧಿನಿ, ಬ್ಲಾಕ್ ಪ್ರಿಂಟ್, ಡ್ರೆಸ್ ಮಟೇರಿಯಲ್ & ದೇಶಾದ್ಯಂತದ ಇನ್ನೂ ಅನೇಕ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ

ಸಿಂಧೂರ್ ಕನ್ವೆನ್ಷನ್ ಸೆಂಟರ್
15ನೇ ಕ್ರಾಸ್, ಸಾರಕ್ಕಿ 1ನೇ ಹಂತ, ಜೆ.ಪಿ.ನಗರ, ರಿಂಗ್ ರಸ್ತೆ, ಬೆಂಗಳೂರು

M: 9412258826 | ENTRY FREE | ALL UPI ONLINE / DEBIT & CREDIT CARDS ACCEPTED

Bidadi

BMICPA RERA Approved, just 100 meter from Bangalore to Mysore Highway, wonderla Gate 2424 Sqft Site, E/F, price 5000/- 8970924123/ 9148553232

Flat

Banashankari

GURURAJA LAYOUT Near Devegowda Petrol Bunk, New Luxury 4 BHK FLATS Sale, Ready to move. Call: 9449353535.

Chandra Layout

FLATE_FOR SALE @_CHANDRA LAYOUT VIJAYNAGAR 3_BHK NEW FLATE BDA PROPERTY GOOD LOCATION CONTACT: 98455-55666

Kaggadasapura

2 BHK Flat for Sale N/F with car park. Rs. 50L Negotiable. 9663571535. Prime Location.

Kanakapura Road

NEW FLATS For Sale. Kanakapura Road near Forum Mall, Swimming Pool, Club house, Anika Projects. Sowmya:- 9611131423.

FLATS FOR Sale Near Metro Stations, Kanakapura Road. Price Starts from 35 Lakhs. Sarakki Homes, 9663676464.

Commercial Land

East

LAND FOR Sale, Narasapura: 55 Guntas, strategically located 2 kilometers towards Narasapura Junction and a mere 300 feet off the Bengaluru-Tirupati Highway. Features include a 40-foot concrete access road and placement within a thriving, free-zone development. Versatile land suitable for warehouses, industries, apartments, or gated communities. Contact 9342523586.

Magadi Road

COMMERCIAL SITE. Andrahalli, North West corner, 60ft Road, 1955 sqft, 8200 psqft negotiable. 9845720810/ 9060406631

Out-Station

FOR SALE
A prime commercial open plot measuring 9,562 Sq. Ft. (Approx) with compound near KLE's Suchiray Hospital, Airport Road, Hubli
Contact :
9844095664

Commerical

Jayanagar

SALE COMMERCIAL 30x40 Jayanagar 9th Block With Building Excellent Location Contact: 9844134068 8073859758

J P Nagar

J.P.NAGAR,_100' Ring_Road OC/CC Commercial Rental income Building, Prime`location 60x92_North facing 20000sft. Built-Up Area,`Sale 26,00,00,000/- -9845000299.

General

Multiple Locations


FOR ALL REAL ESTATE SOLUTIONS, A LEADING 35 YEARS EXPERIENCED REAL ESTATE COMPANY CONTACT VICTORY PROPERTIES, 7411692219/ 8618576685, info@victoryproperties.in, www.victoryproperties.in

Joint Development

General

INVEST IN REAL ESTATE PROPERTIES, BANGALORE SOUTH AND HAROHALLI SURROUNDING, WITH GOOD RETURNS CONTACT VICTORY PROPERTIES 861856685/ 7411692219, www.victoryproperties.in info@victoryproperties.in

MINI GEMS MUSEUM



FOR SALE
56 YEARS COLLECTION OF NATURAL REAL PRECIOUS & SEMI PRECIOUS GEMS / MINERAL SPECIMENS / STONE CURIOS / ANIMALS / BIRDS
GEMS STUDDED SILVER JEWELLERY OLD COINS & NOTES
No. 57, Khazi Street (Near Masjid) Basavanagudi, Bengaluru - 04 Email: gemexgeo@gmail.com
Contact:
98454 99425 / 080 - 4989 4924

Farm House/ Land/ Resorts

East

LAND FOR Sale, Narasapura: 55 Guntas, strategically located 2 kilometers towards Narasapura Junction and 300 feet off the Bengaluru-Tirupati Highway. 40 feet concrete access road and placement within a thriving, free- zone development. Versatile land suitable for warehouses, industries, apartments, or gated communities. Contact: 9342523586.

REAL ESTATE BUYING

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

BDA-SITE WANTED @_Banashankari 6th Stage any Block 30x40, 40x60, 50x80 Immediate Settlement Contact: 98455-55666

Kanakapura Road

WANTED SITE 30x40, 40x60 Anjanapura`BDA, Banashankari 6th`Stage, JCHS, BCCHS, BCMC Balaji_Layout, Gubblala NarayanaNagar Vajarahalli. Call: 9663454878

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

REQUIRED EAST/ North Plots, 2400sqft RR Nagar, Poornaprajna Layout, Bharath Housing Co-Operative Society, Jayanagar Housing Co-Operative Society, Only Genuine Owner/ Seller Call: 9845188137.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

Malleshwaram

MALLESWARAM- PROPERTY wanted for outright purchase. Lokapriya-9845162933

Farm House/ Land/ Resorts

Out-Station

WANTED 70 TO 100 ACRES GOOD YIELDING COFFEE ESTATE AROUND MADIKERE, CHICKMANGLUR, SAKLESHPUR. CALL: 9845034688


CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH | ಪ್ರಜಾವಾಣಿ

https://dhclassifieds.com

Book your Ad in 4 Easy Steps --Select Category-- Book ad

1 Select Category 2 Publication & Date 3 Compose Your Ad 4 Payment



ಖರೀದಿಸಿ ಅಥವಾ ಮಾರಾಟ ಮಾಡಿ

ಯಾವುದೇ ಸಮಯದಲ್ಲಿ, ಯಾವುದೇ ಸ್ಥಳದಿಂದ ಕೇವಲ ನಾಲ್ಕೇ ಕ್ಲಿಕ್ ಗಳಲ್ಲಿ

ಸುಲಭವಾಗಿ ಖರೀದಿಸಿ, ಮಾರಾಟ ಮಾಡಿ ಅಥವಾ ಉದ್ಯೋಗ ನೇಮಕಾತಿ ಮಾಡಿಕೊಳ್ಳಿ! ಯಾವುದೇ ಸೇವೆ ಪಡೆಯಬೇಕೆ, ವಸ್ತು ಖರೀದಿಸಬೇಕೆ, ಆಸ್ತಿ ಮಾರಾಟ ಮಾಡಬೇಕೆ ಅಥವಾ ಸೂಕ್ತ ಅಭ್ಯರ್ಥಿಗಳೊಂದಿಗೆ ಸಂಪರ್ಕ ಸಾಧಿಸಬೇಕೆ?

ಕರ್ನಾಟಕದ ಅತ್ಯಂತ ವಿಶ್ವಾಸಾರ್ಹ ದಿನಪತ್ರಿಕೆಗಳಾದ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿಯಲ್ಲಿ ವರ್ಗೀಕೃತ ಜಾಹೀರಾತು ನೀಡುವ ಮೂಲಕ ಖರೀದಿದಾರರು, ಸೇವೆಗಳು ಅಥವಾ ಪ್ರತಿಭಾವಂತರೊಂದಿಗೆ ಸುಲಲಿತವಾಗಿ ಸಂಪರ್ಕ ಹೊಂದಿರಿ. ರಾಜ್ಯದಾದ್ಯಂತ ಸೂಕ್ತರಾದವರೊಂದಿಗೆ ಸಂಪರ್ಕ ಸಾಧಿಸಲು ಸಮರ್ಥ ವೇದಿಕೆ ಡೆಕ್ಕನ್ ಹೆರಾಲ್ಡ್ & ಪ್ರಜಾವಾಣಿ ವರ್ಗೀಕೃತ ಜಾಹೀರಾತು!

- ತಕ್ಷಣವೇ ಜಾಹೀರಾತು ಪ್ರಕಟಣೆ ಹಾಗೂ ಸರಾಗ ಬ್ರೌಸಿಂಗ್
- ಯಾವುದೇ ಸ್ಥಳದಿಂದ ಯಾವುದೇ ಸಮಯದಲ್ಲಿ ಖರೀದಿ ಹಾಗೂ ಮಾರಾಟ
- ಸರಳ, ಸುರಕ್ಷಿತ ಹಾಗೂ ಸುಗಮ ಪ್ರಕ್ರಿಯೆ
- ಕರ್ನಾಟಕದಾದ್ಯಂತ ಸೂಕ್ತರಾದವರನ್ನು ತಲುಪಿ

ಈಗ ಬುಕ್ ಮಾಡಿ. ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ ಹಾಗೂ ಅತ್ಯುತ್ತಮ ವ್ಯವಹಾರವನ್ನು ಇಂದೇ ನಿಮ್ಮದಾಗಿಸಿಕೊಳ್ಳಿ!

COLLATERAL

MORE Classifieds IN MAIN ISSUE

DH Classifieds More value, more impact | ಪ್ರಜಾವಾಣಿ

REAL ESTATE

BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY

@ 2481/-* FOR 15 WORDS



www.dhclassifieds.com BOOK NOW

Book your ad with us now! For more details contact:
+91 9845114560 | +91 9886213331
+91 9731810277 | +91 9900428036 | 080-45557163/164

*Conditions apply

ಭಾನುವಾರ, ಏಪ್ರಿಲ್ 13, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 102 | ಪುಟ 18

www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಬೇಡರ ವೇಷ...
ಶಿರಸಿ ತಾಲ್ಲೂಕಿನ ಬನವಾಸಿಯಲ್ಲಿ ಕದಂಬೋತ್ಸವ ಅಂಗವಾಗಿ ನಡೆದ ಕಲಾ ತಂಡಗಳ ಮೆರವಣಿಗೆಯಲ್ಲಿ ಬೇಡರ ವೇಷದಲ್ಲಿ ಕಲಾವಿದ

ತೆಲಂಗಾಣದ 'ಟ್ರೀ ಮ್ಯಾನ್' ರಾಮಯ್ಯ ನಿಧನ 5

ದೆಹಲಿ: ಪ್ರತಿಕೂಲ ಹವಾಮಾನ–ಪ್ರಯಾಣಿಕರ ಪರದಾಟ

ಸೇನಾಧಿಕಾರಿ ಹುತಾತ್ಮ, ಉಗ್ರರ ಹತ್ಯೆ 5

450 ವಿಮಾನ ಸಂಚಾರ ವ್ಯತ್ಯಯ 7

ಜಾತಿಗಣತಿ ಅಧ್ಯಯನ ವರದಿಯಲ್ಲಿ ಶಿಫಾರಸು • ಅಲೆಮಾರಿ, ಅರೆ ಅಲೆಮಾರಿಗಳಿಗೆ ಆಘಾತ

ಪ್ರವರ್ಗ '1 ಎ'ಗೆ ಕೆನೆಪದರ ನೀತಿ

• ವೈ.ಗ. ಜಗದೀಶ್

ಬೆಂಗಳೂರು: ಅಲೆಮಾರಿ ಹಾಗೂ ಅಲೆಮಾರಿ ಗುಣಲಕ್ಷಣಗಳಿರುವ ಅತ್ಯಂತ ಹಿಂದುಳಿದ 147 ಜಾತಿಗಳಿಗೆ ಕೆನೆಪದರ ನೀತಿ ಅನ್ವಯಿಸಬೇಕು ಹಾಗೂ ಆದಾಯ ತೆರಿಗೆಯ ಮಿತಿಯನ್ನು ಅಳವಡಿಸಬೇಕು ಎಂದು ಕೆ. ಜಯಪ್ರಕಾಶ್ ಹೆಗ್ಡೆ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗ ತನ್ನ ಶಿಫಾರಸಿನಲ್ಲಿ ಹೇಳಿದೆ.

ಎಚ್.ಕಾಂತರಾಜ ನೇತೃತ್ವದ ಆಯೋಗವು ನಡೆಸಿದ್ದ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷೆಯ ಮಾಹಿತಿ ಆಧರಿಸಿ, ಜಯಪ್ರಕಾಶ್ ಹೆಗ್ಡೆ ನೇತೃತ್ವದ ಆಯೋಗವು ಸಿದ್ಧಪಡಿಸಿರುವ '2015 ದತ್ತಾಂಶ ಅಧ್ಯಯನ ವರದಿ 2024'ರಲ್ಲಿ ಈ ಶಿಫಾರಸು ಇದೆ. ಮುಚ್ಚಿದ ಲಕೋಟೆಯಲ್ಲಿ ಆಯೋಗ ಸಲ್ಲಿಸಿದ್ದ ವರದಿಯನ್ನು ಶುಕ್ರವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ, ತೆರೆದು ಮಂಡನೆ ಮಾಡಲಾಗಿತ್ತು. ಅದರ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ವರದಿಯ ಅಧ್ಯಾಯ–6ರಲ್ಲಿ (ಪುಟ 173) ಪ್ರವರ್ಗ 1 ಎ ಪಟ್ಟಿಯಲ್ಲಿ ಜಾತಿಯವರಿಗೆ 'ಕೆನೆಪದರ ನೀತಿ' ಜಾರಿ ಮಾಡುವುದು ಅತ್ಯಗತ್ಯ ಎಂದು ಪ್ರತಿಪಾದಿಸಲಾಗಿದೆ. ಇಲ್ಲಿಯವರೆಗೆ ಪ್ರವರ್ಗ '1 ಎ' ಎಂಬ ಪಟ್ಟಿ ಇರಲಿಲ್ಲ. ಇದೇ ಮೊದಲ ಬಾರಿಗೆ, ಪ್ರವರ್ಗ '1' ಹಾಗೂ ಪ್ರವರ್ಗ '2 ಎ'ಗಳಲ್ಲಿರುವ ಜಾತಿಗಳಲ್ಲಿ ಅತ್ಯಂತ ಹಿಂದುಳಿದ ಎಂದು ಮರುವರ್ಗೀಕರಿಸಲಾಗಿದೆ. ಅವುಗಳ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಹಿನ್ನೆಲೆ ಹಾಗೂ ಆಯಾ ಜಾತಿಗಳ ಅಸ್ಮಿತೆ ಹಾಗೂ ಗುಣಲಕ್ಷಣಗಳನ್ನು ಆಧರಿಸಿ ಪ್ರವರ್ಗ '1 ಎ' ಹಾಗೂ ಪ್ರವರ್ಗ '1 ಬಿ' ಎಂದು ಮರುವರ್ಗೀಕರಿಸಲಾಗಿದೆ. ಜತೆಗೆ, ಪ್ರವರ್ಗ '2 ಎ'ಯನ್ನು ಉಳಿಸಿಕೊಳ್ಳಲಾಗಿದ್ದು, ಕೆಲವು ಜಾತಿಗಳನ್ನು ಕೈಬಿಟ್ಟು, ಕೆಲವನ್ನು ಸೇರ್ಪಡೆ ಮಾಡಲಾಗಿದೆ.

ಇನ್ನೂ ಅಲೆಮಾರಿ, ಅರೆ ಅಲೆಮಾರಿ ಗುಣ ಲಕ್ಷಣಗಳನ್ನು ಹೊಂದಿರುವ, ಕುಲಕಸುಬು ಹಾಗೂ ಹೈನುಗಾರಿಕೆಯನ್ನು ನೆಚ್ಚಿಕೊಂಡಿರುವವರೇ ಪ್ರವರ್ಗ '1 ಎ' ಪಟ್ಟಿಯಲ್ಲಿದ್ದಾರೆ. ಶಿಕ್ಷಣ ದೊರೆತ ಕಾರಣಕ್ಕೆ ಕೆಲವರು ಸರ್ಕಾರಿ ಉದ್ಯೋಗವನ್ನು ಪಡೆದಿದ್ದಾರೆ. ಅದೊಂದೇ ಕಾರಣ ಮುಂದಿಟ್ಟುಕೊಂಡು, ಪ್ರವರ್ಗ '1ಎ'ಯ ಪಟ್ಟಿಯಲ್ಲಿರುವ ಜಾತಿಯವರಿಗೆ ಕೆನೆಪದರ ಅನ್ವಯಿಸಬೇಕು ಎಂದು ಶಿಫಾರಸು ಮಾಡಿರುವುದು, ವಿವಾದಕ್ಕೆ ಕಾರಣವಾಗುವ ಸಾಧ್ಯತೆ ಇದೆ. ಅಲ್ಲದೇ, ಅತ್ಯಂತ ಹಿಂದುಳಿದ ಪಟ್ಟಿಯಲ್ಲಿರುವ ಸಮುದಾಯಕ್ಕೆ ಆಘಾತಕಾರಿಯಾಗಲಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

5ನೇ ಪುಟ ನೋಡಿ

ಆಯೋಗ ಶಿಫಾರಸು ಮಾಡಿದ ಮರುವರ್ಗೀಕರಣದ ವಿಧ

ಪ್ರವರ್ಗ	ಒಟ್ಟು ಜನಸಂಖ್ಯೆಯಲ್ಲಿ ಶೇಕಡಾವಾರು	ಶೇಕಡಾವಾರು ಮೀಸಲಾತಿ
ಪ್ರವರ್ಗ 1ಎ	8.40	06
ಪ್ರವರ್ಗ 1ಬಿ	17.74	12
ಪ್ರವರ್ಗ 2ಎ	18.70	10
ಪ್ರವರ್ಗ 2ಬಿ	18.08	08
ಪ್ರವರ್ಗ 3ಎ	17.53	07
ಪ್ರವರ್ಗ 3ಬಿ	19.55	08

ಒಬಿಸಿ ಬಿಟ್ಟು ಉಳಿದ ಜಾತಿ	ಜನಸಂಖ್ಯೆ
ಪರಿಶಿಷ್ಟ ಜಾತಿ	1,09,29,347
ಪರಿಶಿಷ್ಟ ಪಂಗಡ	42,81,289
ಸಾಮಾನ್ಯ ವರ್ಗ	29,74,153

'ಅತ್ಯಂತ ಹಿಂದುಳಿದ' ಪ್ರವರ್ಗಕ್ಕೆ 'ಕುರುಬ'

• ರಾಜೇಶ್ ರೈ ಚಟ್ಲ

ಬೆಂಗಳೂರು: ಹಿಂದುಳಿದ ವರ್ಗಗಳ ಆಯೋಗವು ಸಲ್ಲಿಸಿರುವ ವರದಿಯಲ್ಲಿ ಕುರುಬ ಮತ್ತು ಉಪಜಾತಿಗಳು, ಸವಿತ, ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿರುವ ಪರಿಶಿಷ್ಟ ಜಾತಿಗಳನ್ನು 'ಅತ್ಯಂತ ಹಿಂದುಳಿದ' ಎಂದು ಮರುವರ್ಗೀಕರಣ ಮಾಡಿ, ಪ್ರವರ್ಗ 1ಬಿ ಎಂದು ಗುರುತಿಸಿದೆ. ಈ ಪ್ರವರ್ಗದಲ್ಲಿ ಒಟ್ಟು 387 ಜಾತಿಗಳನ್ನು ಆಯೋಗವು ಪಟ್ಟಿ ಮಾಡಿದೆ. ಈ ಹಿಂದೆ ಕುರುಬ ಮತ್ತು ಉಪ ಜಾತಿಗಳು ಮತ್ತು ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿರುವ ಪರಿಶಿಷ್ಟ ಜಾತಿಗಳು 'ಪ್ರವರ್ಗ 2ಎ' ಪಟ್ಟಿಯಲ್ಲಿ ಇದ್ದವು. ಆಯೋಗವು ತನ್ನ ವರದಿಯಲ್ಲಿ ಪ್ರತಿಯೊಂದು ಜಾತಿ, ಸಮುದಾಯಗಳ ಜನಸಂಖ್ಯೆ ಮತ್ತು ಪ್ರವರ್ಗವಾರು ವರ್ಗೀಕರಣ ಪಟ್ಟಿಯನ್ನು ನೀಡಿದೆ.


ಜಾತಿ, ಸಮುದಾಯಗಳ ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವಿಕೆಯನ್ನು ನಿರ್ಧರಿಸಲು ವಿವಿಧ ಮಾನದಂಡಗಳನ್ನು ಆಯೋಗ ಬಳಸಿದೆ. ಸಾಮಾಜಿಕ ಸೂಚಕಗಳು (ಸಾಮಾಜಿಕವಾಗಿ ಹಿಂದುಳಿದವರು), ಸಾಂಪ್ರದಾಯಿಕ ಕಸುಬುಗಳು, ವಾಸಸ್ಥಳ, ವಸತಿಸೌಕರ್ಯಗಳು, ಅಸಂಘಟಿತ ವಲಯಗಳಲ್ಲಿ ಕೆಲಸದಲ್ಲಿ ಭಾಗವಹಿಸುವಿಕೆ, ವಿವಾಹ ಸಮಯದ ವಯಸ್ಸು, ಅಡುಗೆಗೆ ಬಳಸುವ ಇಂಧನ, ಶೌಚಾಲಯ, ಬೆಳಕಿನ ವ್ಯವಸ್ಥೆ, ಅಲೆಮಾರಿ, ಅರೆ ಅಲೆಮಾರಿ ಜನಸಂಖ್ಯೆ ಈ ಎಲ್ಲವುಗಳಿಗೆ ಒಟ್ಟು 100 ಅಂಕ ನಿಗದಿ ಮಾಡಲಾಗಿದೆ.

5ನೇ ಪುಟ ನೋಡಿ

ಸಾಕಾರವಾಗದ ಸ್ವಚ್ಛಭಾರತ

ಒಳನೋಟ

• ಜಿ.ಬಿ.ನಾಗರಾಜ್



ಮೈಸೂರು ತಾಲ್ಲೂಕಿನ ಸಿದ್ದಲಿಂಗಪುರ ಗ್ರಾಮ ಪಂಚಾಯಿತಿಯ ಘನ ತ್ಯಾಜ್ಯ ಸಂಪನ್ಮೂಲ ನಿರ್ವಹಣ ಘಟಕದ ಪಕ್ಕ ಬಿದ್ದಿದ್ದ ಕಸದ ರಾಶಿ ಪ್ರಜಾವಾಣಿ ಚಿತ್ರ

ದಾವಣಗೆರೆ: ಘಂಟೆಯ ಸದ್ದು ಕಿವಿಗೆ ಬೀಳುತ್ತಿದ್ದಂತೆಯೇ ಮಹಿಳೆಯರು ಕಸದ ಬುಟ್ಟಿಗಳನ್ನು ಹಿಡಿದು ಮನೆಯಿಂದ ಹೊರಬರುತ್ತಿದ್ದರು. ಎಲೆಕ್ಟ್ರಿಕ್ ವಾಹನವನ್ನು ಮಗ ಚಾಲನೆ ಮಾಡುತ್ತಿದ್ದರೆ ತಾಯಿ ಕಸ ಸಂಗ್ರಹಿಸುತ್ತಿದ್ದರು. ದಾವಣಗೆರೆ ತಾಲ್ಲೂಕಿನ ಕೈದಾಳೆ ಗ್ರಾಮದಲ್ಲಿ ನಿತ್ಯವೂ ನಡೆಯುತ್ತಿದ್ದ ಈ ಕಾಯಕ ಈಗ ಸಂಪೂರ್ಣ ಸ್ಥಗಿತಗೊಂಡಿದೆ.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ಐ.ಸಿ. ವಿದ್ಯಾವತಿ ಜಿಲ್ಲೆಯಲ್ಲಿ ಮೊದಲ ಬಾರಿಗೆ ಕೈದಾಳೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಸ ಸಂಗ್ರಹಕ್ಕೆ ಮುನ್ನುಡಿ ಬರೆದಿದ್ದರು. ಮೂರು ವರ್ಷ ನಿರಂತರವಾಗಿ ನಡೆದ ಈ ಕಾಯಕದ ಫಲವಾಗಿ 'ಗಾಂಧಿ ಗ್ರಾಮ ಪುರಸ್ಕಾರ' ಅರಸಿ ಬಂದಿತ್ತು. ಪಿಡಿಒ ಬೇರೆಡೆ ವರ್ಗಾವಣೆಯಾದ ಬಳಿಕ ಮನೆ–ಮನೆ ಕಸ ಸಂಗ್ರಹ ಕಾರ್ಯ ಅಲ್ಲಿಗೇ ನಿಂತುಹೋಯಿತು.

ಮೈಸೂರು ತಾಲ್ಲೂಕಿನ ನಾಗಾವಲ ಗ್ರಾಮ ಪಂಚಾಯಿತಿಯಲ್ಲಿ 'ಸ್ವಚ್ಛ ಭಾರತ ಮಿಷನ್' (ಗ್ರಾಮೀಣ) ಯಶಸ್ವಿ ಆಗಿತ್ತು. ಪಿಡಿಒ ಡಾ.ಎಂ. ಶೋಭಾರಾಣಿ ಕಾಳಜಿಯಿಂದಾಗಿ ಕಸ ಸಂಗ್ರಹ ಹಾಗೂ ವಿಲೇವಾರಿ ಅತ್ಯುತ್ತಮವಾಗಿ ನಡೆದು ಗಮನ ಸೆಳೆದಿತ್ತು. ಅವರು ವರ್ಗಾವಣೆಯಾದ ಬಳಿಕ ಯೋಜನೆಯೂ ಕಳೆಗುಂದಿತು.

6ನೇ ಪುಟ ನೋಡಿ

ಪಶ್ಚಿಮ ಬಂಗಾಳ: ತಿದ್ದುಪಡಿ ಕಾಯ್ದೆ ವಿರೋಧಿಸಿ ಪ್ರತಿಭಟನೆ

ವಕ್ಫ್: ಹಿಂಸಾಚಾರಕ್ಕೆ 3 ಬಲಿ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಮುರ್ಶಿದಾಬಾದ್ ಜಿಲ್ಲೆಯಲ್ಲಿ ವಕ್ಫ್ (ತಿದ್ದುಪಡಿ) ಕಾಯ್ದೆ ವಿರುದ್ಧ ನಡೆಯುತ್ತಿರುವ ಪ್ರತಿಭಟನೆಗಳಿಗೆ ಸಂಬಂಧಿಸಿದ್ದು ಎನ್ನಲಾದ ಹಿಂಸಾಚಾರದಲ್ಲಿ ಮೂವರು ಮೃತಪಟ್ಟಿದ್ದಾರೆ.

ಶಂಷೇರ್‌ಗಂಜ್ ಪ್ರದೇಶದ ಜಾಫರಾಬಾದ್‌ನ ಮನೆಯೊಂದರಲ್ಲಿ ತಂದೆ ಹಾಗೂ ಮಗನ ಮೃತದೇಹ ಪತ್ತೆಯಾಗಿದೆ. ಅವರನ್ನು ಹರಗೋವಿಂದೊ ದಾಸ್ ಮತ್ತು ಚಂದನ್ ಎಂದು ಗುರುತಿಸಲಾಗಿದೆ. ಇಬ್ಬರ ದೇಹದಲ್ಲೂ ಇರಿತದ ಗಾಯಗಳು ಇವೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ. ಮೃತಪಟ್ಟ ಮೂರನೇ ವ್ಯಕ್ತಿಯನ್ನು 21 ವರ್ಷದ ಇಜಾಜ್ ಮೋಮಿನ್ ಎಂದು ಗುರುತಿಸಲಾಗಿದ್ದು, ಸೂತಿಯ ಸಜೂರ್ ಮೋರ್‌ನಲ್ಲಿ ನಡೆದ ಘರ್ಷಣೆಯಲ್ಲಿ ಗುಂಡೇಟಿಗೆ ಬಲಿಯಾಗಿದ್ದಾರೆ.

'ತಂದೆ ಮತ್ತು ಮಗ ತಮ್ಮ ಮನೆಯೊಳಗೆ ಬಿದ್ದಿದ್ದರು. ಸಮೀಪದ ಆಸ್ಪತ್ರೆಗೆ ಸಾಗಿಸಿದಾಗ ಇಬ್ಬರೂ ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದರು' ಎಂದು ಪೊಲೀಸರು ಹೇಳಿದ್ದಾರೆ. 'ಮನೆಯನ್ನು ಲೂಟಿ ಮಾಡಿರುವ ದುಷ್ಕರ್ಮಿಗಳು ಪರಾರಿಯಾಗುವಾಗ ಇಬ್ಬರಿಗೂ ಇರಿದಿದ್ದಾರೆ' ಎಂದು ಅವರ ಕುಟುಂಬದ ಸದಸ್ಯರು ಆರೋಪಿಸಿದ್ದಾರೆ.

7ನೇ ಪುಟ ನೋಡಿ

'ಕಣ್ಣು ಮುಚ್ಚಿರಲು ಸಾಧ್ಯವಿಲ್ಲ'

'ಇಂತಹ ಸಂದರ್ಭ ಎದುರಾದಾಗ ನಮಗೆ ಕಣ್ಣು ಮುಚ್ಚಿ ಕೂರಲು ಸಾಧ್ಯವಿಲ್ಲ' ಎಂದು ಹೇಳಿರುವ ಕಲ್ಕತ್ತ ಹೈಕೋರ್ಟ್, ಹಿಂಸಾಚಾರ ಪೀಡಿತ ಮುರ್ಶಿದಾಬಾದ್ ಜಿಲ್ಲೆಯಲ್ಲಿ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಯನ್ನು (ಸಿಎಪಿಎಫ್) ನಿಯೋಜಿಸುವಂತೆ ಪಶ್ಚಿಮ ಬಂಗಾಳ ಸರ್ಕಾರಕ್ಕೆ ಶನಿವಾರ ಆದೇಶಿಸಿದೆ.

ನ್ಯಾಯಮೂರ್ತಿಗಳಾದ ಸೌಮೇನ್ ಸೇನ್ ನೇತೃತ್ವದ ವಿಭಾಗೀಯ ಪೀಠವು, ಪರಿಸ್ಥಿತಿಯ ಬಗ್ಗೆ ವಿವರವಾದ ವರದಿ ಸಲ್ಲಿಸುವಂತೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಕ್ಕೆ ಸೂಚನೆ ನೀಡಿ ಮುಂದಿನ ವಿಚಾರಣೆಯನ್ನು ಏ.17ಕ್ಕೆ ನಿಗದಿಪಡಿಸಿದೆ. ಮುರ್ಶಿದಾಬಾದ್ ಜಿಲ್ಲೆಯಲ್ಲಿ ಕೇಂದ್ರೀಯ ಪಡೆಗಳನ್ನು ನಿಯೋಜಿಸುವಂತೆ ಕೋರಿ ಪಶ್ಚಿಮ ಬಂಗಾಳದ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ರಾಷ್ಟ್ರಪತಿಗೆ 3 ತಿಂಗಳ ಗಡುವು

ನವದೆಹಲಿ (ಪಿಟಿಐ): ಪರಿಶೀಲನೆಗಾಗಿ ರಾಜ್ಯಪಾಲರಿಂದ ಬಂದ ಮಸೂದೆಗಳ ವಿಚಾರವಾಗಿ ಮೂರು ತಿಂಗಳ ಅವಧಿಯಲ್ಲಿ ತೀರ್ಮಾನ ಕೈಗೊಳ್ಳಬೇಕು ಎಂದು ರಾಷ್ಟ್ರಪತಿಯವರಿಗೆ ಸುಪ್ರೀಂ ಕೋರ್ಟ್ ಕಾಲಮಿತಿ ನಿಗದಿ ಮಾಡಿದೆ.

ರಾಷ್ಟ್ರಪತಿಯವರ ಪರಿಶೀಲನೆಗಾಗಿ ಯಾವ ದಿನಾಂಕಕ್ಕೆ ಮಸೂದೆಯನ್ನು ಕಳುಹಿಸಲಾಗಿತ್ತೋ, ಆ ದಿನಾಂಕದಿಂದ ಅನ್ವಯವಾಗುವಂತೆ ಮೂರು ತಿಂಗಳ ಅವಧಿಯಲ್ಲಿ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಕೋರ್ಟ್ ರಾಷ್ಟ್ರಪತಿಯವರಿಗೆ ಹೇಳಿರುವುದು ಇದೇ ಮೊದಲು.

ತಮಿಳುನಾಡು ರಾಜ್ಯಪಾಲ ಆರ್.ಎನ್.ರವಿ ಅವರು ತಡೆಹಿಡಿದಿದ್ದ 10 ಮಸೂದೆಗಳಿಗೆ ಅಂಕಿತ ದೊರೆತಿದೆ ಎಂದು ಭಾವಿಸಬೇಕು ಎನ್ನುವ ತೀರ್ಪು ನೀಡಿದ ನಾಲ್ಕು ದಿನಗಳ ನಂತರ ಸುಪ್ರೀಂ ಕೋರ್ಟ್ ಆ ತೀರ್ಪಿನ ಪ್ರತಿಯನ್ನು ವೆಬ್‌ಸೈಟ್‌ನಲ್ಲಿ ಶುಕ್ರವಾರ ಪ್ರಕಟಿಸಿದೆ.

'ಕೇಂದ್ರ ಗೃಹ ಸಚಿವಾಲಯವು ಸೂಚಿಸಿದ ಕಾಲಮಿತಿಯನ್ನು ಅಳವಡಿಸಿಕೊಳ್ಳುವುದು ಸೂಕ್ತ ಎಂದು ನಾವು ಭಾವಿಸಿದ್ದೇವೆ. ರಾಜ್ಯಪಾಲರು ಪರಿಶೀಲನೆಗೆ ರವಾನಿಸಿದ ಮಸೂದೆಯ ಬಗ್ಗೆ ರಾಷ್ಟ್ರಪತಿಯವರು ಮೂರು ತಿಂಗಳಲ್ಲಿ ತೀರ್ಮಾನ ತೆಗೆದುಕೊಳ್ಳಬೇಕು' ಎಂದು ತೀರ್ಪಿನಲ್ಲಿ ಹೇಳಲಾಗಿದೆ.

4ನೇ ಪುಟ ನೋಡಿ

ರಾಜ್ಯಪಾಲರ ಅಧಿಕಾರವನ್ನು ಹಗುರವಾಗಿ ಕಂಡಿಲ್ಲ: 'ಸುಪ್ರೀಂ'

ಮಸೂದೆಗೆ ಅಂಕಿತ



ಸಂವಿಧಾನದ 200ನೆಯ ವಿಧಿಯ ಅಡಿಯಲ್ಲಿ ಕ್ರಮಗಳನ್ನು ಕೈಗೊಳ್ಳುವುದಕ್ಕೆ ರಾಜ್ಯಪಾಲರಿಗೆ ಸಮಯಮಿತಿ ವಿಧಿಸುವ ಮೂಲಕ ತಾನು ರಾಜ್ಯಪಾಲರ ಹುದ್ದೆಯನ್ನು ಹಗುರವಾಗಿ ಕಾಣುವ ಕೆಲಸ ಮಾಡಿಲ್ಲ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಹೇಳಿದೆ.

ಆದರೆ ರಾಜ್ಯಪಾಲ ಹುದ್ದೆಯಲ್ಲಿ ಇರುವವರು ಸಂಸದೀಯ ಪ್ರಜಾತಂತ್ರ ವ್ಯವಸ್ಥೆಯ ಪದ್ಧತಿಗಳನ್ನು ಗೌರವಿಸಿ ಕೆಲಸ ಮಾಡಬೇಕು ಎಂದು ಹೇಳಿದೆ. ತಮಿಳುನಾಡಿನ ವಿಧಾನಸಭೆಯು ಅಂಗೀಕಾರ ನೀಡಿದ ಮಸೂದೆಗಳ ವಿಚಾರವಾಗಿ ಯಾವುದೇ ಕ್ರಮ ಕೈಗೊಳ್ಳದ ಅಲ್ಲಿನ ರಾಜ್ಯಪಾಲ ಆರ್.ಎನ್. ರವಿ ಅವರ ಕ್ರಮದ ಬಗ್ಗೆ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಆರ್. ಮಹಾದೇವನ್ ಅವರು ಇರುವ ವಿಭಾಗೀಯ ಪೀಠವು ಈಚೆಗೆ ನೀಡಿದ ತೀರ್ಪಿನಲ್ಲಿ ಅಸಮಾಧಾನ ವ್ಯಕ್ತಪಡಿಸಿದೆ.

4ನೇ ಪುಟ ನೋಡಿ

ಎಜೆಎಲ್: ₹661 ಕೋಟಿ ಆಸ್ತಿ ಸ್ವಾಧೀನಕ್ಕೆ ಮುಂದಾದ ಇ.ಡಿ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಕಾಂಗ್ರೆಸ್ ಪಕ್ಷದ ನಿಯಂತ್ರಣದಲ್ಲಿರುವ ಅಸೋಸಿಯೇಟೆಡ್ ಜರ್ನಲ್ಸ್ ಲಿಮಿಟೆಡ್ (ಎಜೆಎಲ್) ಸಂಸ್ಥೆಗೆ ಸೇರಿದ ₹661 ಕೋಟಿ ಮೌಲ್ಯದ ಆಸ್ತಿ ಸ್ವಾಧೀನಪಡಿಸಿಕೊಳ್ಳುವ ಸಂಬಂಧ ಜಾರಿ ನಿರ್ದೇಶನಾಲಯ (ಇ.ಡಿ.) ನೋಟಿಸ್ ಜಾರಿಗೊಳಿಸಿದೆ.

ದೆಹಲಿಯ ಐಟಿಒದಲ್ಲಿರುವ ಹೆರಾಲ್ಡ್ ಹೌಸ್ (5ಎ ಬಹಾದ್ದೂರ್ ಶಾ ಜಫಾರ್ ಮಾರ್ಗ), ಮುಂಬೈನ ಪೂರ್ವ ಬಾಂದ್ರಾದಲ್ಲಿರುವ ಕಟ್ಟಡ (ಫ್ಲಾಟ್ ನಂ.2, ಸರ್ವೇ ನಂ.341) ಹಾಗೂ ಲಖನೌದ ಬಿಶ್ವೇಶ್ವರನಾಥ್ ರಸ್ತೆಯಲ್ಲಿರುವ ಕಟ್ಟಡದ (ಆಸ್ತಿ ಸಂಖ್ಯೆ 01) ಮೇಲೆ ಶುಕ್ರವಾರ ನೋಟಿಸ್ ಅಂಟಿಸಲಾಗಿದೆ ಎಂದು ಇ.ಡಿ ತಿಳಿಸಿದೆ.

4ನೇ ಪುಟ ನೋಡಿ

ದಿಢೀರ್ ಕೈಕೊಟ್ಟ ಯುಪಿಐ ಪಾವತಿ

ನವದೆಹಲಿ (ಪಿಟಿಐ): ದೇಶದಾದ್ಯಂತ ಶನಿವಾರ ಯುಪಿಐ (ಏಕೀಕೃತ ಪಾವತಿ ವ್ಯವಸ್ಥೆ) ಪಾವತಿ ಸೇವೆಯಲ್ಲಿ ದಿಢೀರ್ ಆಗಿ ಕಾಣಿಸಿಕೊಂಡ ತಾಂತ್ರಿಕ ಸಮಸ್ಯೆಯಿಂದಾಗಿ ಗ್ರಾಹಕರು ಹಾಗೂ ವರ್ತಕರು ಪೇಚಾಟ ಅನುಭವಿಸಿದರು.

ಗೂಗಲ್ ಪೇ, ಪೇಟಿಎಂ, ಫೋನ್ ಪೇ ಸೇರಿದಂತೆ ಡಿಜಿಟಲ್ ಪಾವತಿ ಆ್ಯಪ್‌ಗಳ ಕಾರ್ಯ ಕೆಲಕಾಲ ಸ್ಥಗಿತಗೊಂಡಿತ್ತು. ಕಳೆದ ಹದಿನೈದು ದಿನಗಳ ಅಂತರದಲ್ಲಿ ಮೂರನೇ ಬಾರಿಗೆ ಯುಪಿಐ ಸೇವೆಯಲ್ಲಿ ಅಡ್ಡಿ ಉಂಟಾಗಿದೆ. ಮಾರ್ಚ್ 26 ಮತ್ತು ಏಪ್ರಿಲ್ 2ರಂದು ತಾಂತ್ರಿಕ ಸಮಸ್ಯೆ ಇಣುಕಿತ್ತು.

ಆನ್‌ಲೈನ್ ಸೇವೆ ಬಗ್ಗೆ ಮಾಹಿತಿ ಒದಗಿಸುವ ಡೌನ್‌ಡೆಕ್ಟರ್ ವೆಬ್‌ಸೈಟ್ ಪ್ರಕಾರ, ಬೆಳಿಗ್ಗೆ 11.30ರ ಸುಮಾರಿಗೆ ಯುಪಿಐ ಸೇವೆಯಲ್ಲಿ ವ್ಯತ್ಯಯ ಕಂಡುಬಂದಿದೆ. ಸಂಜೆ ವೇಳೆಗೆ ಸಮಸ್ಯೆ ಬಗೆಹರಿದಿದ್ದರಿಂದ ಗ್ರಾಹಕರು ನಿರಾಳರಾದರು.

ಯುಪಿಐ ಅನ್ನು ರಾಷ್ಟ್ರೀಯ ಪಾವತಿ ನಿಗಮವು (ಎನ್‌ಪಿಸಿಐ) ಅಭಿವೃದ್ಧಿಪಡಿಸಿದೆ. ತಕ್ಷಣವೇ ಬಳಕೆದಾರರ ಸಮಸ್ಯೆ ಬಗ್ಗೆ ಪ್ರತಿಕ್ರಿಯಿಸಿದ ನಿಗಮವು, 'ಸಮಸ್ಯೆಯು ಗಮನಕ್ಕೆ ಬಂದಿದ್ದು, ಸರಿಪಡಿಸಲು ಕ್ರಮವಹಿಸಲಾಗಿದೆ' ಎಂದು 'ಎಕ್ಸ್'ನಲ್ಲಿ ಹೇಳಿತ್ತು.

7ನೇ ಪುಟ ನೋಡಿ

ಸಾಕಪ್ಪಾ ಸಾಕು ಕಾಂಗ್ರೆಸ್ ಸರ್ಕಾರ: ಜೆಡಿಎಸ್ ಪ್ರತಿಭಟನೆ

ಬೆಂಗಳೂರು: ಬೆಲೆ ಏರಿಕೆ ಖಂಡಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಜೆಡಿಎಸ್‌ನಿಂದ 'ಸಾಕಪ್ಪಾ ಸಾಕು ಕಾಂಗ್ರೆಸ್ ಸರ್ಕಾರ' ಪ್ರತಿಭಟನಾ ಸಮಾವೇಶ ನಡೆಯಿತು. 4

ಚಿನಕುರುಳಿ

ಪ್ರಕಾಶ್ ಶೆಟ್ಟಿ







1. ಧರ್ಮರಾಯಸ್ವಾಮಿ ದೇವಸ್ಥಾನದ ಮುಂಭಾಗ ಭಕ್ತರು ದೊಡ್ಡ ಕರ್ಪೂರಗಳನ್ನು ಬೆಳಗಿದರು 2. ಶನಿವಾರ ರಾತ್ರಿ ತಿಗಳರಪೇಟೆಯ ದ್ರೌಪದಿದೇವಿ ಕರಗ ಶಕ್ತ್ಯೋತ್ಸವ ಅಂಗವಾಗಿ ಶ್ರೀ ಧರ್ಮರಾಯಸ್ವಾಮಿ ದೇವಸ್ಥಾನದಲ್ಲಿ ಧಾರ್ಮಿಕ ಕಾರ್ಯಕ್ರಮಗಳು ನಡೆದವು 4. ಕರಗದ ಕುಂಟೆಯಲ್ಲಿ ಪೂಜೆ ಮುಗಿಸಿ ಧರ್ಮರಾಯಸ್ವಾಮಿ ದೇವಸ್ಥಾನಕ್ಕೆ ಮೆರವಣಿಗೆಯಲ್ಲಿ ಬಂದ ಕರಗ ಪೂಜಾರಿ ಎ. ಜ್ಞಾನೇಂದ್ರ ಪ್ರಜಾವಾಣಿ ಚಿತ್ರಗಳು ಎಂ.ಎಸ್. ಮಂಜುನಾಥ್

ಪೇಟೆಗಳಲ್ಲಿ ಗೋವಿಂದ... ಗೋವಿಂದ... ನಾಮಸ್ಮರಣೆ; ರಾತ್ರಿಯಿಡೀ ಉತ್ಸವದ ಮೆರುಗು • ನಗರದ ವಿವಿಧೆಡೆಯಿಂದ ಬಂದಿದ್ದ ನೂರಾರು ತೇರು

ಶ್ರದ್ಧಾ–ಭಕ್ತಿಯ ಕರಗ: ಮನೆ ಮಾಡಿದ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾವಿರಾರು ವೀರ ಕುಮಾರರ ಉದ್ಘೋಷ, ಭಕ್ತರ ಗೋವಿಂದ... ಗೋವಿಂದ... ನಾಮ ಸ್ಮರಣೆ, ಮಲ್ಲಿಗೆ ಹೂವಿನ ಸಮರ್ಪಣೆಯೊಂದಿಗೆ ಇತಿಹಾಸ ಪ್ರಸಿದ್ಧ ಬೆಂಗಳೂರು ಕರಗ ಸಂಭ್ರಮ, ಸಡಗರದಿಂದ ಶನಿವಾರ ತಡರಾತ್ರಿಯಿಂದ ಭಾನುವಾರ ನಸುಕಿನವರೆಗೆ ನಗರದ ಪೇಟೆಗಳ ಮುಖ್ಯರಸ್ತೆ, ಗಲ್ಲಿಗಳಲ್ಲಿ ಜರುಗಿತು.

ಚೈತ್ರ ಪೌರ್ಣಮಿಯಾದ ಶನಿವಾರ, ಅರ್ಚಕ ಎ. ಜ್ಞಾನೇಂದ್ರ ಅವರು ಪೂರ್ವ ಪೂಜಾಕ್ರಮಗಳನ್ನು ಪೂರೈಸಿ, ತಿಗಳರಪೇಟೆಯಲ್ಲಿರುವ ಧರ್ಮರಾಯ ಸ್ವಾಮಿ ದೇವಸ್ಥಾನಕ್ಕೆ ಬಂದರು. ಹಸಿ ಕರಗವನ್ನು ಸ್ಥಾಪಿಸಿದ್ದ ಸ್ಥಳದಲ್ಲಿ ಧಾರ್ಮಿಕ ವಿಧಿ-ವಿಧಾನಗಳನ್ನು ಪೂರೈಸಿದ ನಂತರ ಮಲ್ಲಿಗೆ ಹೂವಿನಿಂದ ಅಲಂಕೃತಗೊಂಡಿದ್ದ ದ್ರೌಪದಿದೇವಿ ಕರಗ ಉತ್ಸವ ಧರ್ಮರಾಯಸ್ವಾಮಿ ದೇವಸ್ಥಾನದಿಂದ ಶನಿವಾರ ತಡರಾತ್ರಿ ಹೊರಟಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಧರ್ಮರಾಯಸ್ವಾಮಿ ದೇವಸ್ಥಾನಕ್ಕೆ ಶನಿವಾರ ರಾತ್ರಿ ಸುಮಾರು 10.30ರ ಸಮಯದಲ್ಲಿ ತುಂತುರು ಮಳೆಯಲ್ಲಿಯೇ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಕರಗ ಶಕ್ತ್ಯೋತ್ಸವ, ಮಹಾರಥೋತ್ಸವಕ್ಕೆ ಶುಭ ಕೋರಿ ನಮನ ಸಲ್ಲಿಸಿದರು.

ಕರಗ ಉತ್ಸವ ಆರಂಭವಾಗುವ ಮುನ್ನ ಶನಿವಾರ ರಾತ್ರಿ ಸುಮಾರು 10 ಗಂಟೆಯ ಸಂದರ್ಭದಲ್ಲಿ 30 ನಿಮಿಷ ತುಂತುರು ಮಳೆಯಾಯಿತು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಧರ್ಮರಾಯ ಸ್ವಾಮಿ ದೇವಸ್ಥಾನದ ಅಂಗಳದಲ್ಲಿ ಕರಗಕ್ಕೆ ಪುಷ್ಪಾರ್ಚನೆ ಮಾಡಿದರು



ನಗರದಲ್ಲಿ ಶನಿವಾರ ರಾತ್ರಿ ತಿಗಳರಪೇಟೆಯ ದ್ರೌಪದಿದೇವಿ ಕರಗ ಶಕ್ತ್ಯೋತ್ಸವ ಅಂಗವಾಗಿ ಶ್ರೀ ಧರ್ಮರಾಯಸ್ವಾಮಿ ದೇವಸ್ಥಾನದ ಮುಂಭಾಗ ಸೇರಿದ್ದ ಭಕ್ತರ ಸಮೂಹ ಪ್ರಜಾವಾಣಿ ಚಿತ್ರ/ ರಂಜು ಪಿ

ದ್ರೌಪದಿದೇವಿ ಕರಗ ಶಕ್ತ್ಯೋತ್ಸವದ (ಬೆಂಗಳೂರು ಕರಗ) ಅಂಗವಾಗಿ ತಿಗಳರಪೇಟೆ, ನಗರ್ತರಪೇಟೆ, ಕಬ್ಬನ್ ಪೇಟೆ, ಗಾಣಿಗರ ಪೇಟೆ, ದೊಡ್ಡಪೇಟೆಯ ಮುಖ್ಯರಸ್ತೆ ಹಾಗೂ ಗಲ್ಲಿಗಲ್ಲಿಗಳಲ್ಲಿ ಸಂಭ್ರಮ ಮನೆ ಮಾಡಿತ್ತು. ಸಹಸ್ರಾರು ಸಂಖ್ಯೆಯಲ್ಲಿದ್ದ ವೀರಕುಮಾರರು 'ದೀ ಧಿತ್ತಿ...' ಎಂಬ ಉದ್ಗಾರದೊಂದಿಗೆ ಕತ್ತಿಯನ್ನು ಎದೆಗೆ ಬಡಿಕೊಂಡು ನಮಸ್ಕರಿಸಿದರು.

'ಗೋವಿಂದ... ಗೋವಿಂದಾ..' ಎಂಬ ಘೋಷಣೆಗಳು ಮೊಳಗುತ್ತಿದ್ದವು. ಭಕ್ತರು ಕರಗದ ಮೇಲೆ ಮಲ್ಲಿಗೆ ಹೂವನ್ನು ಚೆಲ್ಲಿ ಭಕ್ತಿಭಾವ ಮೆರೆದರು. ಹಲವೆಡೆ ಗಲ್ಲಿಗಳಲ್ಲಿ, ಮನೆಯ ಮೇಲೆನಿಂತಿದ್ದ ನಾಗರಿಕರು ಅಲ್ಲಿಂದಲೇ ಮಲ್ಲಿಗೆಯ ಅಭಿಷೇಕವನ್ನೂ ಮಾಡಿದರು.

ನಗರ್ತಪೇಟೆ, ಸಿದ್ದಣ್ಣ ಗಲ್ಲಿ, ಕಬ್ಬನ್ ಪೇಟೆ, ಗಾಣಿಗರ ಪೇಟೆ, ದೊಡ್ಡಪೇಟೆಯಿಂದ ಕೆ.ಆರ್. ಮಾರುಕಟ್ಟೆ ತಲುಪಿ, ಮಸ್ತಾನ್ ಸಾಬ್ ದರ್ಗಾಕ್ಕೆ ಭೇಟಿ ನೀಡಿ ಪೂಜೆ ಸ್ವೀಕರಿಸಿತು. ಬಳೇಪೇಟೆ ಹಳೇ ಗರಡಿ, ಅಣ್ಣಮ್ಮನ ದೇವಾಲಯ, ಕಿಲಾರಿ ರಸ್ತೆ, ಯಲಹಂಕ ಗೇಟ್, ಅವೆನ್ಯೂ ರಸ್ತೆ, ಕುಂಬಾರಪೇಟೆ, ಗೊಲ್ಲರಪೇಟೆ, ತಿಗಳರ ಪೇಟೆಗಳಲ್ಲಿ ಸಾಗಿತು.

ಕರಗ ಉತ್ಸವ ಹೊರಟ ನಂತರ ಧರ್ಮರಾಯಸ್ವಾಮಿ ಮಹಾರಥೋತ್ಸವ ಮುಖ್ಯ ರಸ್ತೆಗಳಲ್ಲಿ ಸಾಗಿತು. ಭಕ್ತರು ಬಾಳೆಹಣ್ಣನ್ನು ಎಸೆದು ಭಕ್ತಿ ಮೆರೆದರು. ಈ ರಥದ ಹಿಂದೆ ನಗರದ ಹಲವು ಭಾಗಗಳಿಂದ ಆಗಮಿಸಿದ್ದ ನೂರಾರು ತೇರು–ರಥಗಳು, ಪಲ್ಲಕ್ಕಿಗಳು ಸಾಗಿದವು.

ಧರ್ಮರಾಯಸ್ವಾಮಿ ದೇವಸ್ಥಾನದಲ್ಲಿ ಶನಿವಾರ ಬೆಳಿಗ್ಗೆಯಿಂದಲೇ ವಿಶೇಷ ಪೂಜೆಗಳು, ಧಾರ್ಮಿಕ ವಿಧಿ–ವಿಧಾನಗಳು ನಡೆದವು. ಭಾನುವಾರ ತಡರಾತ್ರಿ ಹಸಿ ಕರಗದ ಪೂಜೆ ನಡೆದು, ಸಂಪಂಗಿ ಕೆರೆಯ ಶಕ್ತಿಪೀಠದಿಂದ ಧರ್ಮರಾಯಸ್ವಾಮಿ ದೇವಸ್ಥಾನಕ್ಕೆ ಹಸಿ ಕರಗವನ್ನು ಅರ್ಚಕ ಜ್ಞಾನೇಂದ್ರ ಮೆರವಣಿಗೆಯಲ್ಲಿ ಹೊತ್ತು ತಂದಿದ್ದರು.

ದೇವಸ್ಥಾನದ ಮುಂಭಾಗದ ರಸ್ತೆಯಲ್ಲಿ, ಹರಕೆ ತೀರಿಸುವ ಭಕ್ತರು ಸಣ್ಣ ಗಾತ್ರದ ಕರ್ಪೂರ ಸೇರಿದಂತೆ ಬೃಹತ್ ಗಾತ್ರದ ಕರ್ಪೂರಗಳ ಆರತಿ ಮಾಡಿದರು. ಸುತ್ತಮುತ್ತಲ ರಸ್ತೆಗಳಲ್ಲಿ ಕರ್ಪೂರದ ಘಮ ವ್ಯಾಪಿಸಿತ್ತು.

ತಿಗಳರಪೇಟೆ ಸೇರಿದಂತೆ ಕರಗ ಸಾಗುವ ಮಾರ್ಗದಲ್ಲಿ ವಿಶೇಷ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು. ಕರಗ ತಲುಪುವ ದೇವಸ್ಥಾನಗಳನ್ನು ದೀಪಾಲಂಕಾರಗಳಿಂದ ಆಕರ್ಷಕವಾಗಿ ಸಿಂಗರಿಸಲಾಗಿತ್ತು.

ಕರಗಕ್ಕೆ ಅಗತ್ಯ ಸಹಕಾರ: ಡಿಸಿಎಂ

'ನಮಗೆ ಯಾರು ಬಂದು ಅರ್ಜಿ ನೀಡಿದ್ದಾರೋ ಅವರಿಗೆ ನೆರವು ನೀಡಲಿದ್ದೇವೆ. ಇದಕ್ಕೆ ಬಿಬಿಎಂಪಿ ಬಜೆಟ್‌ನಲ್ಲೂ ಅನುದಾನ ಮೀಸಲಿಡಲಾಗಿದೆ. ಅವರು 2-3 ಭಾಗಗಳಾಗಿದ್ದಾರೆ. ಎಲ್ಲರೂ ಒಗ್ಗಟ್ಟಾಗಿ ಬಂದರೆ, ಕರಗ ಉತ್ಸವಕ್ಕೆ ಮೊದಲಿನಿಂದಲೂ ಯಾವ ರೀತಿ ನೆರವು ನೀಡುತ್ತಿದ್ದೆವೋ ಅದನ್ನೇ ನೀಡುತ್ತೇವೆ. ನಾವು ಅನುದಾನ ನೀಡದಿದ್ದರೆ ನಮಗೆ ಆಹ್ವಾನ ಯಾಕೆ ನೀಡಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು 'ಕರಗ ಉತ್ಸವಕ್ಕೆ ಅನುದಾನ ನೀಡಿಲ್ಲ' ಎಂಬ ಆರೋಪದ ಬಗ್ಗೆ ಪ್ರತಿಕ್ರಿಯಿಸಿದರು.

ಆರೋಪ: ಕರಗ ಉತ್ಸವದ ಮುನ್ನ ಕಬ್ಬನ್ ಉದ್ಯಾನದಲ್ಲಿರುವ ಶನಿವಾರ ಮಧ್ಯಾಹ್ನ ಕರಗದ ಕುಂಟೆಯಲ್ಲಿ ಪೂಜೆ ಸಲ್ಲಿಸಲಾಯಿತು. ಎಲ್ಲರೂ ಉತ್ಸಾಹ, ಸಡಗರದಿಂದ ಇದ್ದ ಈ ಸಂದರ್ಭದಲ್ಲೇ ಕರಗ ಉತ್ಸವಕ್ಕೆ ಸರ್ಕಾರದಿಂದ ಹಣ ಬಿಡುಗಡೆಯಾಗಿಲ್ಲ ಎಂಬ ಆರೋಪ ಕೇಳಿಬಂತು.

'ಕರಗದ ಉತ್ಸವದ ಅಂಗವಾಗಿ, ಹೂವಿನ ಅಲಂಕಾರ ಸೇರಿದಂತೆ ಹಲವು ರೀತಿಯ ಸಿದ್ಧತೆಗೆ ಲಕ್ಷಾಂತರ ರೂಪಾಯಿ ವೆಚ್ಚ ಮಾಡಿದ್ದೇವೆ. ಕೋಟ್ಯಂತರ ಹಣ ಮೀಸಲಿಡಲಾಗಿದೆ ಎಂದು ಹೇಳಲಾಗಿದ್ದರೂ ಇನ್ನೂ ಹಣ ಬಿಡುಗಡೆ ಮಾಡಿಲ್ಲ' ಎಂದು ಧರ್ಮರಾಯಸ್ವಾಮಿ ದೇವಾಲಯದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೆ. ಸತೀಶ್ ಹಾಗೂ ಕರಗದ ಪೂಜಾರಿ ಎ. ಜ್ಞಾನೇಂದ್ರ ದೂರಿದರು.

ಶುಕ್ರವಾರ ಬೆಳಿಗ್ಗೆಯೇ ₹40 ಲಕ್ಷವನ್ನು ಜಿಲ್ಲಾಧಿಕಾರಿಯವರ ಖಾತೆಗೆ ವರ್ಗಾಯಿಸಲಾಗಿದೆ ಎಂದು ಬಿಬಿಎಂಪಿ ಮಾಹಿತಿ ನೀಡಿತು. 'ಕರಗ ಉತ್ಸವಕ್ಕೆ ಯಾವುದೇ ರೀತಿಯ ಹಣದ ಕೊರತೆ ಇಲ್ಲ. ಸಮಿತಿಯಲ್ಲಿರುವ ಅಧಿಕಾರಿಗಳು ನಿಯಮದಂತೆ ಟೆಂಡರ್ ಕರೆದು, ಮುಂಗಡ ಹಣವನ್ನೂ ನೀಡಿದ್ದಾರೆ. ಬಿಲ್ ಪ್ರಸ್ತುತಪಡಿಸಿದವರಿಗೆ ಹಣ ಬಿಡುಗಡೆ ಮಾಡಲಾಗುತ್ತದೆ' ಎಂದು ಜಿಲ್ಲಾಧಿಕಾರಿ ಜಗದೀಶ್ ಹೇಳಿದರು.

ಪ್ರಸಾದ ವಿನಿಯೋಗ

ಅವೆನ್ಯೂ ರಸ್ತೆ, ಬಿ.ವಿ.ಕೆ ಅಯ್ಯಂಗಾರ್ ರಸ್ತೆ ಸುತ್ತಮುತ್ತ ಹಾಗೂ ಕರಗ ಸಾಗುವ ಮುಖ್ಯರಸ್ತೆ, ಅಡ್ಡರಸ್ತೆಗಳಲ್ಲಿ ಪಲಾವ್, ಬಿಸಿಬೇಳೆಬಾತ್ ಸೇರಿದಂತೆ ವಿವಿಧ ರೀತಿಯ ಭಕ್ಷ್ಯಗಳನ್ನು ವಿತರಿಸಲಾಯಿತು. ಪಾನಕ, ಮಜ್ಜಿಗೆಯನ್ನೂ ಕರಗ ನೋಡಲು ಬಂದ ಭಕ್ತರಿಗೆ ನೀಡಲಾಯಿತು.

ಜಾತ್ರೆಯ ಸಂಭ್ರಮ: ನಗರ್ತಪೇಟೆ ಮುಖ್ಯರಸ್ತೆ ಹಾಗೂ ಅಡ್ಡರಸ್ತೆಗಳ ಇಕ್ಕೆಲಗಳಲ್ಲಿ ಆಟಿಕೆ, ಫ್ಯಾನ್ಸಿ ವಸ್ತುಗಳು, ತಿಂಡಿ ತಿನಿಸುಗಳನ್ನು ಬೀದಿಬದಿ ವ್ಯಾಪಾರಿಗಳು ಭರ್ಜರಿಯಾಗಿ ಮಾರಾಟ ಮಾಡಿದರು.



ಧರ್ಮರಾಯಸ್ವಾಮಿ ದೇವಸ್ಥಾನದ ಮುಂಭಾಗ ಭಕ್ತರು ಶನಿವಾರ ಬೆಳಿಗ್ಗೆ ಕರ್ಪೂರದಾರತಿಗೆ ಸಿದ್ಧತೆ ನಡೆಸಿದರು

ಎಚ್‌ಡಿಕೆ ಹೇಳಿಕೆ ಖಂಡಿಸಿ ಕಾಂಗ್ರೆಸ್ ವಿನೂತನ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ವಿರುದ್ಧದ ಟನ್ ಗಟ್ಟಲೆ ಅಕ್ರಮ ದಾಖಲೆಗಳಿವೆ' ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಮಾಡಿರುವ ಆರೋಪದ ವಿರುದ್ಧ ನಗರದ ರೇಸ್ ಕೋರ್ಸ್ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದ ಮುಂದೆ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಕುಮಾರಸ್ವಾಮಿ ವಿರುದ್ಧ ಧಿಕ್ಕಾರ ಕೂಗಿದ ಕಾಂಗ್ರೆಸ್ ಕಾರ್ಯಕರ್ತರು, ಕುಮಾರಸ್ವಾಮಿ ಅವರಂತೆ ಮುಖವಾಡ ಧರಿಸಿ ದಾಖಲೆಗಳನ್ನು ಹಿಡಿದು ವ್ಯಂಗ್ಯ ಮಾಡಿದರು. ಬಳಿಕ ದಾಖಲೆಗಳ ಬ್ಯಾಗ್, ಸೂಟ್‌ಕೇಸ್‌ಗಳನ್ನು ಹಿಡಿದುಕೊಂಡು ಜೆಡಿಎಸ್ ಕಚೇರಿ ಕಡೆಗೆ ಕ್ಯಾಂಟರ್ ಗಾಡಿ ಹತ್ತಿ ಹೊರಟ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದು, ಬಳಿಕ ಬಿಡುಗಡೆ ಮಾಡಿದರು.

ಕೆಪಿಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥ ರಮೇಶ್ ಬಾಬು, ಪ್ರಧಾನ ಕಾರ್ಯದರ್ಶಿ ಎಸ್. ಮನೋಹರ್ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು.



ಕೇಂದ್ರ ಸಚಿವ ಎಚ್‌ಡಿ. ಕುಮಾರಸ್ವಾಮಿ ಹೇಳಿಕೆ ಖಂಡಿಸಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ರಾಜ್ ಪುಣ್ಯಸ್ಮರಣೆ ಸಮಾಧಿಗೆ ಪೂಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರನಟ ರಾಜ್‌ಕುಮಾರ್ ಅವರ 19ನೇ ಪುಣ್ಯತಿಥಿ ಅಂಗವಾಗಿ ಶನಿವಾರ ಕಂಠೀರವ ಸ್ಟುಡಿಯೊದಲ್ಲಿರುವ ಅವರ ಸಮಾಧಿಗೆ ಕುಟುಂಬದ ಸದಸ್ಯರು ಪೂಜೆ ಸಲ್ಲಿಸಿದರು.

ನಟ ಶಿವರಾಜ್‌ಕುಮಾರ್ ದಂಪತಿ, ನಟ ರಾಘವೇಂದ್ರ ರಾಜ್‌ಕುಮಾರ್ ದಂಪತಿ, ಅಶ್ವಿನಿ ಪುನೀತ್ ರಾಜ್‌ಕುಮಾರ್, ಪುತ್ರಿ ಲಕ್ಷ್ಮಿ ಸೇರಿದಂತೆ ಕುಟುಂಬದ ಸದಸ್ಯರು, ನೂರಾರು ಅಭಿಮಾನಿಗಳು ಸಮಾಧಿಗೆ ಪುಷ್ಪನಮನ ಅರ್ಪಿಸಿದರು.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಶಿವರಾಜ್‌ಕುಮಾರ್, 'ಕಲಾಸೇವೆ ಮೂಲಕ ರಾಜ್‌ಕುಮಾರ್ ಅವರು ಜನರ ಮನಸ್ಸಿನಲ್ಲಿ ಶಾಶ್ವತವಾಗಿ ಬೇರೂರಿದ್ದಾರೆ' ಎಂದರು.

ಭಾರತೀಯ ಔಷಧ ಕಂಪನಿ ಉಗ್ರಾಣ ಮೇಲೆ ರಷ್ಯಾ ಕ್ಷಿಪಣಿ ದಾಳಿ

ನವದೆಹಲಿ (ಪಿಟಿಐ): ಉಕ್ರೇನ್‌ನಲ್ಲಿರುವ ಭಾರತೀಯ ಔಷಧ ಕಂಪನಿ 'ಕುಸುಮ್'ನ ಗೋದಾಮಿನ ಮೇಲೆ ರಷ್ಯಾ ಶನಿವಾರ ಕ್ಷಿಪಣಿ ದಾಳಿ ನಡೆಸಿದೆ ಎಂದು ಭಾರತದಲ್ಲಿನ ಉಕ್ರೇನ್ ರಾಯಭಾರ ಕಚೇರಿ ತಿಳಿಸಿದೆ.

'ಮಾಸ್ಕೊ ಉದ್ದೇಶಪೂರ್ವಕವಾಗಿಯೇ ಭಾರತೀಯ ವ್ಯವಹಾರಗಳನ್ನು ಗುರಿಯಾಗಿಸಿಕೊಂಡು ದಾಳಿ ಮಾಡಿದೆ. ಈ ಮೂಲಕ ಮಕ್ಕಳು ಮತ್ತು ವೃದ್ಧರಿಗಾಗಿ ಮೀಸಲಾದ ಔಷಧಿಗಳನ್ನು ರಷ್ಯಾ ನಾಶಪಡಿಸಿದೆ' ಎಂದು ಅದು ಆರೋಪಿಸಿದೆ.

ಭಾರತೀಯ ಉದ್ಯಮಿ ರಾಜೀವ್ ಗುಪ್ತಾ ಅವರ ಒಡೆತನದ ಕುಸುಮ್, ಉಕ್ರೇನ್‌ನ ಅತಿದೊಡ್ಡ ಔಷಧ ಸಂಸ್ಥೆಗಳಲ್ಲಿ ಒಂದು. ಇದು ಉಕ್ರೇನ್‌ಗೆ ಅಗತ್ಯವಿರುವ ನಿರ್ಣಾಯಕ ಮತ್ತು ಮೂಲ ಔಷಧಿಗಳನ್ನು ಒದಗಿಸುತ್ತದೆ.

ಪ್ರಶ್ನೆಗಳನ್ನು ಕೇಳಿ ಗೊಂದಲ ನಿವಾರಿಸಿಕೊಂಡ ವಿದ್ಯಾರ್ಥಿಗಳು ● 60ಕ್ಕೂ ಅಧಿಕ ಶಿಕ್ಷಣ ಸಂಸ್ಥೆಗಳಿಂದ ಮಳಿಗೆಗಳು

ಒಂದೇ ಸೂರಿನಡಿ ಜ್ಞಾನದ ಹರಿವು



ಬೆಂಗಳೂರು ಅರಮನೆ ಮೈದಾನದಲ್ಲಿ ಶನಿವಾರ 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಆಯೋಜಿಸಿದ ಶೈಕ್ಷಣಿಕ ಮೇಳ 'ಎಡ್ಯುವರ್ಸ್':ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಮತ್ತು ಪೋಷಕರು ವಿವಿಧ ಮಳಿಗೆಗಳಿಗೆ ಭೇಟಿ ನೀಡಿ ಮಾಹಿತಿ ಪಡೆದರು. ಪ್ರಜಾವಾಣಿ ಚಿತ್ರ



ಪಾದರಕ್ಷೆಯ ವಿನ್ಯಾಸದ ಕೋರ್ಸ್ ಬಗ್ಗೆ ಫುಟ್‌ವೇರ್ ಡಿಸೈನ್ ಆ್ಯಂಡ್ ಡೆವಲಪ್‌ಮೆಂಟ್ ಇನ್‌ಸ್ಟಿಟ್ಯೂಷನ್‌ನ ಪ್ರತಿನಿಧಿಗಳು ಮಾಹಿತಿ ನೀಡಿದರು. ಪ್ರಜಾವಾಣಿ ಚಿತ್ರ

ಇಂದಿನ ಕಾರ್ಯಕ್ರಮ

'ಎಡ್ಯುವರ್ಸ್' ಎಕ್ಸ್‌ಪೊದ ಎರಡನೇ ದಿನವಾದ ಭಾನುವಾರ ಪ್ರಮುಖವಾಗಿ ಎರಡು ಗೋಷ್ಠಿಗಳು ನಡೆಯಲಿವೆ.

ಎಐ ಮತ್ತು ನವೀನ ತಂತ್ರಜ್ಞಾನಗಳ ಪ್ರಾಮುಖ್ಯದ ಮೇಲೆ ಕೇಂದ್ರೀಕರಿಸುವ ಪರ್ಯಾಯ ವೃತ್ತಿ ಅವಕಾಶಗಳ ಕುರಿತು 'ಐ ವಿಶ್ ಸಮ್‌ಒನ್ ಟೋಲ್ಡ್ ಮಿ ದಿಸ್ ಬಿಫೋರ್ ಮೈ ಫಸ್ಟ್ ಜಾಬ್' ಮತ್ತು 'ಮೈಂಡ್‌ಫುಲ್ ಮೊಮೆಂಟಮ್' ಕೃತಿಗಳ ಲೇಖಕ ಸುಶಾಂತ್ ರಜಪೂತ್ ಮಾಹಿತಿ ನೀಡಲಿದ್ದಾರೆ.

ವೃತ್ತಿ ಸಲಹೆಗಾರರಾದ ಅಮೀನ್-ಎ-ಮುದಸ್ಸರ್ ಅವರು ವೃತ್ತಿ ಸಮಾಲೋಚನೆಯ ಅಗತ್ಯದ ಕುರಿತು ಮಾತನಾಡಲಿದ್ದಾರೆ. ಮಧ್ಯಾಹ್ನದ ನಂತರ ವೈದ್ಯಕೀಯ ಆಕಾಂಕ್ಷಿಗಳಿಗೆ ಅಣಕು 'ನೀಟ್' ಪರೀಕ್ಷೆ ನಡೆಯಲಿದೆ.

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಆಯೋಜಿಸಿರುವ ಅತಿ ದೊಡ್ಡ ಶೈಕ್ಷಣಿಕ ಮೇಳ 'ಎಡ್ಯುವರ್ಸ್'ನಲ್ಲಿ ವಿದ್ಯಾರ್ಥಿಗಳು, ಅವರ ಪೋಷಕರು ಸಿಇಟಿ, ನೀಟ್ ಸಹಿತ ವಿವಿಧ ಪರೀಕ್ಷೆಗಳ ಬಗ್ಗೆ ಮಾಹಿತಿ ಪಡೆದರು. ಹೊಸ ಹೊಸ ಕೋರ್ಸ್‌ಗಳ ಬಗ್ಗೆ ಕುತೂಹಲಗೊಂಡರು. ವಿವಿಧ ಕೋರ್ಸ್‌ಗಳ ಉಪಯೋಗ, ಅದರ ಶುಲ್ಕಗಳ ವಿವರ ಪಡೆದರು.

60ಕ್ಕೂ ಅಧಿಕ ಶಿಕ್ಷಣ ಸಂಸ್ಥೆಗಳ ಮಳಿಗೆಗಳು, ಶೈಕ್ಷಣಿಕ ಸಾಲ ನೀಡುವ ಬ್ಯಾಂಕ್‌ಗಳು, ಶಿಕ್ಷಣ ಸಂಸ್ಥೆಗಳ ಬಗ್ಗೆಯೇ ಮಾಹಿತಿ ನೀಡುವ ಆ್ಯಪ್‌ಗಳ ಮಳಿಗೆಗಳು ಸೇರಿ 70 ಮಳಿಗೆಗಳು 'ಎಡ್ಯುವರ್ಸ್'ನಲ್ಲಿದ್ದವು. ಭಿನ್ನ ಮತ್ತು ಹೊಸ ಕೋರ್ಸ್‌ಗಳನ್ನು ಪರಿಚಯಿಸುವ ಶಿಕ್ಷಣ ಸಂಸ್ಥೆಗಳ ಮಳಿಗೆಗಳ ಮುಂದೆ ವಿದ್ಯಾರ್ಥಿಗಳು, ಪೋಷಕರು ಸಾಲುಗಟ್ಟಿ ನಿಂತು ಮಾಹಿತಿ ಪಡೆದರು.

ಆರ್ಟಿಫಿಶಿಯಲ್ ಇಂಟೆಲಿಜೆನ್ಸಿ ಆ್ಯಂಡ್ ಮಷಿನ್ ಲರ್ನಿಂಗ್ (ಎಐ ಆ್ಯಂಡ್ ಎಂಎಲ್), ಏರೊನಾಟಿಕಲ್ ಎಂಜಿನಿಯರಿಂಗ್, ಅಲ್ಲದೆ ಪಾದರಕ್ಷೆಗಳ ವಿನ್ಯಾಸ ಸಹಿತ ಶೇ 100ರಷ್ಟು ಉದ್ಯೋಗ ಗ್ಯಾರಂಟಿಯೊಂದಿಗೆ ಕೋರ್ಸ್‌ಗಳಿರುವ ಬಗ್ಗೆ ವಿದ್ಯಾರ್ಥಿಗಳು ಕಣ್ಣರಳಿಸಿ ವಿವರ ಪಡೆದರು.

ದ್ವಿತೀಯ ಪಿಯು ಮುಗಿಸಿ ಯಾವ ಕಾಲೇಜು ಒಳ್ಳೆಯದು ಎಂದು ಕಾಲೇಜಿನಿಂದ ಕಾಲೇಜಿಗೆ ಅಲೆಯುವ ಬದಲು 'ಅಪ್ಲಿ'ಯಲ್ಲಿ ನೋಂದಣಿ ಮಾಡಿಕೊಂಡರೆ ನಗರದ ವಿವಿಧ ವಿದ್ಯಾಸಂಸ್ಥೆಗಳ ಮಾಹಿತಿಯನ್ನು ಕೈಯಲ್ಲಿರುವ ಮೊಬೈಲ್‌ನಲ್ಲಿ ಕೆಲವೇ ನಿಮಿಷಗಳಲ್ಲಿ ಪಡೆಯುವ ಆ್ಯಪ್‌ಗಳು ಗಮನ ಸೆಳೆದವು.

ಬಿಎಸ್‌ಸಿ, ಎಂಬಿಎ, ಎಂಜಿನಿಯರಿಂಗ್ ಸಹಿತ ಭಿನ್ನ ಭಿನ್ನ ಕೋರ್ಸ್‌ಗಳ ಮಾಹಿತಿಗಳನ್ನು ಎಲ್ಲ ವಿದ್ಯಾಸಂಸ್ಥೆಗಳವರು ಆಕರ್ಷಕ ಕರಪತ್ರದೊಂದಿಗೆ ನೀಡಿದರು.

ಪ್ರಮುಖ ಶೈಕ್ಷಣಿಕ ಕಾರ್ಯಕ್ರಮವಾದ ಎಡ್ಯುವರ್ಸ್ ದ್ವಿತೀಯ ಪಿಯುಸಿ ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗಾಗಿ ವಿಶೇಷವಾಗಿ ವಿನ್ಯಾಸಗೊಳಿಸಲಾಗಿದೆ. ಈ ಕಾರ್ಯಕ್ರಮವು ಉನ್ನತ ಶಿಕ್ಷಣ ಸಂಸ್ಥೆಗಳು ನೀಡುವ ವೈವಿಧ್ಯಮಯ ವೃತ್ತಿ ಅವಕಾಶಗಳನ್ನು ಅನ್ವೇಷಿಸಲು ಒಂದು ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ.

ಸಾಂಸ್ಕೃತಿಕ ಪ್ರದರ್ಶನಗಳ ಜೊತೆಗೆ, ಈ ಕಾರ್ಯಕ್ರಮವು ವಿದ್ಯಾರ್ಥಿಗಳಿಗೆ ಉಜ್ವಲ ಭವಿಷ್ಯವನ್ನು ರೂಪಿಸುವಲ್ಲಿ ಮಾರ್ಗದರ್ಶನ ನೀಡಲು ಪ್ರಖ್ಯಾತ ಭಾಷಣಕಾರರಿಂದ ಒಳನೋಟವುಳ್ಳ ಗೋಷ್ಠಿಗಳನ್ನು ಒಳಗೊಂಡಿರುತ್ತದೆ.

ಪರೀಕ್ಷೆಯ ಪ್ರಮುಖ ಅಂಶಗಳು ಮತ್ತು ಕಾಲೇಜು ಆಯ್ಕೆ ಪ್ರಕ್ರಿಯೆಯ ಬಗ್ಗೆ, ಸಿಇಟಿ ಬಗ್ಗೆ ಶಿಕ್ಷಣ ತಜ್ಞ ಎ.ಎಸ್. ರವಿ ಮಾಹಿತಿ ನೀಡಿದರು. ನಂತರ ವಿದ್ಯಾರ್ಥಿಗಳು ತಮ್ಮ ಪರೀಕ್ಷಾ ತಯಾರಿ ಮಟ್ಟವನ್ನು ಪರಿಶೀಲಿಸಲು ಅನುಕೂಲವಾಗುವಂತೆ ಅಣಕು ಸಿಇಟಿ ಪರೀಕ್ಷೆ ನಡೆಯಿತು. ಅನೇಕ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಪಾಲ್ಗೊಂಡರು.

ಪ್ರಜಾವಾಣಿ DH ಎಡ್ಯುವರ್ಸ್™ ಪ್ರೀಮಿಯರ್ ಎಜುಕೇಶನ್ ಎಕ್ಸ್‌ಪೋ

ಬೆರಗು ಮೂಡಿಸುವ ಕೃತಕ ಬುದ್ಧಿಮತ್ತೆ: ಬೆಳವಾಡಿ

'ಕೃತಕ ಬುದ್ಧಿಮತ್ತೆ ಜತೆಗಿನ ಜಾಗತಿಕ ಬದಲಾವಣೆಯ ವೇಗ ಬೆರಗು ಮೂಡಿಸುತ್ತಿದೆ. ಭವಿಷ್ಯದ ಮುಂದಿನ ಹೆಜ್ಜೆಗೂ ಸವಾಲಾಗಿದೆ. ತರಗತಿ ಶಿಕ್ಷಣದ ಪರಿಕಲ್ಪನೆಯೇ ಬದಲಾಗಲಿದೆ' ಎಂದು ನಟ ಪ್ರಕಾಶ್ ಬೆಳವಾಡಿ ಹೇಳಿದರು.

ಕೃತಕ ಬುದ್ಧಿಮತ್ತೆಯ ಫಲವಾಗಿ ಬೋಧನೆ, ಕಲಿಕೆಯ ಸ್ವರೂಪವೂ ಬದಲಾಗಲಿದೆ. ಬೋಧಕರು ತಂತ್ರಜ್ಞಾನ ಬಳಸಿಕೊಂಡು ಯಾವುದೇ ಭಾಷೆಯಲ್ಲಾದರೂ ಕಲಿಸಬಹುದು. ವಿದ್ಯಾರ್ಥಿಗಳು ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳಿಗಾಗಿ ಮಾತ್ರ ಶಾಲೆಗೆ ಹೋಗಬೇಕಾಗುವ ದಿನಗಳು ಬರುತ್ತವೆ ಎಂದರು.

ತಂತ್ರಜ್ಞಾನದ ಬಳಕೆಯ ವೇಗ ನೋಡಿದರೆ ಜಾಗತಿಕ ಭವಿಷ್ಯ ಏನಾಗಲಿದೆ ಎಂದು ಊಹಿಸಲೂ ಸಾಧ್ಯವಿಲ್ಲ. ಚೆಸ್ ಚಾಂಪಿಯನ್ ಗ್ಯಾರಿ ಕಾಸ್ಪರೋವ್ ಅವರು 1996ರಲ್ಲಿ ಐಬಿಎಂನ ಡೀಪ್‌ಬ್ಲೂ ಅನ್ನು ಎದುರಿಸಿದಾಗ, ಅವರು ಮೊದಲ ಪಂದ್ಯದಲ್ಲಿ ಸೋಲು ಅನುಭವಿಸಿದರು. ಆದರೆ, ಬಹು ಪಂದ್ಯಗಳಲ್ಲಿ ಗೆಲುವು ಸಾಧಿಸಿದರು. ಈಗ ಎಂಜಿನಿಯರಿಂಗ್, ವೈದ್ಯಕೀಯ ಸೇರಿದಂತೆ ಎಲ್ಲ ಕ್ಷೇತ್ರಗಳನ್ನೂ ಕೃತಕ ಬುದ್ಧಿಮತ್ತೆ ಆವರಿಸಿಕೊಂಡಿದೆ ಎಂದು ಹೇಳಿದರು.

ಆಸಕ್ತಿಗೆ ಅನುಗುಣವಾಗಿ ಆಯ್ಕೆ: ನಂದಿನಿ

ಮಕ್ಕಳ ಆಸಕ್ತಿ ಗಮನಿಸಿ, ಭವಿಷ್ಯದ ಗುರಿ ನಿಗದಿ ಮಾಡಿಕೊಳ್ಳುವ ಅವಕಾಶ ಕಲ್ಪಿಸುವುದೇ ಯಶಸ್ಸಿನ ಮೊದಲ ಮೆಟ್ಟಿಲು ಎಂದು ಮಂಡ್ಯ ಜಿಲ್ಲಾ ಪಂಚಾಯಿತಿ ಸಿಇಒ ಕೆ.ಆರ್. ನಂದಿನಿ ಹೇಳಿದರು.

'ಎಡ್ಯುವರ್ಸ್'ನಲ್ಲಿ ಪ್ರೇರಣಾ ಭಾಷಣ ಮಾಡಿದ ಅವರು, ಮಕ್ಕಳ ಮನಸ್ಸಿನಲ್ಲಿ ಮೂಡಿದ ಆಸಕ್ತಿಕರ ವಿಷಯಗಳನ್ನು ಗುರುತಿಸಿ, ಆಸರೆಯಾಗಿ ನಿಂತರೆ, ಅವಕಾಶಗಳನ್ನು ಮಾಡಿಕೊಟ್ಟರೆ ಆಯಾ ಕ್ಷೇತ್ರಗಳಲ್ಲಿ ಅದ್ಭುತ ಸಾಧನೆ ಸಾಧ್ಯವಾಗುತ್ತದೆ ಎಂದು ಹೇಳಿದರು. ವಿಶ್ವ ಚೆಸ್ ಚಾಂಪಿಯನ್ ಗುಕೇಶ್ ಅವರ ಕನಸಿಗೆ ಪೋಷಕರು ನೀರೆರೆದ ರೀತಿಯನ್ನು ನಂದಿನಿ ಅವರು ಎಳೆಎಳೆಯಾಗಿ ಬಿಡಿಸಿಟ್ಟರು.

ಮಕ್ಕಳಿಗೆ ತುಂಬಾ ಸ್ವಾತಂತ್ರ್ಯ ಕೊಡುವುದು, ತುಂಬಾ ನಿರ್ಬಂಧ ಹಾಕುವುದು ಎರಡೂ ಅಪಾಯಕಾರಿ. ಸಾಮಾಜಿಕ ಜಾಲತಾಣ, ಅತಿಯಾದ ತಾಂತ್ರಿಕತೆಯ ಅಪಾಯಗಳಿಗೆ ಮಕ್ಕಳು ಒಳಗಾಗದಂತೆ ಎಚ್ಚರಿಕೆ ವಹಿಸಬೇಕು ಎಂದರು. ಸರ್ಕಾರಿ ವ್ಯವಸ್ಥೆ ಎಂದರೆ ಭ್ರಷ್ಟಾಚಾರ, ಒತ್ತಡ ಎಂದು ಪಲಾಯನ ಮಾಡುವ ಬದಲು ವ್ಯವಸ್ಥೆಯ ಒಳಗಿದ್ದು ಸುಧಾರಣೆ ತರಲು ಯುವಕರು ಮನಸ್ಸು ಮಾಡಬೇಕು. ಆಡಳಿತದ ಭಾಗವಾಗಬೇಕು ಎಂದು ಸಲಹೆ ನೀಡಿದರು.

ಅಭಿಪ್ರಾಯಗಳು



ಭಾನುವಾರವೇ ನನಗೆ ನ್ಯಾಷನಲ್ ಡಿಫೆನ್ಸ್ ಅಕಾಡೆಮಿ (ಎನ್‌ಡಿಎ) ಪ್ರವೇಶ ಪರೀಕ್ಷೆ ಇದೆ. ಅದಕ್ಕೂ ಹಾಗೂ ಸಿಇಟಿ ಪರೀಕ್ಷೆಗೂ ಉಪಯೋಗವಾಗಬಹುದು ಎಂದು ಹರಪನಹಳ್ಳಿಯಿಂದ ಬಂದೆ. ಮುಂದೆ ಯಾವ ಕೋರ್ಸ್ ಮಾಡಬಹುದು ಎಂಬ ಬಗ್ಗೆ ಇಲ್ಲಿ ನನಗೆ ಸ್ಪಷ್ಟತೆ ದೊರೆಯಿತು. 'ಎಐ' ವಿಷಯ ತಗೊಂಡು ಎಂಜಿನಿಯರಿಂಗ್ ಮಾಡಲು ನಿರ್ಧರಿಸಿದ್ದೇನೆ.

ಅಮೋಘ ಜಿ., ವಿದ್ಯಾರ್ಥಿ, ಹರಪನಹಳ್ಳಿ



ಯಾವ ಕಾಲೇಜನ್ನು ಆಯ್ಕೆ ಮಾಡಿಕೊಳ್ಳಬೇಕು? ಯಾವ ವಿಷಯ ತೆಗೆದುಕೊಂಡರೆ ಒಳ್ಳೆಯದು ಎಂಬ ಪ್ರಶ್ನೆಗಳು ನನ್ನಲ್ಲಿತ್ತು. ಉತ್ತಮ ಗುಣಮಟ್ಟದ ಅನೇಕ ಕಾಲೇಜುಗಳ ವಿವರಗಳು ಇಲ್ಲಿ ಒಂದೇ ಕಡೆ ಸಿಕ್ಕಿತು. 'ಪ್ರಜಾವಾಣಿ', 'ಡೆಕ್ಕನ್ ಹೆರಾಲ್ಡ್' ಎಲ್ಲ ಪ್ರಮುಖ ವಿದ್ಯಾಸಂಸ್ಥೆಗಳನ್ನು ಒಂದೆಡೆ ಸೇರಿಸಿ ಒಳ್ಳೆಯ ಕೆಲಸ ಮಾಡಿದೆ.

ನಿಹಾರಿಕಾ, ವಿದ್ಯಾರ್ಥಿನಿ, ಚಿಕ್ಕಬಾಣಾವರ



ಸಾಫ್ಟ್‌ವೇರ್‌ಗಿಂತ ಮೆಕ್ಯಾನಿಕಲ್ ಎಂಜಿನಿಯರಿಂಗ್ ಕ್ಷೇತ್ರವೇ ಚೆನ್ನಾಗಿದೆ ಎಂಬುದನ್ನು 'ಎಡ್ಯುವರ್ಸ್'ನಲ್ಲಿ ಕಂಡುಕೊಂಡೆ. ಸಿಇಟಿಗೆ ತಯಾರಾಗುವ ಬಗೆ, ಮುಂದಿನ ಕೋರ್ಸ್‌ಗಳ ಆಯ್ಕೆಗೆ 'ಎಡ್ಯುವರ್ಸ್'ನಲ್ಲಿ ಮಾರ್ಗದರ್ಶನ ದೊರೆಯಿತು.

ಮಧು, ವಿದ್ಯಾರ್ಥಿ, ನೆಲಮಂಗಲ



ನಮ್ಮ ಸುತ್ತಮುತ್ತಲಿನಲ್ಲಿ ಹಲವು ಕಾಲೇಜುಗಳಿವೆ. ಯಾವುದನ್ನು ಆಯ್ಕೆ ಮಾಡಬೇಕು? ಯಾವುದನ್ನು ಬಿಡಬೇಕು ಎಂಬ ಗೊಂದಲಗಳಿದ್ದವು. ಎಲ್ಲಿ ವಿದ್ಯಾಭ್ಯಾಸ ಮಾಡಿದರೆ ಒಳ್ಳೆಯದು ಎಂಬ ಕಲ್ಪನೆ ಇರಲಿಲ್ಲ. ಬೇರೆ ಬೇರೆ ಕಾಲೇಜುಗಳಲ್ಲಿ ಬೇರೆ ಬೇರೆ ಕೋರ್ಸ್‌ಗಳಿವೆ. ಅದರಲ್ಲಿ ನಮಗೆ ಯಾವುದು ಸೂಕ್ತ ಎಂದು ಆಯ್ಕೆ ಮಾಡಿಕೊಳ್ಳುವ ಅವಕಾಶ ಸಿಕ್ಕಿತು.

ಯೋಗಶ್ರೀ, ವಿದ್ಯಾರ್ಥಿನಿ, ಬೈಯಪ್ಪನಹಳ್ಳಿ



'ಎಡ್ಯುವರ್ಸ್' ಸಮ್ಮೇಳನ ನಡೆಯುತ್ತಿದೆ ಎಂದು ತಂದೆ ತಿಳಿಸಿ, ಇಲ್ಲಿಗೆ ಕರೆದುಕೊಂಡು ಬಂದರು. ಹೊಸಲೋಕ ಇಲ್ಲಿ ಅನಾವರಣಗೊಂಡಿದೆ. ಕಂಪ್ಯೂಟರ್ ಸೈನ್ಸ್ ತಗೊಬೇಕು ಎಂಬ ಯೋಚನೆ ಇದೆ. ಜತೆಗೆ ಬೇರೆ ಯಾವೆಲ್ಲ ಕೋರ್ಸ್‌ಗಳಿವೆ ಎಂದು ತಿಳಿಯಲು ಈ ಸಮ್ಮೇಳನ ಸಹಕಾರಿಯಾಯಿತು.

ಐಶ್ವರ್ಯ, ವಿದ್ಯಾರ್ಥಿನಿ, ರಾಜಾಜಿನಗರ



'ಎಡ್ಯುವರ್ಸ್'ನಲ್ಲಿ ವಿವಿಧ ಕಾಲೇಜುಗಳ ಮಾಹಿತಿ ಸಿಗುತ್ತದೆ. ಹೋಗಿ ಬರೋಣ ಎಂದು ಸ್ನೇಹಿತೆಯರು ತಿಳಿಸಿದರು. ಹಾಗಾಗಿ ಇಲ್ಲಿ ಬಂದೆವು. ಎಷ್ಟೊಂದು ಕೋರ್ಸ್‌ಗಳಿವೆ ಎಂಬುದು ಇಲ್ಲಿ ಬಂದ ಮೇಲೆ ಗೊತ್ತಾಯಿತು.

ತೇಜಾ ಹಸ್ಸಿ, ವಿದ್ಯಾರ್ಥಿನಿ, ಫ್ರೇಜರ್ ಟೌನ್



ಯಾವ ಕಾಲೇಜಿನಲ್ಲಿ ಯಾವ ಕೋರ್ಸ್‌ಗಳಿವೆ? ಅದರ ಶುಲ್ಕ ಎಷ್ಟು? ಮಕ್ಕಳ ಭವಿಷ್ಯಕ್ಕೆ ಯಾವ ಕೋರ್ಸ್ ಒಳ್ಳೆಯದು ಎಂಬುದನ್ನೆಲ್ಲ ಇಲ್ಲಿ ಮಾಹಿತಿ ಪಡೆದುಕೊಂಡೆವು. ನಮ್ಮ ಆರ್ಥಿಕ ಶಕ್ತಿಗೆ ಅನುಗುಣವಾಗಿ ಯಾವ ಕೋರ್ಸ್‌ಗೆ ಮಗನನ್ನು ಸೇರಿಸಬಹುದು ಎಂಬ ಕಲ್ಪನೆ ಬಂತು. 'ಪ್ರಜಾವಾಣಿ', 'ಡೆಕ್ಕನ್ ಹೆರಾಲ್ಡ್' ವಿದ್ಯಾರ್ಥಿ ಸ್ನೇಹಿ ಸಮ್ಮೇಳನ ಆಯೋಜಿಸಿ ಒಳ್ಳೆಯ ಕೆಲಸ ಮಾಡಿದೆ.

ಕರಿಬಸಪ್ಪ ಪಿ., ಪೋಷಕ



ದೇವನಹಳ್ಳಿ ಚಾಣಕ್ಯ ವಿಶ್ವವಿದ್ಯಾಲಯದಿಂದ ಮಳಿಗೆಯನ್ನು ಹಾಕಿದ್ದು, ವಿಶ್ವವಿದ್ಯಾಲಯದಲ್ಲಿ ಇರುವ ಕೋರ್ಸ್‌ಗಳ ಬಗ್ಗೆ ತಿಳಿಸಿಕೊಡುವುದರ ಜತೆಗೆ ವಿದ್ಯಾರ್ಥಿಗಳ, ಪೋಷಕರ ಮನಸ್ಥಿತಿಯನ್ನು ಅರಿಯಲು ಈ ಶಿಕ್ಷಣ ಮೇಳ ಸಹಕಾರಿಯಾಗಿದೆ.

ಹೇಮಂತ್, ಚಾಣಕ್ಯ ವಿವಿ ಮಳಿಗೆ



15 ವರ್ಷಗಳಿಂದ ನಾವು ಮಳಿಗೆಯನ್ನು ಇಲ್ಲಿ ಹಾಕುತ್ತಿದ್ದೇವೆ. ಇಲ್ಲಿ ಸಂಪರ್ಕಿಸಿದ ಅನೇಕರು ಆನಂತರ ನಮ್ಮ ಕಾಲೇಜಿಗೆ ಪ್ರವೇಶ ಪಡೆದು ವಿದ್ಯಾಭ್ಯಾಸ ಮಾಡಿದ್ದಾರೆ. ಪಿಯುಸಿ ಆದ ಮೇಲೆ ಮಾತ್ರವಲ್ಲ, ಎಸ್‌ಎಸ್‌ಎಲ್‌ಸಿ ಮಾಡಿದ ಮೇಲೆ ಮುಂದೇನು ಎಂಬ ಮಾಹಿತಿಯನ್ನೂ ನಾವು ವಿದ್ಯಾರ್ಥಿಗಳಿಗೆ ನೀಡುತ್ತಿದ್ದೇವೆ. ಬೇರೆ ಬೇರೆ ಕಡೆಯಿಂದ ಬಂದಿರುವ ವಿದ್ಯಾರ್ಥಿಗಳು ಮಾಹಿತಿ ಪಡೆಯುತ್ತಿದ್ದಾರೆ.

ಪ್ರತೀಕ್ಷಾ, ಎಟಿಆರ್‌ಐ ವಿಶ್ವವಿದ್ಯಾಲಯ



ಈ ಕಾಲಕ್ಕೆ ಅಗತ್ಯ ಇರುವ ವಿಷಯ ಇಟ್ಟುಕೊಂಡು 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಮೇಳ ನಡೆಸುತ್ತಿದೆ. ಕಾಮೆಡ್-ಕೆ, ನೀಟ್ ಬಗ್ಗೆ ಮಾಹಿತಿ ಮಾತ್ರವಲ್ಲ, ಮುಂದೆ ಮಾಡಬೇಕಾದ ಕೋರ್ಸ್‌ಗಳ ಬಗ್ಗೆಯೂ ನಾವು ವಿದ್ಯಾರ್ಥಿಗಳಿಗೆ ತಿಳಿಸಿಕೊಡಲು, ಕೌನ್ಸೆಲಿಂಗ್ ನಡೆಸಲು ಅವಕಾಶವಾಗಿದೆ.

ಶ್ರದ್ಧಾ, ಲರ್ನ್‌ಟೆಕ್ ಸಮಾಲೋಚಕರು

ನಗರದಲ್ಲಿ ಇಂದು

7ನೇ ವಾರ್ಷಿಕೋತ್ಸವ ಮತ್ತು 'ಸುರ್‌ಸಂಗೀತ್' ಸಾಧಕ ಪ್ರಶಸ್ತಿ ಪ್ರದಾನ: ಅನಂತ ಭಾಗ್ವತ, ಉದ್ಘಾಟನೆ: ಎಚ್.ಎಸ್. ಪರಮೇಶಯ್ಯ, ಪ್ರಶಸ್ತಿ ಪುರಸ್ಕೃತರು: ಎಂ. ಖಾಸೀಮ್ ಮಲ್ಲಿಗೆ ಮಡುವು, ಆಯೋಜನೆ: ಸುರ್‌ಸಂಗೀತ್ ಮ್ಯೂಸಿಕ್ ಅಕಾಡೆಮಿ, ಸ್ಥಳ: ಜ್ಞಾನ ವಿಕಾಸ ಗುರುಕುಲ, ಸರ್ಕಾರಿ ಶಾಲೆ ಬಳಿ, ಬಂಜಾರಪಾಳ್ಯ, ಬೆಳಿಗ್ಗೆ 10

ಆರ್‌ಸಿಬಿ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ: ಆಯೋಜನೆ: ರೋಟರಿ ಕ್ಲಬ್ ಆಫ್ ಬೆಂಗಳೂರು, ಸ್ಥಳ: ಭಾರತೀಯ ವಿದ್ಯಾಭವನ, ರೇಸ್ ಕೋರ್ಸ್ ರಸ್ತೆ, ಬೆಳಿಗ್ಗೆ 10

ಎಚ್.ಎಸ್. ಚಂಪಾವತಿ ಅವರ 'ತಲ್ಲಣ' ಕಾದಂಬರಿ ಬಗ್ಗೆ ಸಾಂಸ್ಕೃತಿಕ ಚರ್ಚೆ: ಅಧ್ಯಕ್ಷತೆ: ಎಚ್.ಎಸ್. ರಾಘವೇಂದ್ರ ರಾವ್, ಮುಖ್ಯ ಅತಿಥಿ: ಸಬಿತಾ ಬನ್ನಾಡಿ, ಪ್ರತಿಕ್ರಿಯೆ: ಗಿರಿಜಾ ಶಾಸ್ತ್ರಿ, ಮಮತಾ ಸಾಗರ್, ಪ್ರತಿಭಾ ಆರ್., ಛಾಯಾ ಶ್ರೀಧರ್, ರೂಮಿ ಹರೀಶ್, ಜಯಲಕ್ಷ್ಮಿ ಪಾಟೀಲ, ಮಧು ಭೂಷಣ್, ಶೈಲಜಾ, ಸಿ.ಜಿ. ಮಂಜುಳಾ, ದು. ಸರಸ್ವತಿ, ಆಯೋಜನೆ: ಮಾನಸ, ನಿಖಿ ಪ್ರಕಾಶನ, ಟೆಕ್‌ಫಿಜ್ ಇಂಕ್ ವೇದಿಕೆ, ಸ್ಥಳ: ಮಹಿಳಾ ವಿಶ್ರಾಂತಿ ಕೊಠಡಿ, ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಬೆಳಿಗ್ಗೆ 10

ಅಂಬೇಡ್ಕರ್ ಜನ್ಮದಿನದ ಅಂಗವಾಗಿ ಅಂಬೇಡ್ಕರ್ ಚಿಂತನೆಗಳು: 'ಅಂಬೇಡ್ಕರ್ ಮತ್ತು ಕಾರ್ಮಿಕ ಕಾನೂನುಗಳು' ವಿಷಯದ ಬಗ್ಗೆ ಉಪನ್ಯಾಸ: ಅಶ್ವಿನಿ ಒಬುಳೇಶ್, 'ಹಿಂದೂ ಕೋಡ್ ಬಿಲ್-ಅಂಬೇಡ್ಕರ್' ವಿಷಯದ ಬಗ್ಗೆ ಉಪನ್ಯಾಸ: ರವಿ ಕುಮಾರ್ ಬಾಗಿ, '1952ರ ಚುನಾವಣೆ ಎಐಎಸ್‌ಸಿಎಫ್ ಪ್ರಣಾಳಿಕೆ' ವಿಷಯದ ಬಗ್ಗೆ ಉಪನ್ಯಾಸ: ಬಿ.ಆರ್. ಮಂಜುನಾಥ್, ಆಯೋಜನೆ: ಜನ ಶಿಕ್ಷಣ ಟ್ರಸ್ಟ್, ಕ್ರಿಯಾ ಮಾಧ್ಯಮ, ಸ್ಥಳ: ಪುಸ್ತಕ ಪ್ರೀತಿ, ಕ್ರಿಯಾ ಮಾಧ್ಯಮ, ನೆಟ್ಟಕಲ್ಲಪ್ಪ ವೃತ್ತ, ಬಸವನಗುಡಿ, ಬೆಳಿಗ್ಗೆ 10.30

ಉಮಾ ಅನಂತ್ ಅವರ 'ಸಂಗೀತ ಸಾಂಗತ್ಯ' ಪುಸ್ತಕ ಬಿಡುಗಡೆ: ಆರ್.ಕೆ. ಪದ್ಮನಾಭ, ಸಂಗೀತ ಕಛೇರಿ: ಬೆಂಗಳೂರು ಸಹೋದರರು, ಆಯೋಜನೆ: ಶ್ರೀಮದ್ ವಾದಿರಾಜ ಆರಾಧನಾ ಟ್ರಸ್ಟ್, ಶಾರದಾ ಕಲಾಕೇಂದ್ರ, ಸ್ಥಳ: ವಾದಿರಾಜ ಕಲಾ ಭವನ, ಅಕ್ಷಯನಗರ, ಹುಳಿಮಾವು, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 10.30

'ಪ್ರೇಮಮಯಿ ಹಿಡಿಂಬೆ' ನಾಟಕ ಪ್ರದರ್ಶನ: ನಿರ್ದೇಶನ: ಬೇಲೂರು ರಘುನಂದನ್, ತಂಡ: ರಂಗ ವಿಜಯಾ, ಆಯೋಜನೆ: ಸ್ನೇಹಲೋಕ ಗೆಳೆಯರ ಬಳಗ, ಸ್ಥಳ: ಕೇಶವ ಕಲ್ಪ, ಮಲ್ಲೇಶ್ವರ, ಬೆಳಿಗ್ಗೆ 11

24ನೇ ಶಾಖೆಯ ಉದ್ಘಾಟನೆ: ಬಿ.ಟಿ. ನಾಗರಾಜ್ ರೆಡ್ಡಿ, ಸುದರ್ಶನ ಚನ್ನಂಗಿಹಳ್ಳಿ, ಚನ್ನೇಗೌಡ ಕೆ.ಎನ್., ಉಪಸ್ಥಿತಿ: ಹಂಪ ನಾಗರಾಜಯ್ಯ, ಮಾನಸ, ಡಿ.ವಿ. ಗುರುಪ್ರಸಾದ್, ಜೋಗಿ, ರಾ.ನಂ.ಚಂದ್ರಶೇಖರ, ಬೇಲೂರು ರಾಮಮೂರ್ತಿ, ಡುಂಡಿರಾಜ್, ಎಚ್.ಎಲ್. ಪುಷ್ಪ, ಬಿ.ಆರ್. ಲಕ್ಷ್ಮಣರಾವ್, ಶಶಿಧರ ಹಾಲಾಡಿ, ವತ್ಸಲಾ ಮೋಹನ್, ಸಿ. ಚಂದ್ರಪ್ಪ, ಎಂ.ಎಸ್. ನರಸಿಂಹಮೂರ್ತಿ, ಜಗದೀಶಶರ್ಮಾ ಸಂಪ, ಆಯೋಜನೆ ಹಾಗೂ ಸ್ಥಳ: ಸಪ್ನ ಬುಕ್ ಹೌಸ್, ಎಂ5 ಇ-ಸಿಟಿ ಮಾಲ್, ಎಲೆಕ್ಟ್ರಾನಿಕ್ ಸಿಟಿ 2ನೇ ಹಂತ, ಹೊಸೂರು ರಸ್ತೆ, ಬೆಳಿಗ್ಗೆ 11.30

ಅಂಬೇಡ್ಕರ್ ಜಯಂತಿ ಪ್ರಯುಕ್ತ 'ನಮ್ಮ ಹಬ್ಬ-ಅಂಬೇಡ್ಕರ್ ಹಬ್ಬ': ಉದ್ಘಾಟನೆ: ಡಿ.ಕೆ. ಸುರೇಶ್, ಅಧ್ಯಕ್ಷತೆ: ಆಯುಷ್ಮತಿ ಸುಧಾರಾಣಿ, ಅಂಬೇಡ್ಕರ್ ಭಾವಚಿತ್ರಕ್ಕೆ ಮಾಲಾರ್ಪಣೆ: ನಾಗಲಕ್ಷ್ಮಿ ಚೌಧರಿ, ಆಯೋಜನೆ: ಕರ್ನಾಟಕ ದಲಿತ ಸಂಘರ್ಷ ಸಮಿತಿ, ಸ್ಥಳ: ಪೀಣ್ಯ ಕೈಗಾರಿಕಾ ಭವನ, ಪೀಣ್ಯ, ಬೆಳಿಗ್ಗೆ 11.30

ಎನ್. ನರಸಿಂಹಯ್ಯ ಅವರ ಜನ್ಮ ಶತಮಾನೋತ್ಸವ ವರ್ಷಾಚರಣೆ ಪ್ರಯುಕ್ತ ಯುಗಾದಿ ಕವಿಗೋಷ್ಠಿ, ರಾಜ್‌ಕುಮಾರ್ ಗೀತೆಗಳ ಗಾಯನ, ಪ್ರಶಸ್ತಿ ಪ್ರದಾನ: ಬಿ. ಶೃಂಗೇಶ್ವರ್, ಅಧ್ಯಕ್ಷತೆ: ಸದಾಶಿವಯ್ಯ ಜರಗನಹಳ್ಳಿ, ಪ್ರಶಸ್ತಿ ಪುರಸ್ಕೃತರು: ಎಂ.ಕೆ. ಮಂಜುನಾಥ್, ರುದ್ರೇಶ್ ಎಸ್., ಎಚ್. ಎಸ್. ಕಮಲಮ್ಮ, ಆಯೋಜನೆ: ಸಮ್ಮಿಲನ, ಸ್ಥಳ: ಕೆನ್ ಕಲಾಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 11.30

ಪ್ರಾಂತೀಯ ಸಮ್ಮೇಳನ: ಅತಿಥಿ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಅಧ್ಯಕ್ಷತೆ: ಎಸ್. ಮನೋಜ್ ಕುಮಾರ್, ಉಪನ್ಯಾಸ: ಹಿರೇಮಗಳೂರು ಕಣ್ಣನ್, ನಾಗಶ್ರೀ ತ್ಯಾಗರಾಜ್, ಆಯೋಜನೆ: ಲಯನ್ಸ್ ಇಂಟರ್‌ನ್ಯಾಷನಲ್ ಡಿಸ್ಟ್ರಿಕ್ಟ್-317ಎ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಮಧ್ಯಾಹ್ನ 3.30


ಪುರುಷೋತ್ತಮ ಬಿಳಿಮಲೆ

'ಪಾಂಗಾಳ ಡಾಕ್ಟ್ರು' ಪುಸ್ತಕ ಬಿಡುಗಡೆ: ಪುರುಷೋತ್ತಮ ಬಿಳಿಮಲೆ, ಪುಸ್ತಕದ ಬಗ್ಗೆ ಮಾತು: ಎಸ್.ಆರ್. ವಿಜಯಶಂಕರ, ಉಪಸ್ಥಿತಿ: ಆರ್.ಆರ್. ಪಾಂಗಾಳ್, ಚಂದ್ರಶೇಖರ ಚಡಗ, ದೀಪಾ ಫಡ್ಕೆ, ಆಯೋಜನೆ: ಶಿವರಾಮ ಕಾರಂತ ವೇದಿಕೆ, ತರಳಬಾಳು ಕೇಂದ್ರ, ಸ್ಥಳ: ತರಳಬಾಳು ಮಿನಿ ಸಭಾಂಗಣ, ತರಳಬಾಳು ಕೇಂದ್ರ, ಆರ್.ಟಿ. ನಗರ, ಸಂಜೆ 4

ಬಿಎಚ್‌ಎಚ್‌ಟಿ ವಿದ್ಯಾರ್ಥಿವೇತನ ವಿತರಣೆ: ಅತಿಥಿ: ವಿ. ಶ್ರೀಶಾನಂದ, ಚತುರ್ವೇದಿ ವೇದವ್ಯಾಸಾಚಾರ್, ಎಂ.ಜಿ. ವೇದವ್ಯಾಸ್, ಪ್ರಭಂಜನ ಹಾವೇರಿ, ಆಯೋಜನೆ: ಬಿಲಿಯನ್ ಹೆಲ್ಪಿಂಗ್ ಹ್ಯಾಂಡ್ಸ್ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ ಶಾಲೆ, ಚಾಮರಾಜಪೇಟೆ, ಸಂಜೆ 4

ಭರತನಾಟ್ಯ ರಂಗಪ್ರವೇಶ: ರಶ್ಮಿ ಎಂ. ಹೆಗಡೆ, ಅತಿಥಿಗಳು: ವೈ.ಕೆ. ಸಂಧ್ಯಾ ಶರ್ಮಾ, ಲಕ್ಷ್ಮಿ ನಾಗೇಶ್, ಬೃಂದಾ ಕೃಷ್ಣ ಅಯ್ಯಂಗಾರ್, ವಿನಾಯಕ್ ಮಹಾಬಲೇಶ್ವರ ಭಟ್, ಉಷಾ ಬಸಪ್ಪ, ಆಯೋಜನೆ: ರಾಜೇಶ್ವರಿ ಹೆಗಡೆ, ಮಂಜುನಾಥ್ ಹೆಗಡೆ, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ.ರಸ್ತೆ, ಸಂಜೆ 5

ಡುಂಡಿರಾಜ್ ಅವರ 'ಪುಕ್ಕಟೆ ಸಲಹೆ' ನಾಟಕದ ನೂರನೇ ಪ್ರದರ್ಶನ: ನಿರ್ದೇಶನ: ಅಶೋಕ್ ಬಿ., ತಂಡ: ವಿಶ್ವಪಥ ಕಲಾ ಸಂಗಮ, ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5

'ಅಪ್ಪ-ಅಪ್ಪು' ಗೀತ ನಮನ: ಗಾಯಕರು: ಶ್ರೀನಾಥ್ ಭಾರದ್ವಾಜ್, ಜ್ಯೋತಿ ರವಿ ಪ್ರಕಾಶ್, ವಿಜಯಾನಂದ್ ನಾಯಕ್, ರಾಜಶೇಖರ ನುಲಿ, ಲಕ್ಷ್ಮೀ ಶ್ರೇಯಾಂಸಿ, ಮಂಜುನಾಥ್ ನಾಗಪ್ಪ, ಭೂಪಶ್ರೀ ನುಲಿ, ಅತಿಥಿಗಳು: ಎಸ್.ಎ. ಚಿನ್ನೇಗೌಡ, ಎಸ್.ಎ. ಗೋವಿಂದರಾಜ್, ಲಕ್ಷ್ಮೀ ಗೋವಿಂದರಾಜ್, ಷಣ್ಮುಖ ಗೋವಿಂದರಾಜ್, ಆಯೋಜನೆ: ಕಾಡುಮಲ್ಲೇಶ್ವರ ಗೆಳೆಯರ ಬಳಗ, ಸ್ಥಳ: ಕಾಡುಮಲ್ಲೇಶ್ವರ ಬಯಲು ರಂಗಮಂಟಪ, ಮಲ್ಲೇಶ್ವರ, ಸಂಜೆ 6.30

'ಅನುಗ್ರಹ' ಪೌರಾಣಿಕ ನಾಟಕ ಪ್ರದರ್ಶನ: ನಿರ್ದೇಶನ: ಬಾಷ್ ರಾಘವೇಂದ್ರ, ತಂಡ: ಅಂತರಂಗ ಬಹಿರಂಗ, ಸ್ಥಳ: ಕೆ.ಇ.ಎ. ಪ್ರಭಾತ್ ರಂಗಮಂದಿರ, ಬಸವೇಶ್ವರನಗರ, ಸಂಜೆ 7

ಬೆಂಗಳೂರು ಕರಗ ಮಹೋತ್ಸವ: ಪುರಾಣ ಪ್ರವಚನ, ದೇವಸ್ಥಾನದಲ್ಲಿ ಗಾವು ಶಾಂತಿ, ಆಯೋಜನೆ: ಧಾರ್ಮಿಕ ದತ್ತಿ ಇಲಾಖೆ, ಸ್ಥಳ: ಧರ್ಮರಾಯಸ್ವಾಮಿ ದೇವಸ್ಥಾನ, ತಿಗಳರಪೇಟೆ, ರಾತ್ರಿ 2.

ರಾಮನವಮಿ ವಿಶೇಷ



32ನೇ ಶ್ರೀರಾಮನವಮಿ ಸಂಗೀತೋತ್ಸವ: ಬೆಳಿಗ್ಗೆ 9ರಿಂದ ಗೌರವ ಸಮರ್ಪಣೆ ಹಾಗೂ ಸಂಗೀತ ಕಛೇರಿ: ಆರ್.ಎ. ರಮಾಮಣಿ, ಸಿ.ಎನ್. ಚಂದ್ರಶೇಖರ್, ಸಿ. ಚೆಲುವರಾಜು, ಸುಕನ್ಯಾ ರಾಮಗೋಪಾಲ್, ಮುಖ್ಯ ಅತಿಥಿ: ಎಂ. ಸೂರ್ಯಪ್ರಸಾದ್, ಸಂಜೆ 4.45ರಿಂದ **ವೀಣೆ-ವೇಣು-ವಯೋಲಿನ್:** ಶುಭಾ ಸಂತೋಷ್, ವಾಣಿ ಮಂಜುನಾಥ್, ಪ್ರೇಮಾ ವಿವೇಕ್, ಕೌಶಿಕ್ ಶ್ರೀಧರ್, ರಘುನಂದನ್ ಬಿ.ಎಸ್., ಸಂಜೆ 7ರಿಂದ 'ಅಮ್ಮ ರಿಟೈರ್ ಆಗ್ತಾಳೆ!?' ನಾಟಕ ಪ್ರದರ್ಶನ, ನಿರ್ದೇಶನ: ಬಿ.ವಿ. ರಾಜಾರಾಂ, ತಂಡ: ಕಲಾ ಗಂಗೋತ್ರಿ, ಆಯೋಜನೆ ಹಾಗೂ ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ

ವಸಂತ ನವರಾತ್ರಿ ಶ್ರೀರಾಮೋತ್ಸವ: ಶ್ರೀರಾಮ ಪಟ್ಟಾಭಿಷೇಕ, ಮಹಾಮಂಗಳಾರತಿ, ಅನ್ನಸಂತರ್ಪಣೆ, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಬೆಳಿಗ್ಗೆ 10ರಿಂದ

87ನೇ ರಾಮೋತ್ಸವ ಸಮಾರಂಭ: ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ: ಗುರು ಸಮರ್ಥ ಸಂಗೀತ ಶಾಲೆ ವಿದ್ಯಾರ್ಥಿಗಳು, ತಬಲಾ ತರಂಗ: ಅಮೃತೇಶ್ ಕುಲಕರ್ಣಿ, 'ರಾಮ ಪಥ-ನ್ಯಾಯ ಪಥ' ವಿಚಾರಧಾರೆ, ಅಧ್ಯಕ್ಷತೆ: ವಿ. ಶ್ರೀಶಾನಂದ, ಮುಖ್ಯ ಅತಿಥಿಗಳು: ಪಾವಗಡ ಪ್ರಕಾಶ ರಾವ್, ಆರ್.ಕೆ. ಪದ್ಮನಾಭ, ಕರ್ನಾಟಕ ಶಾಸ್ತ್ರೀಯ ಸಂಗೀತ, ಗಾಯನ: ಆರ್.ಕೆ. ಪದ್ಮನಾಭ, ಪಿಟೀಲು: ಸಿ.ಎನ್. ಚಂದ್ರಶೇಖರ್, ಮೃದಂಗ: ಸಿ.ಚೆಲುವರಾಜು, ಖಂಜಿರ: ವ್ಯಾಸವಿಠ್ಠಲ, ಆಯೋಜನೆ: ಎನ್.ಆರ್. ಕಾಲೊನಿ ಶ್ರೀರಾಮಮಂದಿರಂ ಟ್ರಸ್ಟ್, ಸ್ಥಳ: ಶ್ರೀರಾಮಮಂದಿರ, ಎನ್.ಆರ್. ಕಾಲೊನಿ, ಬಸವನಗುಡಿ, ಸಂಜೆ 4.15ರಿಂದ

87ನೇ ಶ್ರೀ ರಾಮನವಮಿ ಸಂಗೀತೋತ್ಸವ: ಸಂಸ್ಥಾಪನಾ ದಿನ ಮತ್ತು 'ಎಸ್.ವಿ. ನಾರಾಯಣಸ್ವಾಮಿ ರಾವ್ ಗ್ಲೋಬಲ್ ಅವಾರ್ಡ್' ಪ್ರದಾನ: ಪ್ರಶಸ್ತಿ ಪುರಸ್ಕೃತರು: ವಿದ್ಯಾಭೂಷಣ, ಸಂಗೀತ ಕಛೇರಿ: ರಂಜನಿ, ಗಾಯತ್ರಿ, ವಿಠ್ಠಲ್ ರಂಗನ್, ಮನೋಜ್ ಶಿವ, ಕೃಷ್ಣ ಎಸ್., ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5.30


ವಿದ್ಯಾಭೂಷಣ

'ಅಂಬೇಡ್ಕರ್ ಪ್ರಶಸ್ತಿ: ಆರೋಪ ನ್ಯಾಯಸಮ್ಮತವಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಡಾ.ಬಿ.ಆರ್.ಅಂಬೇಡ್ಕರ್ ಪ್ರಶಸ್ತಿಗಳನ್ನು ಬಲಗೈ ಸಮುದಾಯದವರಿಗೆ ಮಾತ್ರ ನೀಡಲಾಗಿದ್ದು, ಇದರಲ್ಲಿ ಸಚಿವರು, ಅಧಿಕಾರಿಗಳ ಕೈವಾಡವಿದೆ ಎಂಬ ಆರೋಪದಲ್ಲಿ ಯಾವುದೇ ಹುರುಳಿಲ್ಲ. ಈ ಆರೋಪ ನ್ಯಾಯಸಮ್ಮತ ವಲ್ಲ. ಎಡಗೈ- ಬಲಗೈ ಸಮುದಾಯಗಳ ಮಧ್ಯೆ ಬಿರುಕು ಮೂಡಿಸುವ ಪ್ರಯತ್ನವಿದು' ಎಂದು ಛಲವಾದಿ ಪರಿಷತ್‌ನ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ. ಮನೋಹರ್ ಹೇಳಿದ್ದಾರೆ.

'ಅಸ್ಪೃಶ್ಯ ಸಮುದಾಯಗಳ ಮಧ್ಯೆ ಸಾಮರಸ್ಯ ಮೂಡಿಸುವ ಅಗತ್ಯವಿದೆ. ಈ ಕಾರಣಕ್ಕೆ ಅಂಬೇಡ್ಕರ್ ಪ್ರಶಸ್ತಿಗೆ ಈಗಾಗಲೇ ಆಯ್ಕೆ ಮಾಡಿರುವ 15 ಸಾಧಕರ ಜೊತೆಗೆ, ಪ್ರತಿ ವರ್ಷ ತಲಾ ಎರಡರಂತೆ ಇನ್ನೂ ಆರು ಪ್ರಶಸ್ತಿಗಳನ್ನು ಹೆಚ್ಚುವರಿಯಾಗಿ ಸೃಷ್ಟಿಸಿ ಈ ಎರಡೂ ಅಸ್ಪೃಶ್ಯ ಸಮುದಾಯದ ಹಿರಿಯ ಮುಖಂಡರಿಗೆ ಸಮನಾಗಿ ನೀಡಬೇಕು' ಎಂದು ಅವರು ಆಗ್ರಹಿಸಿದ್ದಾರೆ.

'ರಾಜ್ಯ ಸರ್ಕಾರ ಬಾಬು ಜಗಜೀವನ್ ರಾಂ ಸ್ಮರಣಾರ್ಥ ಏ. 5ರಂದು 2023, 2024 ಮತ್ತು 2025ನೇ ಸಾಲಿನ 15 ಪ್ರಶಸ್ತಿ ಪ್ರದಾನ ಮಾಡಿತ್ತು. ಆ ಎಲ್ಲ ಪ್ರಶಸ್ತಿಗಳಿಗೆ ಎಡಗೈ ಸಮುದಾಯವರನ್ನು ಆಯ್ಕೆ ಮಾಡಲಾಗಿತ್ತು. ಬಲಗೈ ಸಮುದಾಯವನ್ನು ಕಡೆಗಣಿಸಲಾಗಿದೆ. 'ಅಂಬೇಡ್ಕರ್ ಪ್ರಶಸ್ತಿ'ಗೆ 15 ಸಾಧಕರನ್ನು ಆಯ್ಕೆ ಮಾಡುವ ವೇಳೆಯಲ್ಲಿ ಈ ತಪ್ಪನ್ನು ಸರ್ಕಾರ ಸರಿಪಡಿಸಿದೆ' ಎಂದಿದ್ದಾರೆ.

'ಜೀವಾಗೆ ಕಿರುಕುಳ, ಚಿತ್ರಹಿಂಸೆ ಸಾಬೀತು'

ಬೆಂಗಳೂರು: ವಕೀಲೆ, ಉದ್ಯಮಿ ಜೀವಾ ಆತ್ಮಹತ್ಯೆ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ದಳದ (ಎಸ್‌ಐಟಿ) ಅಧಿಕಾರಿಗಳು, ಹೈಕೋರ್ಟ್‌ಗೆ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

ಡಿಸಿಪಿ ಅಕ್ಷಯ್ ಮಚೀಂದ್ರ, ನಿಶಾ ಜೇಮ್ಸ್ ನೇತೃತ್ವದ ಎಸ್‌ಐಟಿ 2,300 ಪುಟಗಳ ದೋಷಾರೋಪ ಪಟ್ಟಿ ಸಲ್ಲಿಸಿದೆ ಎಂದು ಗೊತ್ತಾಗಿದೆ. 'ಜೀವಾ ಅವರಿಗೆ ಸಿಐಡಿ ಡಿವೈಎಸ್‌ಪಿಯಾಗಿದ್ದ ಕನಕಲಕ್ಷ್ಮಿ ಅವರು ಕಿರುಕುಳ ಹಾಗೂ ಚಿತ್ರಹಿಂಸೆ ನೀಡಿರುವುದು' ಸಾಬೀತಾಗಿದೆ' ಎಂದು ಉಲ್ಲೇಖಿಸಲಾಗಿದೆ. ಸಾಕ್ಷಿದಾರರ ಹೇಳಿಕೆ, ವಿಡಿಯೊ ಸಾಕ್ಷ್ಯಗಳನ್ನು ವರದಿ ಜತೆಗೆ ಸಲ್ಲಿಸಲಾಗಿದೆ. ಬನಶಂಕರಿ ಠಾಣಾ ವ್ಯಾಪ್ತಿಯ ರಾಘವೇಂದ್ರ ಲೇಔಟ್‌ನ ಮನೆಯಲ್ಲಿ ಕಳೆದ ನವೆಂಬರ್ 22ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು. ಕನಕಲಕ್ಷ್ಮಿ ಕಿರುಕುಳದ ಬಗ್ಗೆ ಮರಣ ಪತ್ರದಲ್ಲಿಉಲ್ಲೇಖಿಸಿದ್ದರು. ಜೀವಾ ಸಹೋದರಿ ಸಂಗೀತಾ ದೂರು ಆಧರಿಸಿ ಪೊಲೀಸರು ತನಿಖೆ ಆರಂಭಿಸಿದ್ದರು. ಆನಂತರ, ಸಿಬಿಐ ಅಧಿಕಾರಿಗಳನ್ನೂ ಒಳಗೊಂಡ ಎಸ್‌ಐಟಿಯನ್ನು ಹೈಕೋರ್ಟ್ ರಚಿಸಿತ್ತು.


ಜೀವಾ


ಕನಕಲಕ್ಷ್ಮಿ

'ನಕಲಿ ದಾಖಲೆ ಸೃಷ್ಟಿ, ಮಾನಸಿಕ ಹಿಂಸೆ ನೀಡುವುದರ ಜತೆಗೆ ತನಿಖಾಧಿಕಾರಿ, ಈ ಪ್ರಕರಣದ ತನಿಖೆಯನ್ನು ವೈಯಕ್ತಿಕವಾಗಿ ಪರಿಗಣಿಸಿದ್ದರು ಎಂಬುದು ಸಾಬೀತಾಗಿದೆ' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

₹35 ಕೋಟಿ ಅಕ್ರಮದ ತನಿಖೆ: ಭೋವಿ ನಿಗಮದಲ್ಲಿ ನಡೆದಿದ್ದ ₹35 ಕೋಟಿ ಅಕ್ರಮ ಪ್ರಕರಣದ ತನಿಖೆ ಸಿಐಡಿಗೆ ವಹಿಸಲಾಗಿತ್ತು. ಜೀವಾ ಮಾಲೀಕತ್ವದ ಸಂಸ್ಥೆ ಅನ್ನಿಕಾ ಎಂಟರ್ ಪ್ರೈಸಸ್‌ಗೆ ₹7.16 ಕೋಟಿ, ಅವರ ಸಹೋದರಿಯ-ಹರ್ನಿತಾ ಕ್ರಿಯೇಷನ್‌ಗೆ ₹3.79 ಕೋಟಿ, ಉಳಿದ ಹಣ ಮಾಜಿ ಎಂ.ಡಿಗಳ ಆಪ್ತರ ಪಾಲುದಾರಿಕೆ ಸಂಸ್ಥೆಗಳಿಗೆ ವರ್ಗಾವಣೆ ಆಗಿತ್ತು. ಕನಕಲಕ್ಷ್ಮಿ ಪ್ರಕರಣದ ತನಿಖಾಧಿಕಾರಿಯಾಗಿ ನೇಮಕಗೊಂಡಿದ್ದರು.

ಮಾರ್ಚ್‌ನಲ್ಲಿ ಬಂಧನ: ಜೀವಾಗೆ ಕಿರುಕುಳ ನೀಡಿದ್ದ ಆರೋಪದ ಮೇಲೆ ಮಾರ್ಚ್ 11ರಂದು ಕನಕಲಕ್ಷ್ಮಿ ಅವರನ್ನು ಬಂಧಿಸಲಾಗಿತ್ತು.

ಬೆಲೆ ಏರಿಕೆ ವಿರುದ್ಧ ಬೆಂಗಳೂರಿನಲ್ಲಿ ಜೆಡಿಎಸ್‌ನಿಂದ 'ಸಾಕಪ್ಪಾ ಸಾಕು ಕಾಂಗ್ರೆಸ್ ಸರ್ಕಾರ' ಬೃಹತ್ ಪ್ರತಿಭಟನೆ

₹2 ಸಾವಿರ ಕೊಟ್ಟು, ₹10ಸಾವಿರ ಲೂಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ಯಾರಂಟಿ ಹೆಸರಿನಲ್ಲಿ ಮಹಿಳೆಯರಿಗೆ ₹2,000 ನೀಡುತ್ತಿರುವ ಕಾಂಗ್ರೆಸ್ ಸರ್ಕಾರ, ಪ್ರತಿ ಕುಟುಂಬದಿಂದ ಹತ್ತಾರು ಸಾವಿರ ರೂಪಾಯಿ ವಸೂಲಿ ಮಾಡುತ್ತಿದೆ. ಗ್ಯಾರಂಟಿ ವೆಚ್ಚವನ್ನು ಭರಿಸಿಕೊಳ್ಳಲು ಬೆಲೆ ಏರಿಕೆ ಮಾಡಿ ಜನರನ್ನು ಲೂಟಿ ಮಾಡುತ್ತಿದೆ' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ದೂರಿದರು.

ಬೆಲೆ ಏರಿಕೆ ಖಂಡಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಜೆಡಿಎಸ್ ಆಯೋಜಿಸಿದ್ದ, 'ಸಾಕಪ್ಪಾ ಸಾಕು ಕಾಂಗ್ರೆಸ್ ಸರ್ಕಾರ' ಪ್ರತಿಭಟನಾ ಸಮಾವೇಶದಲ್ಲಿ ಅವರು ಮಾತನಾಡಿದರು. 'ಸಿದ್ದರಾಮಯ್ಯ ಅವರು 16 ಬಜೆಟ್ ಮಂಡಿಸಿದ್ದಾರೆ. ಆದರೆ, ರಾಜ್ಯದ ಜನರ ಮೇಲೆ ಸಾಲದ ಹೊರೆ ಹೊರಿಸಿದ್ದಾರೆ' ಎಂದರು.

'ಬೆಲೆ ಏರಿಕೆಗೆ ಒಂದು ಮಿತಿ ಬೇಡವೇ? ಕೆಂಪೇಗೌಡರು ದೂರದೃಷ್ಟಿಯಿಂದ ಕಟ್ಟಿದ್ದ ಈ ನಗರವನ್ನು ಸುಲಿಗೆಗೆ ಕೇಂದ್ರ ಸ್ಥಾನ ಮಾಡಿಕೊಂಡಿದ್ದಾರೆ. ಗ್ಯಾರಂಟಿ ಹೆಸರು ಹೇಳಿಕೊಂಡು ಬಂದ ಇವರು, ಈಗ ಜನರನ್ನು ಕಿತ್ತು ತಿನ್ನುತ್ತಿದ್ದಾರೆ. ನುಡಿದಂತೆ ನಡೆದಿದ್ದೇವೆ ಎನ್ನುತ್ತಾರೆ. ಅಂದರೆ, ಜನರನ್ನು ಕಿತ್ತು ತಿನ್ನುವುದಾ' ಎಂದು ಪ್ರಶ್ನಿಸಿದರು.

'ನಾನು ಮೈತ್ರಿ ಸರ್ಕಾರದ ಅವಧಿಯಲ್ಲಿ ಮುಖ್ಯಮಂತ್ರಿ ಆಗಿದ್ದಾಗ ರೈತರ ₹25,000 ಕೋಟಿ ಸಾಲ ಮನ್ನಾ ಮಾಡಿದ್ದೆ. ಆದರೆ, ಜನರ ಮೇಲೆ ತೆರಿಗೆ ಬರೆ ಹಾಕಿರಲಿಲ್ಲ. ಉಪ ಚುನಾವಣೆ ಬಂದಾಗ ಗೃಹಲಕ್ಷ್ಮಿ ಹಣ ನೀಡಿದರು. ಈಗ ಆ ಹಣ ಬರುತ್ತಿಲ್ಲ. ಪುಕ್ಕಟೆ ವಿದ್ಯುತ್ ಎಂದರು. ಈಗ ಅದರ ದರ ವಿಪರೀತ ಏರಿಕೆ ಮಾಡಿದ್ದಾರೆ' ಎಂದರು.



ವಿಧಾನಸೌಧ ಚಲೋ ಪ್ರತಿಭಟನಾ ಮೆರವಣಿಗೆಯಲ್ಲಿ ಜೆಡಿಎಸ್ ಕಾರ್ಯಕರ್ತರು ಭಾಗಿಯಾಗಿದ್ದರು –ಪ್ರಜಾವಾಣಿ ಚಿತ್ರ

> **ಗ್ಯಾರಂಟಿ ಪಡೆದುಕೊಂಡ ಪಾಪಕ್ಕಾಗಿ ಜನರು ದಿನವೂ ಬೆಲೆ ತೆರುತ್ತಿದ್ದಾರೆ. ಈ ಸರ್ಕಾರ ಕೊಟ್ಟಿದ್ದು ಅಲ್ಪ, ವಸೂಲಿ ಮಾಡುತ್ತಿರುವುದು ಬೆಟ್ಟದಷ್ಟು**
> **ನಿಖಿಲ್ ಕುಮಾರಸ್ವಾಮಿ**
> ಜೆಡಿಎಸ್ ಯುವ ಘಟಕದ ಅಧ್ಯಕ್ಷ

> **ನನ್ನ ಕ್ಷೇತ್ರಕ್ಕೆ ಅನುದಾನ, ಪಾಲಿಟೆಕ್ನಿಕ್ ಕಾಲೇಜು ಕೇಳಿದರೆ, ಸಿದ್ದರಾಮಯ್ಯ ಅವರು ಕಾಂಗ್ರೆಸ್‌ಗೆ ಬಾ ಅಂತಾರೆ. ಅವರ ಶಾಸಕರಿಗೇ ಅನುದಾನ ಸಿಕ್ಕಿಲ್ಲ**
> **ಎಂ.ಟಿ.ಕೃಷ್ಣಪ್ಪ**
> ತುರುವೇಕೆರೆ ಶಾಸಕ

'ಭ್ರಷ್ಟಾಚಾರ ಮತ್ತು ಅಕ್ರಮವನ್ನು ಕಿತ್ತೊಗೆದರೆ ರಾಜ್ಯದ ಆಡಳಿತಕ್ಕೆ ಅತ್ಯವಿರುವ ಮತ್ತು ಗ್ಯಾರಂಟಿಗೆ ಬೇಕಾಗಿರುವ ಎಲ್ಲ ಹಣ ಸಿಗುತ್ತದೆ. ತಪ್ಪಿತಸ್ಥರಿಂದ ಅದನ್ನು ವಸೂಲಿ ಮಾಡುವ ಧೈರ್ಯ ಸರ್ಕಾರಕ್ಕೆ ಇರಬೇಕು. ಆಗ ಸಾಲ ಮಾಡುವ ಪ್ರಮೇಯವೇ ಬರುವುದಿಲ್ಲ' ಎಂದರು.

ವಿಧಾನಸೌಧ ಮುತ್ತಿಗೆಗೆ ಯತ್ನ

ಸ್ವಾತಂತ್ರ್ಯ ಉದ್ಯಾನದ ಹೊರ ಆವರಣದಲ್ಲಿ ಆಯೋಜಿಸಿದ್ದ ಪ್ರತಿಭಟನಾ ಸಮಾವೇಶದಲ್ಲಿ ಜೆಡಿಎಸ್ ಕಾರ್ಯಕರ್ತರು ಸಾವಿರಾರು ಸಂಖ್ಯೆಯಲ್ಲಿ ಭಾಗಿಯಾಗಿದ್ದರು. 'ಸಾಕಪ್ಪಾ ಸಾಕು ಕಾಂಗ್ರೆಸ್ ಸರ್ಕಾರ, ಬಿಟ್ಟಿ ಭಾಗ್ಯ ಯಾರಿಗೂ ಬೇಡಪ್ಪಾ' ಎಂದು ಘೋಷಣೆ ಕೂಗಿದರು.

ಪ್ರತಿಭಟನಾ ಸಮಾವೇಶದ ನಂತರ, ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ಪಕ್ಷದ ಕಾರ್ಯಕರ್ತರು, ಶಾಸಕರು, ಪದಾಧಿಕಾರಿಗಳು ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಮೆರವಣಿಗೆ ಹೊರಟರು. ರಸ್ತೆ ಮಧ್ಯೆಯೇ ಅವರನ್ನು ಪೊಲೀಸರು ತಡೆದರು. ತಡೆಗಳನ್ನು ಹತ್ತಿ ಮುತ್ತಿಗೆಗೆ ಮುಂದಾದ, ನಿಖಿಲ್ ಸೇರಿ 49ಕ್ಕೂ ಹೆಚ್ಚು ಮಂದಿಯನ್ನು ವಶಕ್ಕೆ ಪಡೆದ ಪೊಲೀಸರು ನಂತರ ಬಿಡುಗಡೆ ಮಾಡಿದರು.

ಸಮಾವೇಶದಲ್ಲಿ ಭಾಗಿಯಾಗಲು ರಾಜ್ಯದ ವಿವಿಧೆಡೆಯಿಂದ ಸುಮಾರು 50 ಬಸ್‌ಗಳಲ್ಲಿ ಜೆಡಿಎಸ್ ಕಾರ್ಯಕರ್ತರು ಸ್ವಾತಂತ್ರ್ಯ ಉದ್ಯಾನಕ್ಕೆ ಬಂದಿದ್ದರು. ಶೇಷಾದ್ರಿ ರಸ್ತೆ, ಕಾಳಿದಾಸ ರಸ್ತೆ, ಅರಮನೆ ರಸ್ತೆಗಳಲ್ಲಿ ಆ ಬಸ್‌ಗಳನ್ನು ನಿಲ್ಲಿಸಿದ್ದ ಕಾರಣ ಅಲ್ಲೆಲ್ಲಾ ಸಂಚಾರ ದಟ್ಟಣೆ ಉಂಟಾಗಿತ್ತು.



ನಿಖಿಲ್ ಕುಮಾರಸ್ವಾಮಿ ಮತ್ತು ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು –ಪ್ರಜಾವಾಣಿ ಚಿತ್ರ



ಬೆಂಗಳೂರಿನಲ್ಲಿ ಶನಿವಾರ 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಆಯೋಜಿಸಿದ್ದ ಶೈಕ್ಷಣಿಕ ಮೇಳ 'ಎಡ್ಯುವರ್ಸ್'ನಲ್ಲಿ ಮಂಡ್ಯ ಜಿಲ್ಲಾ ಪಂಚಾಯಿತಿ ಸಿಇಒ ಕೆ.ಆರ್.ನಂದಿನಿ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ರಂಗಕರ್ಮಿ ಪ್ರಕಾಶ್ ಬೆಳವಾಡಿ ಭಾಗವಹಿಸಿದ್ದರು

'ಜಾಗತಿಕ ಬದಲಾವಣೆಗೆ ತಕ್ಕಂತೆ ಹೆಜ್ಜೆ ಹಾಕಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಗತಿಕ ಬದಲಾವಣೆಗೆ ದಿಕ್ಸೂಚಿಯಾಗುವ ಶಿಕ್ಷಣ, ಜ್ಞಾನ, ಸಂಶೋಧನೆಯತ್ತ ಗಮನ ಹರಿಸಬೇಕಾದ ಯುವ ಸಮೂಹ, ಜಾತಿ–ಧರ್ಮಗಳ ನಡುವೆ ವ್ಯತ್ಯಾಸ ಹುಡುಕುವುದರಲ್ಲೇ ಕಾಲಕಳೆಯುತ್ತಿದೆ. ಅಂತಹ ವಾತಾವರಣವನ್ನು ಪ್ರಸ್ತುತ ರಾಜಕಾರಣ ಸೃಷ್ಟಿಸಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಪ್ರಜಾವಾಣಿ DH ಎಡ್ಯುವರ್ಸ್ ಪ್ರೀಮಿಯರ್ ಎಜುಕೇಶನ್ ಎಕ್ಸ್‌ಪೋ

ಮುಖ್ಯಾಂಶಗಳು

- ಮೊದಲ ದಿನವೇ ವಿದ್ಯಾರ್ಥಿಗಳ ಮಹಾಪೂರ
- ಒಂದೇ ಸೂರಿನಡಿ ಸಮಗ್ರ ಮಾಹಿತಿ ಕಣಜ
- ಭವಿಷ್ಯದ ಬದುಕಿಗೆ ಉಪಯುಕ್ತ ಶೈಕ್ಷಣಿಕ ಮೇಳ

ಅರಮನೆ ಮೈದಾನದಲ್ಲಿ ಕರ್ನಾಟಕದ ಅತ್ಯಂತ ವಿಶ್ವಾಸಾರ್ಹ ಪತ್ರಿಕೆಗಳಾದ 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಆಯೋಜಿಸಿರುವ ಎರಡು ದಿನಗಳ ಅತಿ ದೊಡ್ಡ ಶೈಕ್ಷಣಿಕ ಮೇಳ 'ಎಡ್ಯುವರ್ಸ್' ಉದ್ಘಾಟಿಸಿ ಅವರು ಮಾತನಾಡಿದರು.

ಕರ್ನಾಟಕದಲ್ಲಿ 70ರ ದಶಕದಲ್ಲಿ ಆರಂಭವಾದ ಶೈಕ್ಷಣಿಕ ಕ್ರಾಂತಿ ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ವೃತ್ತಿಪರ ಕೋರ್ಸ್‌ಗಳ ಹಬ್ ಆಗಿ ಬೆಂಗಳೂರು ಬೆಳೆಯಲು ಕಾರಣವಾಯಿತು. ಸಿಲಿಕಾನ್ ಸಿಟಿಯಷ್ಟೇ ಶಿಕ್ಷಣ ಕ್ಷೇತ್ರವೂ ಹೆಸರಾಗಿದೆ. ನಿರಂತರ ಬದಲಾವಣೆಗೆ ಹೊಂದಿಕೊಂಡು ಜಾಗತಿಕವಾಗಿಯೂ ಮುಂಚೂಣಿಯಲ್ಲಿದೆ. ಕಾಲಘಟ್ಟದ ಜತೆ ಹೆಜ್ಜೆ ಹಾಕುತ್ತಿರುವ ವೃತ್ತಿಪರ ಕೋರ್ಸ್‌ಗಳ ಉನ್ನತಿಗೆ 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಕಳೆದ ಒಂದೂವರೆ ದಶಕಗಳಿಂದ ಆಯೋಜಿಸುತ್ತಿರುವ ಶೈಕ್ಷಣಿಕ ಮೇಳವೂ ಗಣನೀಯ ಕೊಡುಗೆ ನೀಡಿದೆ ಎಂದು ಶ್ಲಾಘಿಸಿದರು.

ಶೈಕ್ಷಣಿಕ ವ್ಯವಸ್ಥೆ ನಿರಂತರ ಬದಲಾವಣೆಗೆ ತೆರೆದುಕೊಳ್ಳುತ್ತಲೇ ಇರುತ್ತದೆ. ಜಾಗತಿಕ ಬದಲಾವಣೆಗೆ ತಕ್ಕಂತೆ ರಾಜ್ಯದ ವಿದ್ಯಾರ್ಥಿಗಳೂ ಸಾಗಬೇಕು. ಇಂದು ವಿಶ್ವದ ಎಲ್ಲಿಯಾದರೂ ಅಧ್ಯಯನ ನಡೆಸುವ ಅವಕಾಶಗಳು ವಿಪುಲವಾಗಿವೆ. ಶಿಕ್ಷಣ, ಸಂಶೋಧನೆಗಳ ಮೂಲಕ ಜಾಗತಿಕ ಬದಲಾಣೆಗೆ ಕರ್ನಾಟಕ ದಿಕ್ಸೂಚಿ ಆಗಬೇಕು. ದ್ವಿತೀಯ ಪಿಯು ನಂತರ ತೆಗೆದುಕೊಳ್ಳುವ ನಿರ್ಧಾರಗಳ ಮೇಲೆ ಭವಿಷ್ಯದ ಹೆಜ್ಜೆ ಗುರುತುಗಳು ಮೂಡಲಿವೆ ಎಂದು ಕಿವಿಮಾತು ಹೇಳಿದರು.


ರಾಜಕೀಯ ಪ್ರಭಾವಗಳಿಂದಾಗಿ ಭಾರತ ಇಂದು ಅಸಂತುಷ್ಟವಾಗಿರುವ ದೇಶಗಳ ಸಾಲಿನಲ್ಲಿ 118ನೇ ಸ್ಥಾನದಲ್ಲಿದೆ. ಕಲಿಕೆಯ ಮುಕ್ತ ಅವಕಾಶ, ಜೀವಿಸಲು ಬೇಕಾದ ನೆಮ್ಮದಿಯ ವಾತಾವರಣ, ಉತ್ತಮ ಕಾನೂನು ಸುವ್ಯವಸ್ಥೆ ನಿರ್ಮಾಣ ಮಾಡಬೇಕಾದುದು ಸರ್ಕಾರಗಳ ಕರ್ತವ್ಯ. ಆದರೆ, ಜನರು ಭಯದ ವಾತಾವರಣದಲ್ಲಿ ಇದ್ದಾರೆ. ಒತ್ತಡದ ಬದುಕು ಸಾಗಿಸುತ್ತಿದ್ದಾರೆ ಎಂದರು.

'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಮಾತನಾಡಿದರು. ಟಿಪಿಎಂಎಲ್ ಸಿಒಒ ಕಿರಣ್ ಸುಂದರ್‌ರಾಜನ್ ಉಪಸ್ಥಿತರಿದ್ದರು.

ರಾಜ್ಯಪಾಲರ ಅಂಕಿತ ಇಲ್ಲದೆ 10 ಕಾಯ್ದೆ ಜಾರಿ

ಪ್ರಜಾವಾಣಿ ವಾರ್ತೆ

ಚೆನ್ನೈ: 'ರಾಷ್ಟ್ರಪತಿಯವರ ಪರಿಶೀಲನೆಗೆ ರವಾನೆ ಆಗಿದ್ದ 10 ಮಸೂದೆಗಳಿಗೆ ಅಂಕಿತ ದೊರೆತಿದೆಯೆಂದು ಭಾವಿಸಬೇಕು' ಎಂದು ಸುಪ್ರೀಂ ಕೋರ್ಟ್ ತೀರ್ಪಿನಲ್ಲಿ ಉಲ್ಲೇಖ ಆಗಿದ್ದ ಕಾನೂನುಗಳು ತಮಿಳುನಾಡಿನಲ್ಲಿ ಕಾಯ್ದೆಯಾಗಿ ಜಾರಿಗೆ ಬಂದಿವೆ.



ಈ ಮಸೂದೆಗಳು ತಮಿಳುನಾಡು ವಿಧಾನ-ಸಭೆಯಲ್ಲಿ ಎರಡನೆಯ ಬಾರಿಗೆ ಅಂಗೀಕಾರ ಪಡೆದು ರಾಜ್ಯಪಾಲರಿಗೆ ರವಾನೆ ಆಗಿದ್ದವು.

ಸುಪ್ರೀಂ ಕೋರ್ಟ್‌ನ ತೀರ್ಪು ವೆಬ್‌ಸೈಟ್‌ನಲ್ಲಿ ಲಭ್ಯವಾದ ನಂತರ ಅವುಗಳನ್ನು ಅಧಿಸೂಚನೆಯಲ್ಲಿ ಪ್ರಕಟಿಸಲಾಗಿದೆ.

ಇತಿಹಾಸ ನಿರ್ಮಾಣ ಆಗಿದೆ. ಇವು ಭಾರತದಲ್ಲಿ ರಾಜ್ಯಪಾಲರ ಅಥವಾ ರಾಷ್ಟ್ರ-ಪತಿಯವರ ಸಹಿ ಇಲ್ಲದೆಯೇ, ಸುಪ್ರೀಂ ಕೋರ್ಟ್‌ನ ತೀರ್ಪಿನ ಬಲದ ಆಧಾರದಲ್ಲಿ ಜಾರಿಗೆ ಬಂದಿರುವ ಮೊದಲ ಕಾಯ್ದೆಗಳು' ಎಂದು ಡಿಎಂಕೆ ರಾಜ್ಯಸಭಾ ಸದಸ್ಯ ಪಿ. ವಿಲ್ಸನ್ ಹೇಳಿದ್ದಾರೆ.

ಮಸೂದೆಗೆ ಅಂಕಿತ: ರಾಷ್ಟ್ರಪತಿಗೆ 3 ತಿಂಗಳ ಗಡುವು

ಒಂದನೇ ಪುಟದಿಂದ...

'ವಿಳಂಬ ಆದಲ್ಲಿ ಅದಕ್ಕೆ ಸೂಕ್ತ ಕಾರಣವನ್ನು ದಾಖಲಿಸಬೇಕು, ಸಂಬಂಧಿಸಿದ ರಾಜ್ಯಕ್ಕೆ ಅದನ್ನು ತಿಳಿಸಬೇಕು. ರಾಜ್ಯಗಳು ಕೂಡ ಜೊತೆಯಾಗಿ ಕೆಲಸ ಮಾಡಬೇಕು, ತಮ್ಮ ಮುಂದೆ ಇರಿಸಬಹುದಾದ ಪ್ರಶ್ನೆಗಳಿಗೆ ಉತ್ತರ ಒದಗಿಸಬೇಕು, ಕೇಂದ್ರ ಸರ್ಕಾರ ನೀಡುವ ಸಲಹೆಗಳನ್ನು ತ್ವರಿತವಾಗಿ ಪರಿಗಣಿಸಬೇಕು' ಎಂದು ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಆರ್. ಮಹಾದೇವನ್ ಅವರು ಇರುವ ವಿಭಾಗೀಯ ನ್ಯಾಯಪೀಠವು ಈ ತೀರ್ಪನ್ನು ಏಪ್ರಿಲ್ 8ರಂದು ನೀಡಿದೆ.

'ರಾಜ್ಯಪಾಲರು ರಾಷ್ಟ್ರಪತಿಯವರ ಪರಿಶೀಲನೆಗಾಗಿ ಮಸೂದೆಯೊಂದನ್ನು ಇರಿಸಿಕೊಂಡಾಗ, ರಾಷ್ಟ್ರಪತಿಯವರು ಆ ಮಸೂದೆಗೆ ಅಂಕಿತ ತಡೆಹಿಡಿದಾಗ, ಅಂತಹ ಕ್ರಮವನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸುವ ಮುಕ್ತ ಅವಕಾಶ ರಾಜ್ಯ ಸರ್ಕಾರಗಳಿಗೆ ಇರುತ್ತದೆ' ಎಂದು ಪೀಠವು ಸ್ಪಷ್ಟವಾಗಿ ಹೇಳಿದೆ.

ರಾಜ್ಯಪಾಲರಿಗೆ ಕಾಲಮಿತಿ: ಸಿಬಲ್ ಶ್ಲಾಘನೆ

ನವದೆಹಲಿ (ಪಿಟಿಐ): ರಾಜ್ಯ ವಿಧಾನ ಮಂಡಲ ಅಂಗೀಕಾರ ನೀಡಿರುವ ಮಸೂದೆಯ ವಿಚಾರವಾಗಿ ಕ್ರಮಗಳನ್ನು ಕೈಗೊಳ್ಳಲು ರಾಜ್ಯಪಾಲರಿಗೆ ಸಮಯಮಿತಿ ನಿಗದಿಪಡಿಸಿದ್ದಕ್ಕಾಗಿ ರಾಜ್ಯಸಭಾ ಸದಸ್ಯ ಕಪಿಲ್ ಸಿಬಲ್ ಅವರು ಸುಪ್ರೀಂ ಕೋರ್ಟ್‌ಅನ್ನು ಶ್ಲಾಘಿಸಿದ್ದಾರೆ.

ತಮಿಳುನಾಡಿನ ರಾಜ್ಯಪಾಲ ಆರ್.ಎನ್. ರವಿ ಅವರು 10 ಮಸೂದೆಗಳನ್ನು ರಾಷ್ಟ್ರಪತಿಯವರ ಪರಿಶೀಲನೆಗಾಗಿ ತಡೆಹಿಡಿದು ಇರಿಸಿಕೊಂಡಿದ್ದು ಸಂವಿಧಾನಕ್ಕೆ ವಿರುದ್ಧವಾದ ನಡೆ ಎಂದು ಸುಪ್ರೀಂ ಕೋರ್ಟ್ ಕಳೆದ ಮಂಗಳವಾರ ಹೇಳಿತ್ತು.

ಶನಿವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಿಬಲ್, 'ಸಂವಿಧಾನದ ತತ್ವಗಳ ಅಡಿಯಲ್ಲಿ ಒಕ್ಕೂಟ ವ್ಯವಸ್ಥೆಯು ಮುಂದುವರಿಯುವುದನ್ನು ಸುಪ್ರೀಂ ಕೋರ್ಟ್ ತೀರ್ಪು ಖಾತರಿಪಡಿಸುತ್ತದೆ' ಎಂದು ಹೇಳಿದರು.

'ಸುಪ್ರೀಂ ಕೋರ್ಟ್ ಈಚೆಗೆ ಐತಿಹಾಸಿಕ ತೀರ್ಪು ಪ್ರಕಟಿಸಿದೆ. ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ರಾಜ್ಯಪಾಲರು ನಿರಂಕುಶವಾಗಿ ವರ್ತಿಸಲು ಪ್ರಾರಂಭಿಸಿದ್ದಾರೆ ಎಂಬ ವಿಷಯ ಚರ್ಚೆಯಲ್ಲಿದೆ. ರಾಜ್ಯ ವಿಧಾನ ಮಂಡಲವು ಅಂಗೀಕಾರ ನೀಡಿದ ಮಸೂದೆಯನ್ನು ರಾಜ್ಯಪಾಲರು ತಮ್ಮಲ್ಲೇ ಇಟ್ಟುಕೊಂಡು ಸಹಿ ಹಾಕಲು ವಿಳಂಬ ಮಾಡುತ್ತಾರೆ. ಸಹಿ ಬೀಳದ ಕಾರಣ ಸರ್ಕಾರಕ್ಕೆ ಅಧಿಸೂಚನೆ ಹೊರಡಿಸಲು ಸಾಧ್ಯವಾಗುವುದಿಲ್ಲ. ಇದರಿಂದ ಜನರು ತೊಂದರೆ ಅನುಭವಿಸುವರು' ಎಂದು ದೂರಿದರು.

'ಬಿಜೆಪಿ ಮತ್ತು ಎನ್‌ಡಿಎಯೇತರ ಸರ್ಕಾರಗಳಿರುವ ರಾಜ್ಯಗಳಲ್ಲಿ ಇದು ಸಂಭವಿಸುತ್ತಿತ್ತು. ಆದ್ದರಿಂದ ಇದೊಂದು ರಾಜಕೀಯವಲ್ಲದೆ ಬೇರೇನೂ ಅಲ್ಲ' ಎಂದರು.

'ರಾಜ್ಯಪಾಲರ ಅಧಿಕಾರವನ್ನು ಹಗುರವಾಗಿ ಕಂಡಿಲ್ಲ'

ಒಂದನೇ ಪುಟದಿಂದ...

'ರಾಜ್ಯಪಾಲರ ಅಧಿಕಾರವನ್ನು ನಾವು ಯಾವ ಬಗೆಯಿಂದಲೂ ಹಗುರವಾಗಿ ಕಾಣುತ್ತಿಲ್ಲ' ಎಂದು ಪೀಠವು 415 ಪುಟಗಳ ತೀರ್ಪಿನಲ್ಲಿ ಹೇಳಿದೆ.

'ರಾಜ್ಯಪಾಲರು ಸಮಸ್ಯೆಗೆ ಪರಿಹಾರ ತರುವ, ಸಹಮತ ಮೂಡಿಸುವ ವ್ಯಕ್ತಿಯಾಗಬೇಕು. ಅವರು ತಮ್ಮ ಬುದ್ಧಿಮತ್ತೆ ಹಾಗೂ ಪಾಂಡಿತ್ಯದ ಮೂಲಕ ರಾಜ್ಯದ ಆಡಳಿತ ಯಂತ್ರದ ಪಾಲಿಗೆ ಕೀಲೆಣ್ಣೆಯಂತೆ ಆಗಬೇಕು. ಆಡಳಿತಯಂತ್ರ ಸ್ಥಗಿತಗೊಳ್ಳುವಂತೆ ಮಾಡಬಾರದು. ಅವರು ವೇಗವರ್ಧಕ ಆಗಿರಬೇಕು, ಅಡ್ಡಿ ಸೃಷ್ಟಿಸುವವರಾಗಬಾರದು. ತಾವು ಹೊಂದಿರುವ ಉನ್ನತವಾದ ಸಾಂವಿಧಾನಿಕ ಹುದ್ದೆಯ ಘನತೆಯನ್ನು ಮನಸ್ಸಿನಲ್ಲಿ ಇರಿಸಿಕೊಂಡು ಅವರು ತಮ್ಮೆಲ್ಲ ಕೆಲಸಗಳನ್ನು ನಿರ್ವಹಿಸಬೇಕು' ಎಂದು ತೀರ್ಪಿನಲ್ಲಿ ಕಿವಿಮಾತು ಹೇಳಲಾಗಿದೆ.

ವಿಭಾಗೀಯ ಪೀಠದ ಪರವಾಗಿ ನ್ಯಾ. ಪಾರ್ದೀವಾಲಾ ತೀರ್ಪು ಬರೆದಿದ್ದಾರೆ. ರಾಜ್ಯದ ಸಾಂವಿಧಾನಿಕ ಮುಖ್ಯಸ್ಥರಾಗಿ ರಾಜ್ಯಪಾಲರು, ಜನರ ಇಚ್ಛೆಗೆ ಮತ್ತು ಅವರ ಅಭಿವೃದ್ಧಿಗೆ ಆದ್ಯತೆ ನೀಡಬೇಕಾದ ಹೊಣೆ ಹೊತ್ತಿರುತ್ತಾರೆ, ರಾಜ್ಯಪಾಲರು ರಾಜ್ಯದ ಆಡಳಿತ ಯಂತ್ರದ ಜತೆ ಹೊಂದಾಣಿಕೆಯಿಂದ ಕೆಲಸ ಮಾಬೇಕು ಎಂದು ತೀರ್ಪಿನಲ್ಲಿ ಹೇಳಲಾಗಿದೆ.

ಎಜೆಎಲ್‌ನ ₹661 ಕೋಟಿ ಆಸ್ತಿ ಸ್ವಾಧೀನಕ್ಕೆ ಮುಂದಾದ ಇ.ಡಿ

ಒಂದನೇ ಪುಟದಿಂದ..

ಆವರಣವನ್ನು ತಕ್ಷಣವೇ ಖಾಲಿ ಮಾಡುವಂತೆ ಅಥವಾ ಬಾಡಿಗೆ ವರ್ಗಾಯಿಸುವಂತೆ (ಮುಂಬೈ ಆಸ್ತಿಗೆ ಸಂಬಂಧಿಸಿದಂತೆ) ಇ.ಡಿ. ಸೂಚನೆ ನೀಡಿದೆ.

ಪೂರ್ವ ಬಾಂದ್ರಾದಲ್ಲಿರುವ ಹೆರಾಲ್ಡ್ ಹೌಸ್‌ನ 7, 8, 9ನೇ ಮಹಡಿಯಲ್ಲಿ ಜಿಂದಾಲ್ ಸೌತ್‌ವೆಸ್ಟ್ ಪ್ರಾಜೆಕ್ಟ್ ಸಂಸ್ಥೆಯು ಕಾರ್ಯನಿರ್ವಹಿಸುತ್ತಿದ್ದು, ಸಂಸ್ಥೆಗೆ ಪಾವತಿಸುತ್ತಿದ್ದ ಬಾಡಿಗೆ/ ಗುತ್ತಿಗೆ ಹಣವನ್ನು ಪ್ರತಿ ತಿಂಗಳು ಇ.ಡಿ. ನಿರ್ದೇಶಕರ ಹೆಸರಿಗೆ ಪಾವತಿ ಮಾಡುವಂತೆ ನೋಟಿಸ್‌ನಲ್ಲಿ ತಿಳಿಸಲಾಗಿದೆ.

ಹಣ ಅಕ್ರಮ ವಹಿವಾಟು ತಡೆ ಕಾಯ್ದೆ (ಪಿಎಂಎಲ್‌ಎ) ಸೆಕ್ಷನ್ (8) ಹಾಗೂ ನಿಯಮ 5(1)ರ ಅಡಿಯಲ್ಲಿ ಆಸ್ತಿ ಸ್ವಾಧೀನಪಡಿಸಿಕೊಳ್ಳಲು ಅವಕಾಶವಿದೆ. 2023ರ ನವೆಂಬರ್ ತಿಂಗಳಲ್ಲಿ ಈ ಆಸ್ತಿಗಳನ್ನು ಜಾರಿ ನಿರ್ದೇಶನಾಲಯವು ಮುಟ್ಟುಗೋಲು ಹಾಕಿಕೊಂಡಿತ್ತು.

ಪ್ರಕರಣವೇನು: ಹಣ ಅಕ್ರಮ ವರ್ಗಾವಣೆ ನಡೆಸಿದ ಆರೋಪದ ಮೇಲೆ ಎಜೆಎಲ್ ಹಾಗೂ ಯಂಗ್ ಇಂಡಿಯನ್ ಸಂಸ್ಥೆಗಳ ಮೇಲೆ ಜಾರಿ ನಿರ್ದೇಶನಾಲಯ ಪ್ರಕರಣ ದಾಖಲಿಸಿತ್ತು.

'ನ್ಯಾಷನಲ್ ಹೆರಾಲ್ಡ್' ಪತ್ರಿಕೆಯನ್ನು ಎಜೆಎಲ್ ಪ್ರಕಟಿಸುತ್ತಿದ್ದು, ಯಂಗ್ ಇಂಡಿಯನ್ ಪ್ರೈವೇಟ್ ಲಿಮಿಟೆಡ್ ಒಡೆತನದಲ್ಲಿದೆ. ಎಜೆಎಲ್ ಸಂಸ್ಥೆಯು 'ನ್ಯಾಷನಲ್ ಹೆರಾಲ್ಡ್' ಪತ್ರಿಕೆ, ವೆಬ್ ಪೋರ್ಟಲ್ ನಡೆಸುತ್ತಿದೆ.

ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರು ಯಂಗ್ ಇಂಡಿಯನ್‌ನ ಬಹುಪಾಲು ಷೇರುದಾರರಾಗಿದ್ದು, ಶೇಕಡಾ 38ರಷ್ಟು ಪಾಲು ಹೊಂದಿದ್ದಾರೆ. ಕೆಲ ವರ್ಷಗಳ ಹಿಂದೆ ಇಬ್ಬರನ್ನೂ ಇ.ಡಿ. ಅಧಿಕಾರಿಗಳು ಗಂಟೆಗಟ್ಟಲೆ ವಿಚಾರಣೆಗೆ ಒಳಪಡಿಸಿದ್ದರು.

'ಯಂಗ್ ಇಂಡಿಯನ್, ಎಜೆಎಲ್ ಪ್ರಾಪರ್ಟಿಸ್ ಸಂಸ್ಥೆಗಳು ಬೋಗಸ್ ದೇಣಿಗೆಯ ರೂಪದಲ್ಲಿ ₹18 ಕೋಟಿ, ಬೋಗಸ್ ಮುಂಗಡ ಬಾಡಿಗೆಯಾಗಿ ₹38 ಕೋಟಿ ಹಾಗೂ ಬೋಗಸ್ ಜಾಹೀರಾತು ₹38 ಕೋಟಿಯನ್ನು ಪಡೆದಿವೆ' ಎಂದು ಇ.ಡಿ ಆರೋಪಿಸಿದೆ.

ಸುಬ್ರಹ್ಮಣಿಯನ್ ಸ್ವಾಮಿ ದೂರು: 2014ರ ಜೂನ್ 26ರಂದು, ಆಗಿನ ಬಿಜೆಪಿ ನಾಯಕ ಸುಬ್ರಹ್ಮಣಿಯನ್ ಸ್ವಾಮಿ ಅವರು ಖಾಸಗಿ ದೂರು ದಾಖಲಿಸಿದ್ದರು. ದೆಹಲಿಯ ಪಟಿಯಾಲ ಹೌಸ್ ಕೋರ್ಟ್ ದೂರು ಪುರಸ್ಕರಿಸಿದ ಬಳಿಕ 2021ರಂದು ಜಾರಿ ನಿರ್ದೇಶನಾಲಯವು ತನಿಖೆ ಆರಂಭಿಸಿತ್ತು.

'ತನಿಖಾ ಪ್ರಕ್ರಿಯೆಯನ್ನು ಆರೋಪಿಗಳು ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದರು. ದೆಹಲಿ ಹೈಕೋರ್ಟ್, ಸುಪ್ರೀಂ ಕೋರ್ಟ್ ತನಿಖಾ ಪ್ರಕ್ರಿಯೆಯು ಸಮರ್ಪಕವಾಗಿದೆ ಎಂದು ಸ್ಪಷ್ಟಪಡಿಸಿದ ಬಳಿಕ ಪ್ರಕ್ರಿಯೆ ಮುಂದುವರಿದಿತ್ತು' ಎಂದು ಇ.ಡಿ ತಿಳಿಸಿತ್ತು.

'ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಅವರ ಒಡೆತನದ ಯಂಗ್ ಇಂಡಿಯನ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು ಎಜೆಎಲ್ ಪ್ರಾಪರ್ಟಿಸ್‌ಗೆ ಸೇರಿದ ₹2 ಸಾವಿರ ಕೋಟಿ ಮೌಲ್ಯದ ಆಸ್ತಿಯನ್ನು ಕೇವಲ ₹50 ಲಕ್ಷಕ್ಕೆ ಸ್ವಾಧೀನಪಡಿಸಿಕೊಂಡಿರುವುದು ತನಿಖೆಯ ವೇಳೆ 'ನಿರ್ಣಾಯಕ'ವಾಗಿ ಕಂಡುಬಂದಿದೆ. ಸ್ವಾಧೀನ ಪ್ರಕ್ರಿಯೆ ವೇಳೆ ಆಸ್ತಿ ಮೌಲ್ಯವನ್ನು ಗಮನಾರ್ಹವಾಗಿ ಕಡಿಮೆ ಮಾಡಲಾಗಿದೆ' ಎಂದು ಇ.ಡಿ ಪ್ರತಿಪಾದಿಸಿತ್ತು.

ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆದ ಪ್ರತ್ಯೇಕ ಘಟನೆ • ಮುಂದುವರಿದ ಕಾರ್ಯಾಚರಣೆ

ಸೇನಾಧಿಕಾರಿ ಹುತಾತ್ಮ, ಉಗ್ರರ ಹತ್ಯೆ

ಪ್ರಜಾವಾಣಿ ವಾರ್ತೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆದ ಪ್ರತ್ಯೇಕ ಘಟನೆಗಳಲ್ಲಿ ಸೇನೆಯ ಕಿರಿಯ ಅಧಿಕಾರಿ (ಜೆಸಿಒ) ಮತ್ತು ಮೂವರು ಭಯೋತ್ಪಾದಕರು ಹತರಾಗಿದ್ದಾರೆ.

ಜಮ್ಮುವಿನ ಅಖ್ನೂರ್ ವಲಯದಲ್ಲಿ ನಡೆದ ಗುಂಡಿನ ಚಕಮಕಿ ಸಂದರ್ಭದಲ್ಲಿ, ಸೇನೆಯ ಅಧಿಕಾರಿ ಹುತಾತ್ಮರಾಗಿದ್ದಾರೆ. ಗಡಿ ನಿಯಂತ್ರಣ ರೇಖೆ ಬಳಿ ಭಾರಿ ಶಸ್ತ್ರಾಸ್ತ್ರ ಹೊಂದಿದ್ದ ಭಯೋತ್ಪಾದಕರ ತಂಡವನ್ನು ಸೇನಾ ಸಿಬ್ಬಂದಿ ಗಮನಿಸಿದರು. ಅವರ ಮೇಲೆ ಗುಂಡು ಹಾರಿಸಿದಾಗ, ಚಕಮಕಿ ಆರಂಭವಾಯಿತು.

ಈ ಸಂದರ್ಭದಲ್ಲಿ ಗಂಭೀರವಾಗಿ ಗಾಯಗೊಂಡ ಅಧಿಕಾರಿ, ಹುತಾತ್ಮರಾಗಿದ್ದಾರೆ ಎಂದು ಮೂಲಗಳು ಹೇಳಿವೆ. ಭಯೋತ್ಪಾದಕರಿಗಾಗಿ ಸ್ಥಳದಲ್ಲಿ ಹುಡುಕಾಟ ನಡೆದಿದೆ.

ಇನ್ನೊಂದು ಘಟನೆಯಲ್ಲಿ, ಪಾಕಿಸ್ತಾನ ಮೂಲದ ಜೈಷ್-ಎ-ಮೊಹಮ್ಮದ್ ಭಯೋತ್ಪಾದಕ ಸಂಘಟನೆಗೆ ಸೇರಿದ ಮೂವರನ್ನು ಭದ್ರತಾ ಪಡೆಗಳು ಹತ್ಯೆ ಮಾಡಿವೆ. ಕಿಶ್ತ್ವಾರ್ ಜಿಲ್ಲೆಯಲ್ಲಿ ನಡೆದ ಭಯೋತ್ಪಾದನಾ ನಿಗ್ರಹ ಕಾರ್ಯಾಚರಣೆ ಸಂದರ್ಭದಲ್ಲಿ ಇವರನ್ನು ಹತ್ಯೆ ಮಾಡಲಾಗಿದೆ. ಹತ್ಯೆಯಾದವರಲ್ಲಿ ಸಂಘಟನೆಯ ಮುಖ್ಯ ಕಮಾಂಡರ್ ಸೈಫುಲ್ಲಾ ಕೂಡ ಸೇರಿದ್ದಾನೆ.

ಒಬ್ಬ ಭಯೋತ್ಪಾದಕನನ್ನು ಶುಕ್ರವಾರವೇ ಹತ್ಯೆ ಮಾಡಲಾಗಿತ್ತು. ಇನ್ನಿಬ್ಬರನ್ನು ಶನಿವಾರ ಬೆಳಿಗ್ಗೆ ಪ್ರತಿಕೂಲ ಹವಾಮಾನದ ನಡುವೆಯೂ ಹತ್ಯೆ ಮಾಡಲಾಗಿದೆ.

ಉಧಂಪುರ ಜಿಲ್ಲೆಯ ಬಸಂತಗಢ ಮತ್ತು ರಾಮನಗರ ಪ್ರದೇಶದಲ್ಲಿ ಮೂವರು ಭಯೋತ್ಪಾದಕರಿಗಾಗಿ ಭದ್ರತಾ ಪಡೆಗಳು ಶೋಧ ಕಾರ್ಯ ಮುಂದುವರಿಸಿವೆ.


ಯುಎವಿ ಅಪಘಾತ- ಗಾಯಗೊಂಡಿದ್ದ ಯೋಧ ಸಾವು: ಜಮ್ಮು (ಪಿಟಿಐ): ಎರಡು ದಿನಗಳ ಹಿಂದೆ ಸೇನೆಯ ಕಣ್ಗಾವಲು ಕಾರ್ಯಾಚರಣೆಯಲ್ಲಿದ್ದ ಮಾನವರಹಿತ ವೈಮಾನಿಕ ವಾಹನ (ಯುಎವಿ) ಅಪಘಾತಕ್ಕೀಡಾಗಿ ತೀವ್ರವಾಗಿ ಗಾಯಗೊಂಡಿದ್ದ ಸೇನೆಯ ಡಿಎಸ್‌ಸಿ ಪಡೆಯ ಯೋಧರು ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ.

ಇಲ್ಲಿನ ಕಠುವಾ ಜಿಲ್ಲೆಯ ನಿವಾಸಿ ನಾಯಕ್ ಸುರೇಂದರ್ ಅವರು ಗುರುವಾರ ಇಲ್ಲಿನ ವಿಮಾನ ನಿಲ್ದಾಣದ ಟವರ್‌ನಲ್ಲಿ ಕಾವಲು ಕಾಯುತ್ತಿದ್ದರು. ಈ ವೇಳೆ ವಿಮಾನ ನಿಲ್ದಾಣಕ್ಕೆ ಬಂದಿಳಿಯುತ್ತಿದ್ದ ಯುಎವಿಯು ಟವರ್‌ಗೆ ಡಿಕ್ಕಿ ಹೊಡೆದು ಸ್ಫೋಟಗೊಂಡಿತ್ತು. ಇದರಿಂದ ಸುರೇಂದರ್ ತೀವ್ರವಾಗಿ ಗಾಯಗೊಂಡಿದ್ದರು. ತಕ್ಷಣವೇ ಅವರನ್ನು ಸೇನಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಶುಕ್ರವಾರ ಮೃತಪಟ್ಟಿದ್ದು, ಮೃತದೇಹವನ್ನು ಅವರ ಸ್ವಗ್ರಾಮಕ್ಕೆ ಸ್ಥಳಾಂತರಿಸಲಾಯಿತು.

ಜಮ್ಮುವಿನ ಸತ್ವಾರಿಯಲ್ಲಿರುವ ತಾಂತ್ರಿಕ ವಿಮಾನ ನಿಲ್ದಾಣವನ್ನು ಭಾರತೀಯ ವಾಯುಸೇನೆಯ ಹೆಲಿಕಾಪ್ಟರ್‌ಗಳ ಹಾರಾಟಕ್ಕೆ ಬಳಸಲಾಗುತ್ತದೆ.

ಪೊಲೀಸರು ಪ್ರಕರಣದ ತನಿಖೆ ಆರಂಭಿಸಿದ್ದು, ಬಿಎನ್‌ಎಸ್‌ನ ಸೆಕ್ಷನ್ 194 (ಅನುಮಾನಾಸ್ಪದ ಸಾವು) ಅಡಿಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಮೂವರು ನಕ್ಸಲರ ಹತ್ಯೆ



ಬಿಜಾಪುರ (ಪಿಟಿಐ): ಛತ್ತೀಸಗಢದ ಬಿಜಾಪುರ ಜಿಲ್ಲೆಯಲ್ಲಿ ಶನಿವಾರ ಬೆಳಿಗ್ಗೆ ಭದ್ರತಾ ಪಡೆಗಳೊಂದಿಗಿನ ಎನ್‌ಕೌಂಟರ್‌ನಲ್ಲಿ ಮೂವರು ನಕ್ಸಲರು ಮೃತಪಟ್ಟಿದ್ದಾರೆ.

ಇಂದ್ರಾವತಿ ರಾಷ್ಟ್ರೀಯ ಉದ್ಯಾನದ ಕಾಡಿನಲ್ಲಿ ಬೆಳಿಗ್ಗೆ 9 ಗಂಟೆ ಸುಮಾರಿನಲ್ಲಿ ಗುಂಡಿನ ಚಕಮಕಿ ನಡೆದಿದ್ದು, ಭದ್ರತಾ ಪಡೆಗಳ ಜಂಟಿ ತಂಡವು ನಕ್ಸಲ್ ನಿಗ್ರಹ ಕಾರ್ಯಾಚರಣೆ ನಡೆಸುತ್ತಿತ್ತು ಎಂದು ಬಸ್ತರ್ ವಲಯದ ಐಜಿಪಿ ಸುಂದರ್‌ರಾಜ್ ಪಿ. ತಿಳಿಸಿದ್ದಾರೆ.

ಸ್ಥಳದಿಂದ ನಕ್ಸಲರ ಮೃತ ದೇಹಗಳು, ಶಸ್ತ್ರಾಸ್ತ್ರ ಹಾಗೂ ಸ್ಫೋಟಕಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಕಾರ್ಯಾಚರಣೆ ಮುಂದುವರಿದಿದೆ ಎಂದಿದ್ದಾರೆ.


ಪ್ರಸಕ್ತ ವರ್ಷದಲ್ಲಿ ಇದುವರೆಗೂ 138 ನಕ್ಸಲರು ಎನ್‌ಕೌಂಟರ್‌ನಲ್ಲಿ ಹತರಾಗಿದ್ದಾರೆ.

ಜಾರ್ಖಂಡ್: 6 ನಕ್ಸಲರ ಸೆರೆ

ಲಾತೇಹಾರ್ (ಪಿಟಿಐ): ನಿಷೇಧಿತ ಟಿಎಸ್‌ಪಿಸಿ ಸಂಘಟನೆಯ ಆರು ನಕ್ಸಲರನ್ನು ಜಾರ್ಖಂಡ್‌ನ ಲಾತೇಹಾರ್ ಜಿಲ್ಲೆಯಲ್ಲಿ ಬಂಧಿಸಲಾಗಿದೆ.

ಉಪ ವಲಯ ಕಮಾಂಡರ್‌ಗಳಾದ ನಾರಾಯಣ್ ಭೋಕ್ತಾ ಅಲಿಯಾ ಆದಿತ್, ಅಲೋಕ್ ಯಾದವ್, 'ಏರಿಯಾ ಕಮಾಂಡರ್' ಅಮಿತ್ ದುಬೆ ಹಾಗೂ ಕಾರ್ಯಕರ್ತರಾದ ಮಹೇಂದ್ರ ಠಾಕೂರ್, ಇಮ್ರಾನ್ ಅನ್ಸಾರಿ, ಸಂಜಯ್ ಒರಾನ್ ಬಂಧಿತರು.

ನಾಲ್ಕು ರೈಫಲ್ಸ್, ಒಂದು ರಿವಾಲ್ವಾರ್, 1,102 ಕಾಡತೂಸುಗಳನ್ನು ಬಂಧಿತರಿಂದ ವಶಪಡಿಸಿಕೊಳ್ಳಲಾಗಿದೆ. ಬಾಲೂಮಠ ಪೊಲೀಸ್ ಠಾಣಾ ವ್ಯಾಪ್ತಿಯ ಹೇಸಾಬಾರ್-ಭಾಂಗ್ ಅರಣ್ಯ ಪ್ರದೇಶದಲ್ಲಿ ಶುಕ್ರವಾರ ನಡೆದ ಕಾರ್ಯಾಚರಣೆಯಲ್ಲಿ ಟಿಎಸ್‌ಪಿಸಿ ಸದಸ್ಯರನ್ನು ಬಂಧಿಸಲಾಗಿದೆ ಎಂದು ಲಾತೇಹಾರ್ ಪೊಲೀಸ್ ವರಿಷ್ಠಾಧಿಕಾರಿ ಕುಮಾರ್ ಗೌರವ್ ಶನಿವಾರ ತಿಳಿಸಿದ್ದಾರೆ.



'ಮೊಘಲ್ ಶಾಹಿ' ಮಣಿಸಿದ ಶಿವಾಜಿ

ರಾಯಗಢ (ಪಿಟಿಐ): 'ತನ್ನ ಬದುಕಿನುದ್ದಕ್ಕೂ ಮಹಾರಾಷ್ಟ್ರದಲ್ಲಿ ಮರಾಠರ ವಿರುದ್ಧ ಹೋರಾಡಿದ ಮೊಘಲ್ ದೊರೆ ಔರಂಗಜೇಬ್, ಒಬ್ಬ ಸೋತ ವ್ಯಕ್ತಿಯಾಗಿ ಮರಣ ಹೊಂದಿದ್ದಾನೆ. ಆತನ ಸಮಾಧಿ ಇದೇ ನೆಲದಲ್ಲಿದೆ' ಕೇಂದ್ರ ಗೃಹ ಸಚಿವ ಅಮಿತ್ ಶಾ ಶನಿವಾರ ಹೇಳಿದ್ದಾರೆ.

ಶಿವಾಜಿ ಮಹಾರಾಜರ 345ನೇ ಪುಣ್ಯತಿಥಿಯಂದು ಶಾ ಅವರು ರಾಯಗಢ ಕೋಟೆಯಲ್ಲಿ ಶ್ರದ್ಧಾಂಜಲಿ ಸಲ್ಲಿಸಿದರಲ್ಲದೆ, ಅವರ ಶೌರ್ಯವನ್ನು ಶ್ಲಾಘಿಸಿದರು. 'ಮೊಘಲ್ ಶಾಹಿ'ಯನ್ನು (ಮೊಘಲರ ಆಡಳಿತ) ಮಣಿಸಿದ ಶ್ರೇಯ ಶಿವಾಜಿಗೆ ಸಲ್ಲಬೇಕು ಎಂದರು.

ಶಿವಾಜಿ ಮಹಾರಾಜರ 'ಸ್ವಧರ್ಮ ಮತ್ತು ಸ್ವರಾಜ್ಯ' ಆದರ್ಶಗಳು ಸ್ವಾತಂತ್ರ್ಯದ 100ನೇ ವರ್ಷದ ವೇಳೆಗೆ ಭಾರತವು 'ಸೂಪರ್ ಪವರ್' ಆಗಬೇಕೆಂಬ ಮಹತ್ವಾಕಾಂಕ್ಷೆಯನ್ನು ಪ್ರೇರೇಪಿಸುತ್ತದೆ. ಎಂದು ಅವರು ತಿಳಿಸಿದರು.

'ಶಿವಾಜಿ ಅವರನ್ನು ಈ ರಾಜ್ಯಕ್ಕೆ ಮಾತ್ರ ಸೀಮಿತಗೊಳಿಸಬೇಡಿ ಎಂದು ನಾನು ಮಹಾರಾಷ್ಟ್ರದ ಜನರಿಗೆ ಮನವಿ ಮಾಡುತ್ತೇನೆ. ಅವರಲ್ಲಿದ್ದ ಇಚ್ಛಾಶಕ್ತಿ, ದೃಢ ನಿಶ್ಚಯ ಮತ್ತು ಧೈರ್ಯವು ಇಡೀ ದೇಶಕ್ಕೆ ಸ್ಫೂರ್ತಿ ನೀಡುತ್ತದೆ' ಎಂದರು.

ಎನ್‌ಸಿಪಿ ಸಂಸದನ ಮನೆಯಲ್ಲಿ ಭೋಜನ

ಎನ್‌ಸಿಪಿ ಸಂಸದ ಸುನಿಲ್ ತಟ್ಕರೆ ಅವರು ಗೃಹ ಸಚಿವ ಅಮಿತ್ ಶಾ ಅವರಿಗೆ ರಾಯಗಢದ ತಮ್ಮ ನಿವಾಸದಲ್ಲಿ ಶನಿವಾರ ಮಧ್ಯಾಹ್ನ ಭೋಜನದ ವ್ಯವಸ್ಥೆ ಮಾಡಿದರು. ಇದರ ಹಿಂದೆ ಯಾವುದೇ 'ರಾಜಕೀಯ' ಇಲ್ಲ ಎಂದು ತಟ್ಕರೆ ಸ್ಪಷ್ಟಪಡಿಸಿದ್ದಾರೆ.



ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಶಿವಾಜಿ ಮಹಾರಾಜರ ಸಮಾಧಿಗೆ ಗೌರವ ಸಲ್ಲಿಸಿದರು –ಪಿಟಿಐ ಚಿತ್ರ

ಶಿವಸೇನಾದ (ಶಿಂದೆ ಬಣ) ಸ್ಥಳೀಯ ನಾಯಕರು ಭೋಜನದಲ್ಲಿ ಪಾಲ್ಗೊಳ್ಳಲಿಲ್ಲ. ರಾಯಗಢ ಮತ್ತು ನಾಸಿಕ್ ಜಿಲ್ಲೆಗಳಿಗೆ ಉಸ್ತುವಾರಿ ಸಚಿವರ ನೇಮಕದ ವಿಚಾರದಲ್ಲಿ ಆಡಳಿತಾರೂಢ 'ಮಹಾಯುತಿ'ಯಲ್ಲಿ ಮುಸುಕಿನ ಗುದ್ದಾಟ ನಡೆಯುತ್ತಿದೆ.

ರಾಯಗಢ ಜಿಲ್ಲಾ ಉಸ್ತುವಾರಿ ಸಚಿವ ಸ್ಥಾನದ ಆಕಾಂಕ್ಷಿಗಳಲ್ಲಿ ಸುನಿಲ್ ಅವರ ಪುತ್ರಿ ಅದಿತಿ ತಟ್ಕರೆ ಕೂಡ ಒಬ್ಬರು. ಆದರೆ ಶಿವಸೇನಾ ಅದಕ್ಕೆ ವಿರೋಧ ವ್ಯಕ್ತಪಡಿಸುತ್ತಿದೆ.

'ದುರಾಸೆ, ಭಯದಿಂದ ಧರ್ಮ ಬದಲಿಸಬೇಡಿ'

ವಲಸಾಡ್ (ಪಿಟಿಐ): 'ಧರ್ಮವೊಂದೇ ಎಲ್ಲರನ್ನೂ ಸಂತೋಷದತ್ತ ಕೊಂಡೊಯ್ಯಬಲ್ಲದು. ಆದರೆ, ದುರಾಸೆ ಅಥವಾ ಭಯಕ್ಕೆ ಬಿದ್ದು ಯಾರೂ ತಮ್ಮ ಧರ್ಮವನ್ನು ಬದಲಿಸಬಾರದು' ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಶನಿವಾರ ಹೇಳಿದ್ದಾರೆ.

ಗುಜರಾತಿನ ವಲಸಾಡ್ ಜಿಲ್ಲೆಯ ಬಾರುಮಲ್‌ನ ಸದ್ಗುರು ಧಾಮ್‌ನಲ್ಲಿನ ಶ್ರೀ ಭಾವ್ ಭಾವೇಶ್ವರ ಮಹಾದೇವ ದೇವಾಲಯದ ರಜತ ಮಹೋತ್ಸವದಲ್ಲಿ ಅವರು ಮಾತನಾಡಿದರು.

'ನಿತ್ಯ ಬದುಕಿನಲ್ಲಿ ದುರಾಸೆ, ಪ್ರಲೋಭನೆ ಮತ್ತು ಆಮಿಷವು ಜನರನ್ನು ತಮ್ಮ ಧರ್ಮದಿಂದ ವಿಮುಖಗೊಳಿಸಬಹುದು. ಆದರೆ, ಧರ್ಮ ಮಾತ್ರ ಎಲ್ಲರನ್ನೂ ಸಂತೋಷದ ಕಡೆಗೆ ಕರೆದೊಯ್ಯುತ್ತದೆ. ಜನರು ದುರಾಸೆಗೆ ಒಳಗಾಗಿ ಅಥವಾ ಭಯದಿಂದ ಧರ್ಮವನ್ನು ಎಂದಿಗೂ ಬಿಡಬಾರದು' ಎಂದು ಭಾಗವತ್ ಹೇಳಿದರು.

ಸಂಕ್ಷಿಪ್ತ ಸುದ್ದಿ

ಇಂದಿನಿಂದ ನೌಕಾ ಸಮರಾಭ್ಯಾಸ

ನವದೆಹಲಿ(ಪಿಟಿಐ): ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕುಮಾರ್ ತ್ರಿಪಾಠಿ ಅವರು ಭಾರತ ಮತ್ತು ಹಲವು ಆಫ್ರಿಕನ್ ರಾಷ್ಟ್ರಗಳ ನೌಕಾಪಡೆಗಳನ್ನು ಒಳಗೊಂಡ ಆರು ದಿನಗಳ ಬೃಹತ್ ಸಮರಾಭ್ಯಾಸವನ್ನು ವೀಕ್ಷಿಸಲು ತಾಂಜಾನಿಯಾಕ್ಕೆ ಐದು ದಿನಗಳ ಪ್ರವಾಸವನ್ನು ಶನಿವಾರ ಕೈಗೊಂಡರು.

ಭಾರತೀಯ ನೌಕಾಪಡೆ ಮತ್ತು ತಾಂಜಾನಿಯಾ ಪೀಪಲ್ಸ್ ಡಿಫೆನ್ಸ್ ಫೋರ್ಸ್ ಆತಿಥ್ಯದಲ್ಲಿ 'ಆಫ್ರಿಕಾ-ಇಂಡಿಯಾ ಕೀ ಮೆರಿಟೈಮ್ ಎಂಗೇಜ್‌ಮೆಂಟ್' (ಎಐಕೆಇವೈಎಂಇ) ನಡೆಯಲಿದೆ. ಈ ನೌಕಾ ಸಮರಾಭ್ಯಾಸ ದಾರ್-ಎಸ್-ಸಲಾಮ್‌ನಲ್ಲಿ ಭಾನುವಾರ (ಏ.13) ಪ್ರಾರಂಭವಾಗಲಿದೆ. ಸಮರಾಭ್ಯಾಸದಲ್ಲಿ ಭಾರತ, ತಾಂಜಾನಿಯಾ ಜತೆಗೆ ಕೊಮೊರೊಸ್, ಜಿಬೌಟಿ, ಎರಿಟ್ರಿಯಾ, ಕೆನ್ಯಾ, ಮಡಗಾಸ್ಕರ್, ಮಾರಿಷಸ್, ಮೊಜಾಂಬಿಕ್, ಸೀಶೆಲ್ಸ್ ಮತ್ತು ದಕ್ಷಿಣ ಆಫ್ರಿಕಾ ಭಾಗವಹಿಸಲಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



'ಅಡ್ಮಿರಲ್ ತ್ರಿಪಾಠಿ ಅವರು ಏಪ್ರಿಲ್ 12ರಿಂದ 1 ರವರೆಗೆ ತಾಂಜಾನಿಯಾದ ಅಧಿಕೃತ ಭೇಟಿಯಲ್ಲಿದ್ದಾರೆ. ಅವರ ಈ ಭೇಟಿಯು ಭಾರತ ಮತ್ತು ತಾಂಜಾನಿಯಾ ನಡುವಿನ ಕಡಲ ಸಹಕಾರ ಮತ್ತು ಕಾರ್ಯತಂತ್ರದ ಸಂಬಂಧಗಳನ್ನು ಬಲಪಡಿಸುವ ಗುರಿ ಹೊಂದಿದೆ. ಇದು ಹಿಂದೂ ಮಹಾಸಾಗರ ಪ್ರದೇಶದಲ್ಲಿ ರಕ್ಷಣಾ ಪಾಲುದಾರಿಕೆಯನ್ನು ಹೆಚ್ಚಿಸುವ ಭಾರತದ ಬದ್ಧತೆಯನ್ನು ಒತ್ತಿಹೇಳುತ್ತದೆ' ಎಂದು ಭಾರತೀಯ ನೌಕಾಪಡೆಯು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ತಿಳಿಸಿದೆ.

ತೆಲಂಗಾಣದ 'ಟ್ರೀ ಮ್ಯಾನ್' ರಾಮಯ್ಯ ನಿಧನ



ರಾಮಯ್ಯ

ಹೈದರಾಬಾದ್ (ಪಿಟಿಐ): ಪದ್ಮಶ್ರೀ ಪುರಸ್ಕೃತ ಹಾಗೂ 'ಟ್ರೀ ಮ್ಯಾನ್' ಎಂದೇ ಹೆಸರುವಾಸಿಯಾಗಿದ್ದ, ತೆಲಂಗಾಣದ ಕಮ್ಮಂ ಜಿಲ್ಲೆಯ ರಾಮಯ್ಯ (ವನಜೀವಿ ರಾಮಯ್ಯ) (87) ಅವರು ಶನಿವಾರ ನಿಧನರಾಗಿದ್ದಾರೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರೆಡ್ಡಿಪಳ್ಳಿ ಗ್ರಾಮದ ನಿವಾಸದಲ್ಲಿ ಅವರಿಗೆ ಹೃದಯಾಘಾತವಾಗಿತ್ತು ಎಂದು ಹೇಳಿವೆ. ಕಳೆದ ಹಲವು ದಶಕಗಳಿಂದ ಒಂದು ಕೋಟಿಗೂ ಅಧಿಕ ಸಸಿಗಳನ್ನು ನೆಟ್ಟಿದ್ದ ಅವರ ಸಮಾಜ ಸೇವೆಯನ್ನು ಪರಿಗಣಿಸಿ 2017ರಲ್ಲಿ ಪದ್ಮಶ್ರೀ ಪುರಸ್ಕಾರವನ್ನು ಅವರಿಗೆ ನೀಡಲಾಗಿತ್ತು.

ರಾಮಯ್ಯ ಅವರು ಪ್ರಾಥಮಿಕ ಶಿಕ್ಷಣವನ್ನು ಮಾತ್ರ ಪಡೆದಿದ್ದರೂ, ಮಾನವ ಪ್ರಗತಿಗೆ ಮರಗಳು ಅಗತ್ಯ ಎಂದು ಬಾಲ್ಯದಲ್ಲೇ ಅರಿತಿದ್ದರು. ಮಹನೀಯರ ಹುಟ್ಟು ಮತ್ತು ಪುಣ್ಯತಿಥಿಯ ಸ್ಮರಣಾರ್ಥ ಸಸಿಗಳನ್ನು ನೆಡುತ್ತಿದ್ದರು. ಕೊನೆಯುಸಿರೆಳೆಯುವವರೆಗೂ ಮರದ ಆಕೃತಿಯ ಫಲಕ ತೊಟ್ಟು 'ನಾವು ಮರವನ್ನು ರಕ್ಷಿಸಿದರೆ, ಮರವು ನಮ್ಮನ್ನು ರಕ್ಷಿಸುತ್ತದೆ' ಎಂಬ ಅಭಿಯಾನ ನಡೆಸಿದರು. ತಮ್ಮನ್ನು ಭೇಟಿಯಾಗಲು ಬರುವವರಿಗೆ ಗಿಡವನ್ನು ಉಡುಗೊರೆಯಾಗಿ ನೀಡುತ್ತಿದ್ದರು.

ಅಲ್ಲದೆ, ಮರಗಳ ಮಹತ್ವದ ಬಗ್ಗೆ 60 ಹಾಡುಗಳು ಮತ್ತು 2,000ಕ್ಕೂ ಹೆಚ್ಚು ನಾಣ್ನುಡಿಗಳನ್ನು ಬರೆದಿದ್ದಾರೆ.

'ಬಲಪಂಥಕ್ಕೆ ದೊಡ್ಡ ಕವಿಯ ಸೃಷ್ಟಿ ಸಾಧ್ಯವಾಗಿಲ್ಲ'

ಮುಂಬೈ (ಪಿಟಿಐ): 'ಬಲಪಂಥೀಯ ಸಂಘಟನೆಗಳಿಗೆ ಇದುವರೆಗೆ ಒಬ್ಬ ದೊಡ್ಡ ಕವಿಯನ್ನು ಸೃಷ್ಟಿಸಲು ಸಾಧ್ಯವಾಗಿಲ್ಲ' ಎಂದು ಖ್ಯಾತ ಲೇಖಕ, ಗೀತ ರಚನೆಕಾರ ಜಾವೇದ್ ಅಖ್ತರ್ ಹೇಳಿದರು.

ಅಣ್ಣಾಭಾವು ಸಾಠೆ ಸಭಾಂಗಣದಲ್ಲಿ ದಲಿತ ಹೋರಾಟಗಾರ ನಾಮ್‌ದೇವ್ ಡಸಾಲ್ ಅವರ ಸ್ಮರಣಾರ್ಥ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಜಾವೇದ್ ಅವರಿಗೆ 'ನಾಮ್‌ದೇವ್ ಡಸಾಲ್ ಸಮಷ್ಠಿ ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಯಿತು.

ನಂತರ ಮಾತನಾಡಿದ ಜಾವೇದ್ ಅವರು, 'ಪ್ರೇಮಕಾವ್ಯಗಳನ್ನು ಕೇಳಿದವರಿಗೆ ಕಾವ್ಯವು ಪ್ರೇಮದ ಭಾಷೆ ಮಾತ್ರ ಅಲ್ಲ, ನ್ಯಾಯದ ಭಾಷೆಯೂ ಹೌದು ಎನ್ನುವುದು ತಿಳಿದಿರುವುದಿಲ್ಲ. ಜಗತ್ತಿನಾದ್ಯಂತ ಕಾವ್ಯದ ಮೌಲ್ಯ ವ್ಯವಸ್ಥೆಯನ್ನು ಬಲಪಂಥೀಯರು ಸಾಂಸ್ಕೃತಿಕ ಅನುಕೂಲಸಿಂಧು ಆಗಿಸಿಕೊಂಡಿ ದ್ದಾರೆ. ಇದೇ ಕಾರಣದಿಂದ ಜಗತ್ತಿನ ಇತಿಹಾಸದಲ್ಲಿ ಬಲಪಂಥವು ಒಬ್ಬನೇ ಒಬ್ಬ ದೊಡ್ಡ ಕವಿಯನ್ನು ಹುಟ್ಟುಹಾಕಲು ಸಾಧ್ಯವಾಗಿಲ್ಲ' ಎಂದು ಹೇಳಿದರು.



ಜಾವೇದ್ ಅಖ್ತರ್

'ಕಾವ್ಯವು ಸಮಾನತೆ, ನ್ಯಾಯದಲ್ಲಿ ನಂಬಿಕೆ ಇಟ್ಟಿದೆ. ಈ ಮೌಲ್ಯಗಳನ್ನು ಪ್ರತಿಪಾದಿಸುವ ಕಾವ್ಯವನ್ನು ಪ್ರಪಂಚದಾದ್ಯಂತ ಸ್ವೀಕರಿಸಲಾಗುತ್ತದೆ. ದೊಡ್ಡ ಕವಿ ಎಂದರೆ ನ್ಯಾಯದ ಬಗ್ಗೆ ಧ್ವನಿ ಎತ್ತುವವ ಎಂದರ್ಥ' ಎಂದರು. 'ಮೀನಿಗೆ ಧ್ವನಿತಂತು ಇರುವುದಿಲ್ಲ. ಹಾಗಾಗಿ ಅದರ ನೋವು ಅರ್ಥವಾಗುವುದಿಲ್ಲ. ಆದರೆ ಕಾವ್ಯವು ನ್ಯಾಯದ ಭಾಷೆ, ಸಮಾಜದ ಧ್ವನಿತಂತು' ಎಂದರು.

'ಮಹಾತ್ಮ ಫುಲೆ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಅವರು ನಮ್ಮ ಧ್ವನಿಗಳಿಗೆ ಧ್ವನಿತಂತುಗಳನ್ನು ನೀಡಿದ್ದಾರೆ' ಎಂದು ಹೇಳಿದರು.

ವಯನಾಡ್: ಸಂತ್ರಸ್ತರಿಗಾಗಿ ಟೌನ್‌ಶಿಪ್ ನಿರ್ಮಾಣ ಶುರು

ವಯನಾಡ್ (ಕೇರಳ): ವಯನಾಡ್‌ನಲ್ಲಿ ಕಳೆದ ವರ್ಷ ಸಂಭವಿಸಿದ್ದ ಭೂಕುಸಿತದ ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸಲು ಟೌನ್‌ಶಿಪ್ ನಿರ್ಮಿಸುವ ಕಾಮಗಾರಿಯು ಶನಿವಾರ ಇಲ್ಲಿನ ಕಲ್‌ಪೆಟ್ಟಾ ಸಮೀಪದ ಎಲ್‌ಸ್ಟೋನ್ ಎಸ್ಟೇಟ್‌ನಲ್ಲಿ ಆರಂಭವಾಯಿತು.

ಯೋಜನೆಯ ಜಾರಿಗಾಗಿ ಸರ್ಕಾರ ಹೆಚ್ಚುವರಿಯಾಗಿ ₹17.77 ಕೋಟಿ ಠೇವಣಿ ಇಟ್ಟ ಬಳಿಕ ಎಲ್‌ಸ್ಟೋನ್ ಎಸ್ಟೇಟ್ ಭೂಮಿಯನ್ನು ಸ್ವಾಧೀನ ಪಡೆಯುವ ಹಾದಿಯನ್ನು ಕೇರಳ ಹೈಕೋರ್ಟ್ ಸುಗಮಗೊಳಿಸಿತ್ತು. ಇದರ ಹಿಂದೆಯೇ ಕಾಮಗಾರಿ ಆರಂಭವಾಗಿದೆ.

ಹೈಕೋರ್ಟ್‌ನ ಆದೇಶದ ಬಳಿಕ ಸಭೆ ನಡೆಸಿದ ಜಿಲ್ಲಾ ಪ್ರಕೃತಿ ವಿಕೋಪ ಪ್ರಾಧಿಕಾರದ ಅಧಿಕಾರಿಗಳು, ಭೂಸ್ವಾಧೀನಕ್ಕಾಗಿ ಹೆಚ್ಚುವರಿ ಹಣ ಠೇವಣಿ ಇಟ್ಟರು. ಹಿಂದೆಯೇ, ಜಿಲ್ಲಾಧಿಕಾರಿ ಮೇಘಶ್ರೀ ನೇತೃತ್ವದಲ್ಲಿ ಭೂಸ್ವಾಧೀನ ಪ್ರಕ್ರಿಯೆಯು ಪೂರ್ಣಗೊಂಡಿತು. ಗುತ್ತಿಗೆದಾರರ ಸಂಸ್ಥೆ ಉರಲುಂಗಲ್ ಲೇಬರ್ ಕಾಂಟ್ರ್ಯಾಕ್ಟ್ ಕೋಆಪರೇಟಿವ್ ಸೊಸೈಟಿ ಪ್ರತಿನಿಧಿಗಳು ಕಾಮಗಾರಿ ಶುರು ಮಾಡಿದರು ಎಂದರು.



ರೋದನೆ... ನಾಗ್ಪುರದ ಅಲ್ಯುಮಿನಿಯಂ ಕೈಗಾರಿಕಾ ಘಟಕದಲ್ಲಿ ಸಂಭವಿಸಿದ ಸ್ಫೋಟದಲ್ಲಿ ಮೃತಪಟ್ಟ ವ್ಯಕ್ತಿಯ ಸಂಬಂಧಿಕರು ಇಲ್ಲಿನ ಸರ್ಕಾರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಆವರಣದಲ್ಲಿ ಶನಿವಾರ ಕಣ್ಣೀರಿಟ್ಟರು. ಘಟಕದಲ್ಲಿ ಶುಕ್ರವಾರ ಸಂಜೆ ಸಂಭವಿಸಿದ ಸ್ಫೋಟದಲ್ಲಿ ಮೃತಪಟ್ಟವರ ಸಂಖ್ಯೆ ಐದಕ್ಕೇರಿದೆ –ಪಿಟಿಐ ಚಿತ್ರ

ಅಕಾಲಿ ದಳ ಅಧ್ಯಕ್ಷರಾಗಿ ಬಾದಲ್ ಮರು ಆಯ್ಕೆ

ಅಮೃತಸರ (ಪಿಟಿಐ): ಪಂಜಾಬ್‌ನ ಮಾಜಿ ಉಪ ಮುಖ್ಯಮಂತ್ರಿ ಸುಖ್‌ಬೀರ್ ಸಿಂಗ್ ಬಾದಲ್ ಅವರು ಶಿರೋಮಣಿ ಅಕಾಲಿ ದಳ ಪಕ್ಷದ ಅಧ್ಯಕ್ಷರಾಗಿ ಅವಿರೋಧವಾಗಿ ಶನಿವಾರ ಮರು ಆಯ್ಕೆಯಾಗಿದ್ದಾರೆ 2008ರಲ್ಲಿ ಪಕ್ಷದ ಅಧ್ಯಕ್ಷರಾಗಿ ಚುನಾಯಿತರಾಗಿದ್ದ ಸುಖ್‌ಬೀರ್, ಈ ಸ್ಥಾನಕ್ಕೇರಿದ ಕಿರಿಯ ವ್ಯಕ್ತಿ ಆಗಿದ್ದಾರೆ.



ಸುಖ್‌ಬೀರ್ ಸಿಂಗ್ ಬಾದಲ್

2007ರಿಂದ 2017ರವರೆಗೆ ಪಂಜಾಬ್‌ನಲ್ಲಿ ಶಿರೋಮಣಿ ಅಕಾಲಿ ದಳ (ಎಸ್‌ಎಡಿ) ಮತ್ತು ಅದರ ಸರ್ಕಾರ ಮಾಡಿದ ತಪ್ಪುಗಳಿಗಾಗಿ ಸಿಖ್ ಧರ್ಮದ ಅತ್ಯುನ್ನತ ಗುರುಗಳು ಸುಖ್‌ಬೀರ್ ಸಿಂಗ್ ಬಾದಲ್ ಅವರಿಗೆ 'ತನಖಾಹ್' (ಧಾರ್ಮಿಕ ಶಿಕ್ಷೆ) ವಿಧಿಸಿದ್ದರು. ಬಳಿಕ ಅವರು ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

'ಸಮೀಕ್ಷೆಯ ವರದಿ ಪರಿಶೀಲಿಸುತ್ತೇವೆ'



ಡಿ.ಕೆ. ಶಿವಕುಮಾರ್

ಬೆಂಗಳೂರು: 'ಜಾತಿ ಗಣತಿಯು ಜನಗಣತಿಯಲ್ಲ. ಅದು ಸಾಮಾಜಿಕ ಹಾಗೂ ಆರ್ಥಿಕ ಸಮೀಕ್ಷೆ. ಮುಖ್ಯಮಂತ್ರಿ ಮತ್ತು ನಾನು ಇನ್ನೂ ಆ ವರದಿಯನ್ನು ನೋಡಿಲ್ಲ. ನಾವು ಅದನ್ನು ಪರಿಶೀಲಿಸುತ್ತೇವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

'ಜಾತಿ ಗಣತಿ ವರದಿ ವಿಚಾರದಲ್ಲಿ ನಿಮ್ಮ ನಿಲುವೇನು' ಎಂಬ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ನಮ್ಮ ಪಕ್ಷ ಸರ್ವರಿಗೂ ಸಮಬಾಳು, ಸಮಪಾಲು ಎಂಬ ನಿಲುವು ಹೊಂದಿದೆ. ಸಮೀಕ್ಷೆಯ ವರದಿಯಲ್ಲಿ ಏನಾದರೂ ಹೆಚ್ಚು ಕಮ್ಮಿ ಇದ್ದರೆ ಎಲ್ಲರೂ ಚರ್ಚೆ ಮಾಡಿ ಸರಿಪಡಿಸುತ್ತೇವೆ' ಎಂದರು.

'ಸಮಾಜ ಒಡೆಯಲು ಜಾತಿಗಣತಿ ವರದಿ'



ಕುಮಾರಸ್ವಾಮಿ

ಬೆಂಗಳೂರು: 'ಜಾತಿ-ಜಾತಿಗಳ ಮಧ್ಯೆ ಸಂಘರ್ಷ ಸೃಷ್ಟಿಸಿ, ಸಮಾಜವನ್ನು ಒಡೆಯುವ ಉದ್ದೇಶದಿಂದ ಸಿದ್ದರಾಮಯ್ಯ ಜಾತಿಗಣತಿ ವರದಿಯನ್ನು ಮುನ್ನೆಲೆಗೆ ತಂದಿದ್ದಾರೆ. ಈ ಮೂಲಕ ರಾಜ್ಯವನ್ನು ಸರ್ವನಾಶ ಮಾಡಲು ಹೊರಟಿದ್ದಾರೆ' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಸಿದ್ದರಾಮಯ್ಯ ಅವರು ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಜಾತಿಗಣತಿ ವರದಿಯನ್ನು ಮುನ್ನೆಲೆಗೆ ತರುತ್ತಿದ್ದಾರೆ. ತಮ್ಮ ಸ್ವಾರ್ಥಕ್ಕಾಗಿ ಜನಸಮುದಾಯಗಳ ಮಧ್ಯೆ ಒಡಕು ಮೂಡಿಸುತ್ತಿದ್ದಾರೆ. ಸಂವಿಧಾನ ಪ್ರತಿಯನ್ನು ಸದಾ ಕೈಯ್ಯಲ್ಲಿ ಹಿಡಿದು ಶೋ ಮಾಡುವ ಕಾಂಗ್ರೆಸ್, ಸಮಾಜವನ್ನು ಒಡೆಯುತ್ತಿದೆ' ಎಂದರು.

ಹಿಂದುಳಿದ ವರ್ಗಗಳ ಆಯೋಗದ ವರದಿ ಪ್ರಕಾರ ಪ್ರವರ್ಗವಾರು ಜನಸಂಖ್ಯೆ

ಪ್ರವರ್ಗ-1ಎ	**34,96,638**
ಗೊಲ್ಲ	4,42,524
ಕಾಡುಗೊಲ್ಲ	3,10,393
ಕುಡುಬಿ	37,088
ಬೆಸ್ತ	3,99,383
ಅಂಬಿಗ	1,34,230
ಗಂಗಾಮತ	73,627
ಕಬ್ಬೇರ್, ಕಬ್ಬೇರ	58,289
ಕಬ್ಬಲಿಗ/ಕಬ್ಬಿಲಿ	3,88,082
ಮೊಗವೀರ	1,21,478
ಉಪ್ಪಾರ	7,58,605
ಪಿಂಜಾರ	1,11,805
ಪ್ರವರ್ಗ 1ಬಿ	**73,92,313**
ಕುರುಬ ಮತ್ತು ಉಪಜಾತಿಗಳು ಸೇರಿ	43,72,847
ಕುರುಬ	42,71,399
ಸವಿತ	33,355
ಭಜಂತ್ರಿ, ಬಜಂತ್ರಿ	1,01,728
ಬಂಡಾರಿ	41,775
ಹಡಪದ	94,574
ಹೂಗಾರ್/ಹುಗಾರ್	50,077
ಮಾಲಿ/ಮಾಳಿ	83,296
ಕುಲಾಲ	74,197
ಬೋವಿ	64,140
ಯಾದವ	67,754
ಚೆಟ್ಟಿಯಾರ್	13,557
ಸಾಧು ಶೆಟ್ಟಿ	10,309
ಗ್ರಾಮ ಒಕ್ಕಲು/ವಕ್ಕಲ್	38,170
ಹಾಲಕ್ಕಿ ಒಕ್ಕಲು/ಹಾಲಕ್ಕಿ ಒಕ್ಕಲ್	73,977
ಕರೆ ಒಕ್ಕಲು, ಕರೆ ವಕ್ಕಲ್	24,916
ಕ್ರೈಸ್ತರಾಗಿ ಮತಾಂತರವಾದ ಪ.ಜಾ	12,865
ಪ್ರವರ್ಗ 2ಎ	**77,78,209**
ದೇವಾಡಿಗ	1,04,571
ಈಡಿಗ	3,50,603
ಬಿಲ್ಲವ	4,85,628
ಪೂಜಾರಿ	1,15,081
ದೀವರ್/ದೀವರು	63,559
ನಾಮಧಾರಿ/ನಾಮ್‌ಧಾರಿ	2,16,619
ವಹ್ನಿಕುಲ ಕ್ಷತ್ರಿಯ	33,516
ಗೌಂಡರ್	1,03,125
ವಿಶ್ವಕರ್ಮ	6,86,195
ಆಚಾರಿ	1,53,322
ದೈವಜ್ಞ ಬ್ರಾಹ್ಮಣ	80,155
ಗಾಣಿಗ	6,86,428
ಬೌದ್ಧರು	10,050
ಕುರುಹಿನಸೆಟ್ಟಿ	1,53,568
ಪ್ರವರ್ಗ 2ಬಿ	**75,25,880**
ಮುಸ್ಲಿಮರು ಮತ್ತು ಉಪಜಾತಿಗಳು	75,25,880
ಪ್ರವರ್ಗ 3ಎ	**72,99,577**
ಒಕ್ಕಲಿಗ ಮತ್ತು ಉಪ ಜಾತಿಗಳು ಸೇರಿ	61,58,352
ಒಕ್ಕಲಿಗ	40,04,830
ಗೌಡ ಒಕ್ಕಲಿಗ	1,84,479
ಕುಂಚಿಟಿಗ ವಕ್ಕಲಿಗ	41,188
ವಕ್ಕಲ್/ವಕ್ಕಲಿಗ	1,88,508
ಗಂಗಡಕರ್ ಒಕ್ಕಲಿಗ	82,589
ದಾಸ್ ಒಕ್ಕಲಿಗ	17,961
ರೆಡ್ಡಿ ಒಕ್ಕಲಿಗ	24,059
ಮರಸು ಒಕ್ಕಲಿಗ	3,859
ರೆಡ್ಡಿ	4,15,382
ಕುಂಚಿಟಿಗ	1,95,499
ಗೌಡ	4,60,555
ಕಮ್ಮ	1,11,739
ರಡ್ಡಿ	2,87,372
ನಾಮಧಾರಿ ಗೌಡ	21,468
ಬಲಿಜ	2,03,347
ಬಲಜಿಗ	1,37,828
ಬಣಜಿಗ	2,96,411
ನಾಯ್ಡು	1,50,601
ಪ್ರವರ್ಗ 3ಬಿ	**81,37,536**
ವೀರಶೈವ ಲಿಂಗಾಯತ	10,49,706
ಲಿಂಗಾಯತ ಉಪಗುಂಪುಗಳು	66,35,233
ಬೇಡುವ ಜಂಗಮ	89,868
ಲಿಂಗಾಯತ ಹಡಪದ	21,104
ಲಿಂಗಾಯತ್ ಬಡಿಗ/ಬಡಿಗರ್	26,887
ಲಿಂಗಾಯತ ವೀರಶೈವ	2,22,395
ವೀರಶೈವ ಪಂಚಮಸಾಲಿ	4,37,796
ಪಂಚಮಸಾಲಿ ಲಿಂಗಾಯತ	6,33,506
ಆದಿ ಬಣಜಿಗ	1,31,693
ಬಣಜಿಗ ಲಿಂಗಾಯತ	43,423
ಜಂಗಮ ಲಿಂಗಾಯತ	50,242
ಕುಡು ಒಕ್ಕಲಿಗ	81,999
ಲಿಂಗವಂತ	3,88,327
ಲಿಂಗಾಯತ್	26,02,777
ರೆಡ್ಡಿ ಲಿಂಗಾಯತ	33,606
ಸಾದರ ಲಿಂಗಾಯತ	67,903
ವೀರಶೈವ	1,01,019
ನೊಳಂಬ ಲಿಂಗಾಯತ್	1,48,894
ಕ್ರಿಶ್ಚಿಯನ್ ಮತ್ತು ಉಪ ಜಾತಿಗಳು	9,47,994
ಬಂಟ್	3,19,113
ಪರಿವಾರ ಬಂಟ್	3,258
ಜೈನ ದಿಗಂಬರರು	1,62,566

'ಜಾತಿಗಣತಿ ಸಮೀಕ್ಷೆ ವೈಜ್ಞಾನಿಕ, ಜಾರಿ ನಿಶ್ಚಿತ'

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ಸಾಮಾಜಿಕ ನ್ಯಾಯಕ್ಕೆ ಬದ್ಧವಿರುವ ಮುಖ್ಯಮಂತ್ರಿ ಹಾಗೂ ಸರ್ಕಾರ ರಾಜ್ಯದಲ್ಲಿ ಅಧಿಕಾರದಲ್ಲಿದೆ. ಹೀಗಾಗಿ ಸಾಮಾಜಿಕ, ಶೈಕ್ಷಣಿಕ (ಜಾತಿ ಜನಗಣತಿ) ಸಮೀಕ್ಷೆ ವರದಿ ಜಾರಿಗೊಳ್ಳುವುದು ನಿಶ್ಚಿತ. ಆ ಪ್ರಕ್ರಿಯೆಗೆ ಶುಕ್ರವಾರ ಚಾಲನೆ ದೊರೆತಿದೆ' ಎಂದು ವರದಿ ಸಿದ್ಧಪಡಿಸಿದ್ದ ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಮಾಜಿ ಅಧ್ಯಕ್ಷ ಎಚ್.ಕಾಂತರಾಜ ಹೇಳಿದರು.

'ಸಮೀಕ್ಷೆ ನಿಖರವಾಗಿ ನಡೆದಿಲ್ಲ. ವೈಜ್ಞಾನಿಕವಲ್ಲ ಎಂಬುದು ಕೆಲವರ ಆರೋಪ. ನಿಖರ ಪದಕ್ಕೆ ಶೇ 100ರಷ್ಟು ಎಂಬ ಅರ್ಥವಿದೆ. ಅಷ್ಟು ಹೇಳಲು ಕಷ್ಟ ಆಗಬಹುದು. ಸಮೀಕ್ಷೆ ವಿಧಾನವನ್ನು ಸುಪ್ರೀಂ ಕೋರ್ಟ್‌ನ ಮಾರ್ಗಸೂಚಿ, ತಜ್ಞರ ಸಲಹೆಯಂತೆ ರೂಪಿಸಲಾಗಿತ್ತು. ಹೀಗಾಗಿ ಅದು ವೈಜ್ಞಾನಿಕ ಸಮೀಕ್ಷೆ' ಎಂದು ಶನಿವಾರ ಸಮರ್ಥಿಸಿಕೊಂಡರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ವರದಿಯನ್ನು ಸಿದ್ಧಪಡಿಸುವಾಗ ಸರ್ಕಾರ ಸೇರಿದಂತೆ ಯಾರೂ ಹಸ್ತಕ್ಷೇಪ ನಡೆಸಿಲ್ಲ. ಸರ್ಕಾರಗಳು ಬದಲಾಗಿದ್ದರಿಂದ ವರದಿ ಜಾರಿಯಾಗುವುದು ವಿಳಂಬ ಆಗಿರಬಹುದು' ಎಂದು ಪ್ರತಿಕ್ರಿಯಿಸಿದರು.

'ಕೆಲ ಸಮುದಾಯಗಳು ನಿರ್ದಿಷ್ಟ ಸಂಖ್ಯೆ ಕ್ಲೇಮು ಮಾಡುತ್ತಿರುವುದು ಆಯೋಗಕ್ಕೆ ಗೊತ್ತಿಲ್ಲ. ಅವರು ಈಗಿನ ಅಂಕಿ–ಅಂಶ ಒಪ್ಪಬೇಕಾಗುತ್ತದೆ. ಅವರ ನಿರೀಕ್ಷೆಗೆ ಅನುಗುಣವಾಗಿ ಜನಸಂಖ್ಯೆ ಇಲ್ಲ ಎಂದಾದರೆ, ನಿರೀಕ್ಷೆಯ ಮಾನದಂಡ ಏನು ಎಂಬುದು ಇಲ್ಲಿ ಪ್ರಶ್ನೆಯಾಗುತ್ತದೆ' ಎಂದರು.

'ಅವೈಜ್ಞಾನಿಕ ಎಂಬುದರಲ್ಲಿ ಅರ್ಥವಿಲ್ಲ'

ಬೆಳಗಾವಿ: 'ರಾಜ್ಯದಲ್ಲಿ 1931ರ ನಂತರ ಜಾತಿ ಗಣತಿ ನಡೆದಿಲ್ಲ. ಕುಟುಂಬಗಳ ಸ್ಥಿತಿ ಸ್ವಾತಂತ್ರ್ಯಕ್ಕೂ ಮುನ್ನ ಹೇಗಿತ್ತು, ಈಗ ಹೇಗಿದೆ ಎಂದು ತಿಳಿಯಬೇಕಲ್ಲವೇ? ಅದಕ್ಕೆ ಜಾತಿ ಗಣತಿ ಮಾಡಲೇಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಇಲ್ಲಿ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಜಾತಿ ಗಣತಿ ಒಮ್ಮೆಯೂ ನಡೆದಿಲ್ಲ. ಯಾವುದೇ ಗಣತಿ ಶೇಕಡ ನೂರರಷ್ಟು ನಿಖರವಾಗಿರಲು ಸಾಧ್ಯವಿಲ್ಲ. ನಮ್ಮ ಜಾತಿ ಗಣತಿ ಕೂಡ ಗ್ರಾಮೀಣ ಪ್ರದೇಶದಲ್ಲಿ ಶೇ 98, ನಗರ ಪ್ರದೇಶದಲ್ಲಿ ಶೇ 96ರಷ್ಟು ನಿಖರ ಗಣತಿ ನಡೆದಿದೆ. ಇಡೀ ಗಣತಿ ಅವೈಜ್ಞಾನಿಕ ಎನ್ನುವ ಬಿಜೆಪಿಗರ ಮಾತಲ್ಲಿ ಅರ್ಥವಿಲ್ಲ' ಎಂದರು.

ಪ್ರವರ್ಗ '1 ಎ'ಗೆ ಕೆನೆಪದರ ನೀತಿ

ಒಂದನೇ ಪುಟದಿಂದ...

ಇದೇ ಮೊದಲ ಶಿಫಾರಸು: ಕರ್ನಾಟಕದಲ್ಲಿ ರಚಿಸಲಾಗಿದ್ದ ನಾಗನೂರು, ಎಲ್.ಜಿ. ಹಾವನೂರು, ವೆಂಕಟಸ್ವಾಮಿ, ಓ.ಚಿನ್ನಪ್ಪರೆಡ್ಡಿ, ಪ್ರೊ.ರವಿವರ್ಮಕುಮಾರ್, ಸಿ.ಎಸ್.ದ್ವಾರಕನಾಥ್, ಶಂಕರಪ್ಪ ನೇತೃತ್ವದ ಆಯೋಗಗಳು ಸೇರಿದಂತೆ ಯಾವುದೇ ಆಯೋಗವು ಪ್ರವರ್ಗ 1 ರಲ್ಲಿದ್ದ ಜಾತಿಗಳಿಗೆ ಕೆನೆಪದರ ನೀತಿ ಹಾಗೂ ಆದಾಯ ತೆರಿಗೆ ಮಿತಿಯನ್ನು ಹೇರುವಂತೆ ಶಿಫಾರಸು ಮಾಡಿರಲಿಲ್ಲ. ಇದೇ ಮೊದಲ ಬಾರಿಗೆ ಜಯಪ್ರಕಾಶ್ ಹೆಗ್ಡೆ ನೇತೃತ್ವದ ಆಯೋಗ ಕೆನೆಪದರ ನೀತಿ ಶಿಫಾರಸು ಮಾಡಿರುವುದು ಆಕ್ಷೇಪಕ್ಕೆ ಕಾರಣವಾಗಿದೆ.

2002ರಲ್ಲಿ ಕೆನೆಪದರ ನೀತಿಯನ್ನು ಪ್ರಕಟಿಸಿದಾಗ, ಶಿಕ್ಷಣ ಹಾಗೂ ನೇಮಕಾತಿಗಳಲ್ಲಿ ಮೀಸಲಾತಿಯಲ್ಲಿ ಕೆನೆಪದರದವರು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ 1ರಲ್ಲಿನ ಜಾತಿಗಳಿಗೆ ಅನ್ವಯಿಸುವುದಿಲ್ಲ ಎಂದು ಹೇಳಲಾಗಿತ್ತು. ಆಗ, 95 ಜಾತಿ ಹಾಗೂ ಅದರ ಉಪಜಾತಿಗಳನ್ನು ಸೇರಿಸಲಾಗಿತ್ತು. ಈಗ ಜಾತಿ/ಉಪಜಾತಿಗಳಿಗೆ ಪ್ರತ್ಯೇಕ ಸಂಖ್ಯೆ ನಮೂದಿಸಿ ಅದನ್ನು147ಕ್ಕೆ ಹಿಗ್ಗಿಸಲಾಗಿದೆ.

ಶಿಫಾರಸು ಏನು?: 'ಕರ್ನಾಟಕದಲ್ಲಿ ಹಾಲಿ ಇರುವ ಮೀಸಲಾತಿ ಪಟ್ಟಿ ಪ್ರವರ್ಗ 1ರ ಅಡಿ ಇರುವ ಜಾತಿಗಳಿಗೆ ಕೆನೆಪದರ ನೀತಿ ಅಳವಡಿಸಲಾಗಿಲ್ಲ. ಈ ಪಟ್ಟಿಯಲ್ಲಿರುವ ಜಾತಿಗಳಲ್ಲಿ ಕೆಲವೊಂದು ಜಾತಿಗಳ ಜನರ ಆರ್ಥಿಕ ಪರಿಸ್ಥಿತಿ ಸುಧಾರಿಸಿದ್ದು, ಇದರಿಂದ ಶೈಕ್ಷಣಿವಾಗಿಯೂ ಉತ್ತಮ ಸ್ಥಾನ ಪಡೆದಿರುತ್ತಾರೆ. ಇನ್ನೂ ಕೆಲವರು ವ್ಯಾಪಾರ ಮಾಡುತ್ತಾ ಕೋಟ್ಯಧಿಪತಿಗಳಾಗಿರುವವರೂ ಇದ್ದಾರೆ. ರಾಜಕೀಯ ಕ್ಷೇತ್ರಗಳಲ್ಲಿಯೂ ಗುರುತಿಸಿಕೊಂಡಿದ್ದಾರೆ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಪ್ರವರ್ಗ 1ರಲ್ಲಿಯೇ ಆಂತರಿಕವಾಗಿ ಹೆಚ್ಚಿನ ಸ್ಪರ್ಧೆ ಇದ್ದು, ಅವಕಾಶಗಳು ಮಾತ್ರ ಕೆಲವರಿಗೆ ಲಭ್ಯವಾಗುವ ಪರಿಸ್ಥಿತಿ ಇದೆ. ಆದ್ದರಿಂದ, ಶ್ರೀಮಂತ ವರ್ಗಗಳೊಂದಿಗೆ ಹಳ್ಳಿಯ ಬಡ ಕೂಲಿ ಕಾರ್ಮಿಕರ ಮತ್ತು ರೈತರ ಮಕ್ಕಳು ಸ್ಪರ್ಧಿಸುವುದು ಅಸಾಧ್ಯವಾಗಿದೆ. ಉಳ್ಳವರ ಮಕ್ಕಳೇ ಮೀಸಲಾತಿ ಸೌಲಭ್ಯವನ್ನು ಪಡೆಯುವ ಅಪಾಯ ಇರುತ್ತದೆ.

ಸಮ ಸಮಾಜ ನಿರ್ಮಾಣವಾಗಬೇಕಾದರೆ ಸಾಮಾಜಿಕ, ಶೈಕ್ಷಣಿಕವಾಗಿ ಹಿಂದುಳಿದವರಿಗೆ ಮೀಸಲಾತಿ ಕಲ್ಪಿಸಬೇಕಾಗಿದೆ. ಪ್ರವರ್ಗ '1 ಎ' ಪಟ್ಟಿಯಲ್ಲಿನ ಶ್ರೀಮಂತರೊಂದಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಸ್ಪರ್ಧೆ ಮಾಡಬೇಕಾದಲ್ಲಿ ಕೆನೆಪದರ ನೀತಿ ಅಳವಡಿಸುವುದು ಅನಿವಾರ್ಯ. ಹೀಗಾಗಿ, ಪ್ರವರ್ಗ 2 ಎ, ಪ್ರವರ್ಗ 3 ಎ ಹಾಗೂ ಪ್ರವರ್ಗ 3 ಬಿ ಗೆ ಇರುವಂತೆ ಪ್ರವರ್ಗ 1 ಎ ಮತ್ತು ಹೊಸದಾಗಿ ಸೃಜಿಸಲಾದ ಪ್ರವರ್ಗ 1 ಬಿ ಪಟ್ಟಿಯಲ್ಲಿರುವವರಿಗೆ ಕೆನೆಪದರ ನೀತಿ ಅಳವಡಿಸುವಂತೆ ಆಯೋಗ ಶಿಫಾರಸು ಮಾಡಿದೆ.

ಆಯೋಗದ ಶಿಫಾರಸು ಜಾರಿಯಾದರೆ, ಅತ್ಯಂತ ಹಿಂದುಳಿದ ಎಂಬ ಹಣೆ ಪಟ್ಟಿಯನ್ನು ಆಯೋಗದಿಂದಲೇ ಕಟ್ಟಿಕೊಂಡ ಪ್ರವರ್ಗ 1 ಎ ಪಟ್ಟಿಯಲ್ಲಿರುವ ಜಾತಿಯವರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಆದಾಯ ತೆರಿಗೆ ಮಿತಿ ಅನ್ವಯವಾಗಲಿದೆ.

'ಅತ್ಯಂತ ಹಿಂದುಳಿದ' ಪ್ರವರ್ಗಕ್ಕೆ 'ಕುರುಬ'

ಒಂದನೇ ಪುಟದಿಂದ...

ಶೈಕ್ಷಣಿಕ ಸೂಚಕಗಳು (ಸಾಕ್ಷರತಾ ಪ್ರಮಾಣ, ಶಿಕ್ಷಣ ಸಂಸ್ಥೆ, ಶಾಲೆ ಬಿಟ್ಟಿರುವ ಪ್ರಮಾಣ, ವೃತ್ತಿಪರ ಮತ್ತು ತಾಂತ್ರಿಕ ಶಿಕ್ಷಣ, ಸಾಮಾನ್ಯ ಶಿಕ್ಷಣ) ಜೀವನೋಪಾಯ (ಭೂರಹಿತ ಕುಟುಂಬಗಳು, ಜೀವನೋಪಾಯ, ಸರ್ಕಾರಿ ಉದ್ಯೋಗ, ಸಂಘಟಿತ ಖಾಸಗಿ ವಲಯ ಈ ಎಲ್ಲವುಗಳಿಗೆ ಒಟ್ಟು 100, ಹೀಗೆ ಒಟ್ಟು 200 ಅಂಕಗಳಿಗೆ ಮೌಲ್ಯಾಂಕ ಹಂಚಿಕೆ ಮಾಡಲಾಗಿದೆ.

200 ಅಂಕಗಳಲ್ಲಿ 90 ಅಂಕವನ್ನು ಕಟ್ ಆಫ್ ಪಾಯಿಂಟ್ ಎಂದು ತೆಗೆದುಕೊಂಡು, 90 ಮತ್ತು ಅದಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ಜಾತಿಗಳು ಅತ್ಯಂತ ಹಿಂದುಳಿದ (ಪ್ರವರ್ಗ 1), 50ರಿಂದ 89 ಅಂಕ ಗಳಿಸಿದ ಜಾತಿಗಳು ಅತಿ ಹಿಂದುಳಿದ (ಪ್ರವರ್ಗ 2), 20ರಿಂದ 49 ಅಂಕ ಪಡೆದ ಜಾತಿಗಳು ಹಿಂದುಳಿದ (ಪ್ರವರ್ಗ 3), 20ಕ್ಕಿಂತ ಕಡಿಮೆ ಅಂಕ ಪಡೆದ ಜಾತಿಗಳು ಸಾಮಾನ್ಯ ಎಂದು ವರ್ಗೀಕರಣ ಮಾಡಲಾಗಿದೆ.

ಆ ಬಳಿಕ ಪ್ರತಿ ಪ್ರವರ್ಗಗಳಲ್ಲಿ 'ಎ' ಮತ್ತು 'ಬಿ' ಎಂದು ಉಪ ವರ್ಗೀಕರಣ ಮಾಡಲಾಗಿದೆ. 125 ಮತ್ತು ಅದಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ಜಾತಿಗಳು (ಅಲೆಮಾರಿ ಮತ್ತು ಅರೆ ಅಲೆಮಾರಿ ಜಾತಿಗಳು ಸೇರಿದಂತೆ) ಪ್ರವರ್ಗ-1ಎ, 90ರಿಂದ 124 ಅಂಕಗಳ ವ್ಯಾಪ್ತಿಯಲ್ಲಿ ಅಂಕಗಳನ್ನು ಪಡೆದ ಜಾತಿಗಳು ಹಾಗೂ ಸರ್ಕಾರಿ ಆದೇಶದ ಪ್ರವರ್ಗ-1ರಲ್ಲಿ 'ಅತ್ಯಂತ ಹಿಂದುಳಿದ' ಎಂದು ಗುರುತಿಸಿದ ಜಾತಿಗಳು ಪ್ರವರ್ಗ-1ಬಿ ಎಂದು ವರ್ಗೀಕರಿಸಲಾಗಿದೆ.

50ರಿಂದ 89ರ ವ್ಯಾಪ್ತಿಯಲ್ಲಿ ಅಂಕಗಳನ್ನು ಪಡೆದ ಜಾತಿಗಳು ಮತ್ತು 20ರಿಂದ 49 ಅಂಕಗಳನ್ನು ಪಡೆದಿದ್ದು ಸರ್ಕಾರಿ ಆದೇಶದ ಪ್ರವರ್ಗ-2ಎಯಲ್ಲಿ ಈಗಾಗಲೇ 'ಅತಿ ಹಿಂದುಳಿದ' ಎಂದು ಗುರುತಿಸಿದ ಜಾತಿಗಳನ್ನು ಪ್ರವರ್ಗ-2ಎಯಲ್ಲೇ ಉಳಿಸಲಾಗಿದೆ. ಮುಸ್ಲಿಂ ಮತ್ತು ಉಪ ಜಾತಿಗಳನ್ನು ಪ್ರವರ್ಗ-2ಬಿಯಲ್ಲಿ ಪಟ್ಟಿ ಮಾಡಲಾಗಿದೆ.

ಇನ್ನು 20ರಿಂದ 49 ಅಂಕಗಳನ್ನು ಪಡೆದಿದ್ದು ಸರ್ಕಾರಿ ಆದೇಶದ ಪ್ರವರ್ಗ-3ಎಯಲ್ಲಿ ಪಟ್ಟಿ ಮಾಡಿರುವ ಜಾತಿಗಳನ್ನು ಪ್ರವರ್ಗ-3ಎಯಲ್ಲಿ, 20ರಿಂದ 49 ಅಂಕಗಳನ್ನು ಪಡೆದಿದ್ದು, ಸರ್ಕಾರಿ ಆದೇಶ ಪ್ರವರ್ಗ-3ಬಿಯಲ್ಲಿ ಪಟ್ಟಿ ಮಾಡಿರುವ ಜಾತಿಗಳನ್ನು ಪ್ರವರ್ಗ-3ಬಿಯಲ್ಲಿಯೇ ಉಳಿಸಿ ಆಯೋಗವು ಮರುವರ್ಗೀಕರಣ ಮಾಡಿದೆ.

ಇದೇ ಕಾರಣಕ್ಕೆ ಕುರುಬ ಮತ್ತು ಇತರ ಕೆಲ ಸಮುದಾಯಗಳನ್ನು '2ಎ'ಯಿಂದ ತೆಗೆದು ಹೊಸತಾಗಿ ಮಾಡಿದ 'ಅತ್ಯಂತ ಹಿಂದುಳಿದ' ಪ್ರವರ್ಗ 1 'ಬಿ'ಗೆ ಸೇರಿಸಲಾಗಿದೆ. ಹೀಗೆ ವಿವಿಧ ಜಾತಿಗಳ ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವಿಕೆಯನ್ನು ಗುರುತಿಸಿ ಮರು ವರ್ಗೀಕರಣ ಮಾಡಲಾಗಿದೆ.

ಒಂದನೇ ಪುಟದಿಂದ..

ಸಾಕಾರವಾಗದ ಸ್ವಚ್ಛಭಾರತ

ಜಗಳೂರು ತಾಲ್ಲೂಕಿನ ಪಲ್ಲಾಗಟ್ಟೆ ಗ್ರಾಮದ 'ವ್ಯಥೆ' ಕೊಂಚ ಭಿನ್ನವಾಗಿದೆ. ಕಸ ಸಂಗ್ರಹ ವಾಹನ 'ಸ್ವಚ್ಛ ವಾಹಿನಿ' ಚಾಲನೆಯ ತರಬೇತಿ ಪಡೆದ ಲಕ್ಷ್ಮಿ 9 ತಿಂಗಳು ಗ್ರಾಮದ ನೈರ್ಮಲ್ಯ ಕಾಪಾಡಿದರು. ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆಯ (ಎನ್‌ಆರ್‌ಎಲ್‌ಎಮ್) ಒತ್ತಾಸೆಯ ಮೇರೆಗೆ ಗೌರವಧನ ಇಲ್ಲದಿದ್ದರೂ ಕಸ ಸಂಗ್ರಹಿಸುವ ಕಾರ್ಯವನ್ನು ಕೈಬಿಡಲಿಲ್ಲ. ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸಕಾರಾತ್ಮಕವಾಗಿ ಸ್ಪಂದಿಸದ ಪರಿಣಾಮ ಕೆಲಸದಿಂದ ವಿಮುಖರಾದರು. ಕಸ ಮುಕ್ತವಾಗಿದ್ದ ಗ್ರಾಮದಲ್ಲಿ ಅನೈರ್ಮಲ್ಯ ಕಣ್ಣಿಗೆ ರಾಚುತ್ತಿದೆ.

ಗ್ರಾಮಗಳನ್ನು ಕಸಮುಕ್ತಗೊಳಿಸಿ ನಿರ್ಮಲ ಪರಿಸರದ ಕನಸು ಬಿತ್ತಿದ್ದ 'ಸ್ವಚ್ಛ ಭಾರತ ಮಿಷನ್' ಅಭಿವೃದ್ಧಿ ಅಧಿಕಾರಿಗಳ ಇಚ್ಛಾಶಕ್ತಿಯ ಕೊರತೆಯಿಂದ ನಿರೀಕ್ಷಿತ ಪ್ರಗತಿ ಕಾಣುತ್ತಿಲ್ಲ. ಕಾಳಜಿ ಇರುವ ಕೆಲ ಪಿಡಿಒಗಳು ಕಸ ಸಂಗ್ರಹಕ್ಕೆ ಹಾಕಿದ ಅಡಿಪಾಯವೂ ಭದ್ರವಾಗಿ ಉಳಿಯುತ್ತಿಲ್ಲ. ರಾಜ್ಯದ ಕೆಲವೇ ಗ್ರಾಮ ಪಂಚಾಯಿತಿಗಳಲ್ಲಿ ಕಸ ಸಂಗ್ರಹ ಕೆಲಸ ಅತ್ಯುತ್ತಮವಾಗಿ ನಡೆಯುತ್ತಿದೆ. ಉಳಿದೆಡೆ ಈ ಯೋಜನೆ ದಾರಿ ತಪ್ಪಿದೆ.

ರಾಜ್ಯದ 5,962 ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 'ಸ್ವಚ್ಛ ಭಾರತ' ಮಿಷನ್ ಅನುಷ್ಠಾನಕ್ಕೆ ಬಂದಿದೆ. ಗ್ರಾಮೀಣ ಪ್ರದೇಶದಲ್ಲಿ ಉತ್ಪತ್ತಿಯಾಗುವ ಕಸವನ್ನು ಸಂಗ್ರಹಿಸಿ ವಿಲೇವಾರಿ ಮಾಡುವ ವ್ಯವಸ್ಥೆಯನ್ನು ಪಂಚಾಯಿತಿ ಮಟ್ಟದಲ್ಲೇ ರೂಪಿಸಲಾಗಿದೆ. ಮಹಿಳಾ ಸಬಲೀಕರಣಕ್ಕೆ ಪೂರಕವಾಗಿ ಈ ಘನತ್ಯಾಜ್ಯ ನಿರ್ವಹಣೆಯ ಹೊಣೆಯನ್ನು ಸ್ಥಳೀಯ ಸ್ವ-ಸಹಾಯ ಸಂಘಗಳಿಗೆ ನೀಡಲಾಗಿದೆ. ಕರಾವಳಿ, ಮಲೆನಾಡು ಹಾಗೂ ಬೆಂಗಳೂರು ಸುತ್ತಲಿನ ಕೆಲ ಜಿಲ್ಲೆಗಳಲ್ಲಿ ಒಂದಷ್ಟು ಮಟ್ಟಿಗೆ ಇದು ಸಾಕಾರಗೊಂಡಿದೆ. ಕಸವನ್ನು ರಸವಾಗಿ ಪರಿವರ್ತಿಸಿ ಆದಾಯದ ಮೂಲವನ್ನಾಗಿ ಮಾಡಿಕೊಳ್ಳಲಾಗಿದೆ. ಇಂತಹ ಯಶಸ್ಸು ರಾಜ್ಯದ ಎಲ್ಲೆಡೆ ಸಿಕ್ಕಿಲ್ಲ.

ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲ್ಲೂಕಿನ ಕುಸುಗಲ್ ಗ್ರಾಮ ಪಂಚಾಯಿತಿಗೆ ಶಶಿಕುಮಾರ್ ಮಂಟೂರು ಅಭಿವೃದ್ಧಿ ಅಧಿಕಾರಿಯಾಗಿ ಬಂದಾಗ ಮನೆ-ಮನೆ ಕಸ ಸಂಗ್ರಹ ಆರಂಭವಾಗಿರಲಿಲ್ಲ. ಟ್ರ್ಯಾಕ್ಟರ್ ಮೂಲಕ ಶುರುವಾದ ಈ ಕಾರ್ಯಕ್ಕೀಗ ಸುಸಜ್ಜಿತ ವಾಹನವಿದೆ. ಕಸ ಸಂಗ್ರಹಿಸುವ ಮಹಿಳೆಯರ ಜೊತೆಗೆ ಪಿಡಿಒ ಆಗಾಗ ಗ್ರಾಮದಲ್ಲಿ ಸಂಚರಿಸುತ್ತಾರೆ. ಕಸ ಎಲ್ಲೆಂದರಲ್ಲಿ ಎಸೆಯುವವರಿಗೆ ಎಚ್ಚರಿಕೆ ನೀಡಿ ಅರಿವು ಮೂಡಿಸಿದ್ದಾರೆ. ಆರು ವರ್ಷಗಳ ನಿರಂತರ ಪ್ರಯತ್ನದ ಫಲವಾಗಿ ಗ್ರಾಮದಲ್ಲಿ ಸ್ವಚ್ಛ ಪರಿಸರ ನಿರ್ಮಾಣವಾಗಿದೆ. ಇಂತಹ ಉತ್ಸಾಹ ಎಲ್ಲೆಡೆ ಕಾಣದಿರುವುದರಿಂದ 'ಸ್ವಚ್ಛ ಭಾರತ'ದ ಕನಸು ಸಾಕಾರಗೊಳ್ಳುತ್ತಿಲ್ಲ.

ಕಸ ಸಂಗ್ರಹಿಸುವ 'ಸ್ವಚ್ಛ ವಾಹಿನಿ', ವಿಲೇವಾರಿ ಘಟಕ 'ಸ್ವಚ್ಛ ಸಂಕೀರ್ಣ' ನಿರ್ಮಾಣ ಬಹುತೇಕ ಎಲ್ಲ ಗ್ರಾಮ ಪಂಚಾಯಿತಿಯಲ್ಲಿವೆ. ವಾಹನ ಚಾಲನೆ, ಕಸ ಸಂಗ್ರಹ ಹಾಗೂ ವಿಲೇವಾರಿಗೆ ಸಂಬಂಧಿಸಿದಂತೆ ಮಹಿಳೆಯರಿಗೆ ತರಬೇತಿ ಕೂಡ ನೀಡಲಾಗಿದೆ. ಹಸಿ ಕಸ, ಒಣ ಕಸ ಹಾಗೂ ಅಪಾಯಕಾರಿ ತ್ಯಾಜ್ಯಗಳನ್ನು ಮೂಲದಲ್ಲಿಯೇ ಬೇರ್ಪಡಿಸಲು ಮನೆಗಳಿಗೆ ಕಸದ ಬುಟ್ಟಿ ವಿತರಿಸಲಾಗಿದೆ. ಆದರೂ ಯೋಜನೆಯ ಅನುಷ್ಠಾನದಲ್ಲಿ ಎದುರಾದ ತೊಡಕು, ಜನರಲ್ಲಿ ಜಾಗೃತವಾಗದ ನಾಗರಿಕ ಪ್ರಜ್ಞೆ ಸೇರಿದಂತೆ ಹಲವು ಸಿಕ್ಕುಗಳ ನಡುವೆ ಸಿಲುಕಿ ಯೋಜನೆ ನಲುಗುತ್ತಿದೆ.

ಕಳೆದ ವರ್ಷ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಬಿಡುಗಡೆ ಮಾಡಿದ ವರದಿ ಪ್ರಕಾರ ರಾಜ್ಯದ 4,530 ಮಹಿಳೆಯರಿಗೆ ವಾಹನ ಚಾಲನಾ ತರಬೇತಿ ನೀಡಲಾಗಿದೆ. ಇದರಲ್ಲಿ 2,826 ಮಹಿಳೆಯರು 'ಸ್ವಚ್ಛ ವಾಹಿನಿ' ಚಾಲನೆ ಮಾಡುತ್ತಿದ್ದಾರೆ ಎಂಬ ಮಾಹಿತಿ ದಾಖಲೆಗಳಲ್ಲಿದೆ. ವಾಸ್ತವ ಪರಿಸ್ಥಿತಿ ಹೆಚ್ಚು ಖುಷಿ ಕೊಡುವಂತೇನೂ ಇಲ್ಲ.

'ಕಸ ಸಂಗ್ರಹಿಸಲು ವಾಹನಗಳು ವಾರಕ್ಕೊಮ್ಮೆ ಮಾತ್ರ ಬರುತ್ತಿವೆ. ಜಾಸ್ತಿ ಕಸ ಕೊಟ್ಟರೆ ಸಿಬ್ಬಂದಿ ತಕರಾರು ಮಾಡುತ್ತಾರೆ. ಕೆಲವೊಮ್ಮೆ ಮಧ್ಯಾಹ್ನದ ವೇಳೆ ಬರುವುದರಿಂದ ಕಸ ಕೊಡಲು ಯಾರೂ ಇರುವುದಿಲ್ಲ. ಆ ಸಮಯದಲ್ಲಿ ನಾವು ಕೃಷಿ ಕೆಲಸಕ್ಕೆ ಬಹುತೇಕರು ಜಮೀನುಗಳಿಗೆ ಹೋಗಿರುತ್ತೇವೆ' ಎಂದು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಅಂಚೆಚಿಟ್ಟನಹಳ್ಳಿಯ ಮಂಗಳಾ ದೂರುತ್ತಾರೆ.

ಕಸ ಸಂಗ್ರಹಿಸುವ ಪ್ರತಿಯೊಬ್ಬರಿಗೆ ₹5,500 ವೇತನವನ್ನು ಗ್ರಾಮ ಪಂಚಾಯಿತಿ ನಿಗದಿಪಡಿಸಿದೆ. ಕಸ ಸಂಗ್ರಹಿಸುವ ಮನೆಗಳಿಂದ ಪ್ರತಿ ದಿನಕ್ಕೆ ₹1ರಂತೆ ತಿಂಗಳಿಗೆ ₹30 ಸಂಗ್ರಹಿಸಬೇಕಿದೆ. 'ಕಸವನ್ನು ಕೊಟ್ಟು ಹಣವನ್ನೂ ನೀಡಬೇಕೇ?' ಎಂಬುದು ಜನರ ಪ್ರಶ್ನೆ. ರಾಜ್ಯದ ಬೆರಳಣಿಕೆಯ ಗ್ರಾಮ ಪಂಚಾಯಿತಿಗಳಲ್ಲಿ ಮಾತ್ರ ಪ್ರತಿ ತಿಂಗಳು ₹20 ಕಸ ಸಂಗ್ರಹದ ಶುಲ್ಕವನ್ನು ಜನರು ಪಾವತಿಸುತ್ತಿದ್ದಾರೆ.

ಸಂಪನ್ಮೂಲ ಸಂಗ್ರಹ ಕೊರತೆಯಿಂದ 'ಸ್ವಚ್ಛ ವಾಹಿನಿ' ಸಿಬ್ಬಂದಿಗೆ ಗೌರವಧನ ನೀಡಲು ಗ್ರಾಮ ಪಂಚಾಯಿತಿಗೆ ಆಗುತ್ತಿಲ್ಲ. ನಿಗದಿತ ವೇತನ ಸಿಗದೇ ಅನೇಕರು ಈ ಕೆಲಸದಿಂದ ವಿಮುಖರಾಗಿದ್ದಾರೆ. ತುಮಕೂರು ಜಿಲ್ಲೆಯ 'ಸ್ವಚ್ಛ ವಾಹಿನಿ' ಚಾಲಕಿಯರು ಹಾಗೂ ಸಹಾಯಕಿಯರಿಗೆ ಗ್ರಾಮ ಪಂಚಾಯಿತಿಗಳಿಂದ ಎಂಟು ತಿಂಗಳಿಂದ ಸಂಬಳ ಪಾವತಿಯಾಗಿಲ್ಲ.

'ಸ್ವಚ್ಛ ವಾಹಿನಿಗೆ ಡೀಸೆಲ್ ಹಾಕಿಸಲು ಹಣವಿಲ್ಲ. ವೇತನ ನಿಯಮಿತವಾಗಿ ಸಿಗುತ್ತಿಲ್ಲ ಎಂಬ ಕಾರಣಕ್ಕೆ ಸಹಾಯಕಿ ಬರುತ್ತಿಲ್ಲ. ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸರಿಯಾಗಿ ಸ್ಪಂದಿಸುತ್ತಿಲ್ಲ. ಇದರಿಂದ ಯೋಜನೆಗೆ ಹಿನ್ನಡೆಯಾಗಿದೆ' ಎಂದು ತುಮಕೂರು ಜಿಲ್ಲೆಯ ಸ್ವಚ್ಛ ವಾಹಿನಿ ಚಾಲಕಿಯೊಬ್ಬರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸಂಗ್ರಹವಾಗುವ ತೆರಿಗೆಯಲ್ಲಿ ಕಸ ವಿಲೇವಾರಿಗೂ ನಿರ್ದಿಷ್ಟ ಭಾಗವನ್ನು ಮೀಸಲಿಡುವಂತೆ ಹಿರಿಯ ಅಧಿಕಾರಿಗಳು ಸೂಚಿಸಿದ್ದಾರೆ. ವಾಣಿಜ್ಯ ಚಟುವಟಿಕೆಗಳಿಗೆ ತೆರೆದುಕೊಂಡ ಹಾಗೂ ನಗರ, ಪಟ್ಟಣದ ಸಮೀಪದಲ್ಲಿರುವ ಪಂಚಾಯಿತಿಗಳಲ್ಲಿ ಮಾತ್ರ ಕಸ ವಿಲೇವಾರಿಗೂ ವ್ಯಯ ಮಾಡುವಷ್ಟು ಹಣಕಾಸಿನ ಲಭ್ಯತೆ ಇದೆ. ಕಸದ ಶುಲ್ಕ, ಕರ ವಸೂಲಿ ಆಗದಿರುವ ಪಂಚಾಯಿತಿಗಳಲ್ಲಿ ಕಸ ಸಂಗ್ರಹಿಸುವ ಮಹಿಳೆಯರಿಗೆ ಗೌರವಧನ ನೀಡಲೂ ಸಾಧ್ಯವಾಗುತ್ತಿಲ್ಲ.

'ಸಣ್ಣ ಗ್ರಾಮ ಪಂಚಾಯಿತಿಗಳಲ್ಲಿ ತೆರಿಗೆ ಸಂಗ್ರಹ ಪ್ರಮಾಣ ಕಡಿಮೆ. ಬರುವ ಆದಾಯದಲ್ಲಿ ಕಸ ಸಂಗ್ರಹ ವಾಹನಕ್ಕೆ ಇಂಧನ ಪೂರೈಕೆ, ಕಸ ವಿಂಗಡಣೆ ಮತ್ತು ಕಸ ಸಂಗ್ರಹಿಸುವ ಸ್ವ-ಸಹಾಯ ಸಂಘಗಳ ಪ್ರತಿನಿಧಿಗಳಿಗೆ ಗೌರವಧನ ಪಾವತಿಸಲು ಸಾಲುತ್ತಿಲ್ಲ' ಎಂದು ಕಾರವಾರ ತಾಲ್ಲೂಕಿನ ಕಡವಾಡ ಗ್ರಾಮ ಪಂಚಾಯಿತಿ ಅಧ್ಯಕ್ಷ ಆನಂದ ನಾಯ್ಕ ದೂರುತ್ತಾರೆ.

ಕಸ ಸಂಗ್ರಹಕ್ಕೆ ಗ್ರಾಮ ಪಂಚಾಯಿತಿ ವತಿಯಿಂದ ಪ್ರತಿ ಮನೆಗೆ ನೀಡಿದ್ದ ಎರಡು ಬಣ್ಣಗಳ ಬುಟ್ಟಿಗಳು ನಿಗದಿತ ಉದ್ದೇಶಕ್ಕೆ ಬಳಕೆ ಆಗುತ್ತಿಲ್ಲ. ಕೆಲ ಜನರು ಇವುಗಳಲ್ಲಿ ಕಾಳು, ಹಿಟ್ಟು ತುಂಬಿದ್ದಾರೆ. ನೀರು ಹಿಡಿದಿಡಲು, ಬಟ್ಟೆ ತೊಳೆಯಲು ಇವು ಉಪಯೋಗವಾಗುತ್ತಿವೆ. ಕಸದ ಬುಟ್ಟಿ, 'ಸ್ವಚ್ಛ ವಾಹಿನಿ' ಹಾಗೂ 'ಸ್ವಚ್ಛ ಸಂಕೀರ್ಣ' ನಿರ್ಮಾಣವೂ ಸೇರಿ ಹಲವು ಉದ್ದೇಶಗಳಿಗೆ ಹರಿಸಿದ ಹಣದ ಹೊಳೆಯಲ್ಲಿ ಕಸದ ಕೊಳೆ ತೊಳೆಯಲು ಸಾಧ್ಯವಾಗುತ್ತಿಲ್ಲ.

'ಸ್ವಚ್ಛ ಸಂಕೀರ್ಣ'ದ ಪ್ರತಿ ಘಟಕಕ್ಕೆ ₹16 ಲಕ್ಷದಿಂದ ₹25 ಲಕ್ಷದ ವರೆಗೆ ವೆಚ್ಚ ಮಾಡಲಾಗಿದೆ. ವಾಹಿನಿಯ ಮೂಲಕ ತಂದ ಕಸವನ್ನು ಇಲ್ಲಿ ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಸಾಧ್ಯವಾಗುತ್ತಿಲ್ಲ. ಚನ್ನಗಿರಿ ತಾಲ್ಲೂಕಿನ ತಾವರೆಕೆರೆ ಗ್ರಾಮ ಪಂಚಾಯಿತಿ ಘಟಕ, ಮೈಸೂರು ತಾಲ್ಲೂಕಿನ ಸಿದ್ಧಲಿಂಗಪುರದಲ್ಲಿ ಘಟಕದ ಸುತ್ತ ಕಸದ ರಾಶಿ ಬಿದ್ದಿದೆ. ಈ ಕಸವನ್ನು ವಿಂಗಡಿಸಿ ವಿಲೇವಾರಿ ಮಾಡಬೇಕಾದ ಸಿಬ್ಬಂದಿ ಇದಕ್ಕೆ ಬೆಂಕಿ ಹಾಕಿ ದಹಿಸುತ್ತಿದ್ದಾರೆ.

ಒಟ್ಟಾರೆಯಾಗಿ ರಾಜ್ಯದಲ್ಲಿ 'ಸ್ವಚ್ಛ ಭಾರತ' ಮಿಷನ್ ಭಾಗಶಃ ಯಶಸ್ವಿಯಾಗುತ್ತಿದೆ. ಕೆಲವೇ ಕೆಲವು ಯಶಸ್ವಿ ಮಾದರಿಗಳೂ ಪಿಡಿಒ ವರ್ಗಾವಣೆಯ ನಂತರ ತೆವಳುತ್ತಿವೆ ಇಲ್ಲವೇ ಜೀವ ಕಳೆದುಕೊಂಡಿವೆ. ಯಶಸ್ವಿ ಮಾದರಿಗಳಲ್ಲೂ ಕಸ ಪುನರ್‌ಬಳಕೆ ತೊಡಕಾಗಿದೆ. ಎಲ್ಲಾ ಜಿಲ್ಲಾ ಪಂಚಾಯ್ತಿಗಳು ಮೆಟೀರಿಯಲ್ ರಿಕವರಿ ಫೆಸಿಲಿಟಿ (ಎಂಆರ್‌ಎಫ್) ಮೂಲಕ ಪುನರ್‌ಬಳಕೆ ಮಾಡಬಹುದಾದ ವಸ್ತುಗಳನ್ನು ಸಂಗ್ರಹಿಸಿ ಮರುಬಳಕೆ ವ್ಯವಸ್ಥೆಗೆ ನೀಡುವ ಜವಾಬ್ದಾರಿ ಹೊತ್ತರೆ ಸ್ವಚ್ಛ ಭಾರತಕ್ಕೆ ಜೀವ ಬರಬಹುದು.

ಪೂರಕ ಮಾಹಿತಿ: ಮಹೇಶ್ ಭಗೀರಥ, ವಿಕ್ರಂ ಕಾಂತಿಕೆರೆ, ಕೆ.ಎಸ್. ಗಿರೀಶ, ಎಲ್.ಮಂಜುನಾಥ್, ಓದೇಶ್ ಸಕಲೇಶಪುರ, ಬಷೀರಅಹ್ಮದ್ ನಗಾರಿ.
ಪರಿಕಲ್ಪನೆ: ಯತೀಶ್ ಕುಮಾರ್ ಜಿ.ಡಿ



ಚನ್ನಗಿರಿ ತಾಲ್ಲೂಕಿನ ತಾವರೆಕೆರೆ ಗ್ರಾಮದ ಘನ ತ್ಯಾಜ್ಯ ವಿಲೇವಾರಿ ಘಟಕದ ಮುಂಭಾಗದಲ್ಲಿ ತ್ಯಾಜ್ಯ ವಸ್ತುಗಳ ರಾಶಿಯನ್ನು ಹಾಕಿರುವುದು



ದಾವಣಗೆರೆ ತಾಲ್ಲೂಕಿನ ಹದಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಿರ್ಮಾಣವಾಗಿರುವ ಘನತ್ಯಾಜ್ಯ ನಿರ್ವಹಣಾ ಘಟಕದಲ್ಲಿ ಕಸ ವಿಂಗಡಣೆ ಮಾಡುತ್ತಿರುವ ಮಹಿಳೆಯರು

ಕಸ ನಿರ್ವಹಣೆಗೆ 'ಹಸಿರು ದಳ'

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 'ಹಸಿರು ದಳ'ವು ಗ್ರಾಮೀಣ ಕಸ ವಿಲೇವಾರಿಗೆ ಬೃಹತ್ ಯೋಜನೆಯನ್ನು ಜಾರಿಗೆ ತಂದಿದೆ. 10 ಗ್ರಾಮ ಪಂಚಾಯಿತಿಗಳಲ್ಲಿ ತ್ಯಾಜ್ಯ ಸಂಗ್ರಹ ಮತ್ತು ನಿರ್ವಹಣೆ ಮಾಡುತ್ತಿರುವ ದಳ, ವಿಲೇವಾರಿ ಘಟಕಗಳನ್ನೂ ಸ್ಥಾಪಿಸಿದೆ. ತ್ಯಾಜ್ಯ ಸಂಗ್ರಹಿಸುವಾಗ ಮರುಬಳಕೆ ಸಾಧ್ಯತೆ ಇರುವ ವಸ್ತುಗಳನ್ನು ಪ್ರತ್ಯೇಕವಾಗಿಸಿ ಮಾರಾಟ ಮಾಡಲಾಗುತ್ತದೆ. ಇದರಿಂದ ಬರುವ ಆದಾಯದ ಒಂದಂಶವನ್ನು 'ಸಂಜೀವಿನಿ'ಗೆ ನೀಡಲಾಗುತ್ತದೆ. ಇದರಿಂದ ಅವರ ಆದಾಯವೂ ಹೆಚ್ಚಾಗಿದೆ. ಹಸಿ ಕಸದಿಂದ ಗೊಬ್ಬರ ತಯಾರಿಕೆಯೂ ಆಗುತ್ತಿದೆ.

ಬಂಟ್ವಾಳ ತಾಲ್ಲೂಕಿನ ಮಾಣಿ ಸಮೀಪದ ಕಡೇಶಿವಾಲ್ಯ ಗ್ರಾಮದ ಸಂಜೀವಿನಿ ಒಕ್ಕೂಟದ ಮಹಿಳೆಯರು ಹಸಿಕಸವನ್ನು ಗೊಬ್ಬರವಾಗಿ ಪರಿವರ್ತಿಸುತ್ತಿದ್ದಾರೆ. ಇದರ ಸದುಪಯೋಗ ಮಾಡುವುದಕ್ಕಾಗಿ ವಿಲೇವಾರಿ ಘಟಕದ ಸಮೀಪದಲ್ಲೇ ಕೃಷಿ ಮಾಡುತ್ತಾರೆ.

'ಸ್ಯಾನಿಟರಿ ಪ್ಯಾಡ್, ನ್ಯಾಪ್‌ಕಿನ್‌ನಂಥ 'ರಿಜೆಕ್ಟೆಡ್ ವೇಸ್ಟ್' ಅನ್ನು ತಾವಾಗಿಯೇ ಯಾರೂ ವಿಲೇವಾರಿ ಮಾಡುತ್ತಿಲ್ಲ. ಅದನ್ನು ಜಲಮೂಲಗಳಿಗೆ ಎಸೆಯುವುದರಿಂದ ದೊಡ್ಡ ಸಮಸ್ಯೆ ಸೃಷ್ಟಿಯಾಗಿದೆ. ಇದಕ್ಕೆ ಪರಿಹಾರ ಕಂಡುಕೊಳ್ಳಲು ಇನ್ನೂ ಸಾಧ್ಯವಾಗಲಿಲ್ಲ' ಎಂದು 'ಹಸಿರು ದಳ'ದ ವ್ಯವಸ್ಥಾಪಕ ನಾಗರಾಜ್ ಅಂಚನ್ ತಿಳಿಸಿದರು.



ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಗಾರಂಪಳ್ಳಿ ಗ್ರಾಮ ಪಂಚಾಯಿತಿಯ ಕಸ ವಿಲೇವಾರಿ ಘಟಕದ ಬಾಗಿಲು ಮುಚ್ಚಲಾಗಿದೆ



ಗೌರವಧನ 5 ತಿಂಗಳಿಂದ ಬಾಕಿ ಇದೆ. ಕಸ ಸಂಗ್ರಹ ಶುಲ್ಕವನ್ನು ಯಾರೂ ಕೊಡುತ್ತಿಲ್ಲ. ಪ್ರತಿ ತಿಂಗಳು ಬ್ಯಾಂಕ್ ಖಾತೆಗೆ ನೇರವಾಗಿ ಗೌರವಧನ ಪಾವತಿಸಿದರೆ ಅನುಕೂಲ

ಸುನೀತಾ ಗಂಗಾಧರ ಹಡಪದ
ಮಹಿಳಾ ಸ್ವ-ಸಹಾಯ ಸಂಘ ಮರೇವಾಡ ಗ್ರಾಮ, ಧಾರವಾಡ



ಹಳ್ಳಿಗಳಲ್ಲಿ ತ್ಯಾಜ್ಯವನ್ನು ತಿಪ್ಪೆಗುಂಡಿಗೇ ಹಾಕಿಬಿಡುತ್ತಾರೆ. ಗ್ರಾಮ ಪಂಚಾಯಿತಿಯಿಂದ ನಿತ್ಯವೂ ವಾಹನ ಬರುವುದಿಲ್ಲ. ಪ್ರತಿ ಮನೆಗಳಿಗೂ ಬುಟ್ಟಿ ಕೊಡಲಾಗಿದೆ. ಆದರೆ, ಅದರಿಂದ ಪ್ರಯೋಜನ ಆಗುತ್ತಿಲ್ಲ

ಹುಯಿಲಾಳು ರಾಮಸ್ವಾಮಿ
ಮೈಸೂರು ತಾಲ್ಲೂಕು

'ರಸ'ವಾಗದ ಕಸ

ಗೊಬ್ಬರ ತಯಾರಿಸಲು ಸಾಧ್ಯವಿರುವ ಹಸಿ ಕಸವನ್ನು ಸಾಮಾನ್ಯವಾಗಿ ಹಳ್ಳಿಗಳಲ್ಲಿ ತಿಪ್ಪೆಗೆ ಹಾಕಲಾಗುತ್ತದೆ. ಒಣ ಕಸವನ್ನು ಮಾತ್ರ ಜನರು 'ಸ್ವಚ್ಛವಾಹಿನಿ'ಗೆ ನೀಡುತ್ತಿದ್ದಾರೆ. ಇದರಲ್ಲಿ ಪ್ಲಾಸ್ಟಿಕ್, ಚಪ್ಪಲಿ, ಬಾಟಲಿ, ಗಾಜು, ನಾರಿನಂತಹ ವಸ್ತುಗಳೇ ಹೆಚ್ಚಾಗಿ ಸಿಗುತ್ತಿವೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯ 'ಸ್ವಚ್ಛ ಸಂಕೀರ್ಣ'ದಲ್ಲಿ ಸಣ್ಣ ಪ್ರಮಾಣದಲ್ಲಿ ಲಭ್ಯವಾಗುವ ಇವನ್ನು ಖರೀದಿಸಲು ಯಾರೊಬ್ಬರೂ ಮುಂದೆ ಬರುತ್ತಿಲ್ಲ. ಒಣ ಕಸವೂ ಲಾಭದಾಯಕವಾಗುತ್ತಿಲ್ಲ ಎಂಬುದು ಸ್ವಸಹಾಯ ಸಂಘದ ಮಹಿಳೆಯರಲ್ಲೂ ನಿರಾಸಕ್ತಿ ಮೂಡಿಸಿದೆ.



ಸಣ್ಣ ಪ್ರಮಾಣದ ಘಟಕಗಳಿಂದ ಪುನರ್ಬಳಕೆ ವಸ್ತುಗಳನ್ನು ಮಾರಾಟ ಮಾಡುವುದು ಕಷ್ಟ. ಎಂಆರ್‌ಎಫ್ ಘಟಕದಲ್ಲಿ ದೊಡ್ಡ ಮಟ್ಟದಲ್ಲಿ ವಿಲೇವಾರಿ ನಡೆಯುವುದರಿಂದ ಆದಾಯ ಕೂಡ ಲಭಿಸಲಿದೆ

ಸುರೇಶ್ ಬಿ.ಇಟ್ನಾಳ್
ಸಿಇಒ, ದಾವಣಗೆರೆ ಜಿಲ್ಲಾ ಪಂಚಾಯಿತಿ

ಇದನ್ನು ಅರಿತ ಸರ್ಕಾರ 10 ಟನ್ ಸಾಮರ್ಥ್ಯದ ಮೆಟೀರಿಯಲ್ ರಿಕವರಿ ಫೆಸಿಲಿಟಿ (ಎಂಆರ್‌ಎಫ್) ಘಟಕವನ್ನು ಉಡುಪಿ, ದಕ್ಷಿಣ ಕನ್ನಡ ಹಾಗೂ ರಾಮನಗರ ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಆರಂಭಿಸಿದೆ. ಜಿಲ್ಲಾ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳಲ್ಲಿ ಸಂಗ್ರಹವಾಗುವ ಒಣ ಕಸವನ್ನು ಇಲ್ಲಿಗೆ ತಂದು ಸಂಸ್ಕರಿಸಿ, ಅದನ್ನು ಮರುಬಳಕೆ ಕಂಪನಿಗಳಿಗೆ ಮಾರಾಟ ಮಾಡುವುದು ಇದರ ಉದ್ದೇಶ. ಪ್ರತಿಯಾಗಿ ಪಂಚಾಯಿತಿಗಳಿಗೆ ಒಂದು ಕೆ.ಜಿ ಕಸಕ್ಕೆ 10 ಪೈಸೆಯಂತೆ ಹಣ ಪಾವತಿಸಲಾಗುತ್ತದೆ. ಇಂತಹದ್ದೇ ಘಟಕಗಳನ್ನು ಎಲ್ಲ ಜಿಲ್ಲೆಯಲ್ಲಿ ಸ್ಥಾಪಿಸುವ ಪ್ರಯತ್ನ ಆಮೆ ಗತಿಯಲ್ಲಿ ಸಾಗುತ್ತಿದೆ.

ದೆಹಲಿ ತಲುಪಿಸಿದ ಕಾಯಕನಿಷ್ಠೆ

ಕೋಲಾರ ಜಿಲ್ಲೆಯ ಬೆಗ್ಲಿಹೊಸಹಳ್ಳಿ ಗ್ರಾಮ ಪಂಚಾಯಿತಿಯ ಕಸ ಸಂಗ್ರಹ ವಾಹನ (ಸ್ವಚ್ಛತಾ ವಾಹಿನಿ) ಚಾಲಕಿ ಮಂಜುಳಾ ಮತ್ತು ಸಹಾಯಕಿ ಶಶಿಕಲಾ ಅವರು ಕಾಯಕನಿಷ್ಠೆಗಾಗಿ 2024ರಲ್ಲಿ ನವದೆಹಲಿಯಲ್ಲಿ ನಡೆದಿದ್ದ ಗಣರಾಜ್ಯೋತ್ಸವ ಪರೇಡ್‌ನಲ್ಲಿ ವಿಶೇಷ ಅತಿಥಿಗಳಾಗಿದ್ದರು.

'ನಮ್ಮ ಕೆಲಸದಿಂದಾಗಿಯೇ ದೆಹಲಿಯಲ್ಲಿ ಪರೇಡ್ ವೀಕ್ಷಿಸಲು ಅವಕಾಶ ಸಿಕ್ಕಿತು. ಆಗ ಊರಿನವರು ನಮ್ಮ ಸಾಧನೆ ಕಂಡು ಹೆಮ್ಮೆಪಟ್ಟರು' ಎಂದು ಇಬ್ಬರೂ 'ಪ್ರಜಾವಾಣಿ'ಯೊಂದಿಗೆ ಸಂತಸ ಹಂಚಿಕೊಂಡರು.

ಕಲಬುರಗಿ ಕಾರ್ಖಾನೆಗೆ ಕೊಡಗಿನ ಕಸ

ಕೊಡಗು ಜಿಲ್ಲೆಯಲ್ಲಿ ಸಂಗ್ರಹವಾಗುವ ಕಸ ಕಲಬುರಗಿ ತಲುಪಿ ಅಲ್ಲಿ ಮರುಬಳಕೆಯಾಗುತ್ತಿದೆ. ಸಿಮೆಂಟ್ ಕಾರ್ಖಾನೆಯಲ್ಲಿ ಒಣ ತ್ಯಾಜ್ಯವನ್ನು ಬಳಸಿ ರಸ್ತೆಗೆ ಹಾಕುವ ಡಾಂಬರ್ ಸ್ವರೂಪದ ವಸ್ತುವನ್ನು ಉತ್ಪಾದಿಸಲಾಗುತ್ತಿದೆ.

ಕೊಡಗಿನ ಬಹುತೇಕ ಹೋಂ ಸ್ಟೇ, ರೆಸಾರ್ಟ್ ಹಾಗೂ ಹೋಟೆಲ್‌ಗಳು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲೇ ಬರುತ್ತವೆ. ಇಲ್ಲಿ ಸೃಷ್ಟಿಯಾಗುತ್ತಿದ್ದ ಅಗಾಧ ಪ್ರಮಾಣದ ಕಸ ವಿಲೇವಾರಿ ದೊಡ್ಡ ಸವಾಲಾಗಿತ್ತು. 'ಸ್ವಚ್ಛ ಭಾರತ್ ಮಿಷನ್' ಶುರುವಾದ ಬಳಿಕ ಇದು ವ್ಯವಸ್ಥಿತವಾಗಿ ನಡೆಯುತ್ತಿದೆ. ಸಂಗ್ರಹವಾಗುವ ಕಸವನ್ನು ವೈಜ್ಞಾನಿಕವಾಗಿ ವಿಂಗಡಿಸಲಾಗುತ್ತದೆ. 'ಹಸಿರು ದಳ' ಮತ್ತು 'ಕ್ಲೀನ್ ಕೂರ್ಗ್ ಇನ್‌ಶಿಯೆಟಿವ್' ಎಂಬ ಸರ್ಕಾರೇತರ ಸಂಸ್ಥೆಗಳ ನೆರವಿನಿಂದ ಕಲಬುರಗಿಯ ಸಿಮೆಂಟ್ ಕಾರ್ಖಾನೆಗೆ ಕಳುಹಿಸಲಾಗುತ್ತಿದೆ.

ಕಾರ್ಮೋಡದ ನಡುವೆ ಕೋಲ್ಮಿಂಚು

ಸರಣಿ ಸವಾಲು ನಡುವೆಯೂ ರಾಜ್ಯದ ಹಲವು ಪಂಚಾಯಿತಿಗಳಲ್ಲಿ ಈ ಯೋಜನೆಗೆ ಯಶಸ್ಸು ಲಭಿಸಿದೆ. ಕಸ ಸಂಗ್ರಹಿಸಿ, ಅದನ್ನು ಬೇರ್ಪಡಿಸಿ, ಗುಜರಿಗೆ ಮಾರಿ ಆದಾಯ ಗಳಿಸಿ ಕಾರ್ಮೋಡಗಳ ನಡುವೆ ಕೋಲ್ಮಿಂಚಿನಂತೆ ಗಮನ ಸೆಳೆಯುತ್ತಿವೆ.

ಬೆಂಗಳೂರು ಸುತ್ತಮುತ್ತಲಿನ ಜಿಲ್ಲೆಗಳಲ್ಲಿ 'ಎನ್‌ಆರ್‌ಎಲ್‌ಎಂ' ಸ್ವ-ಸಹಾಯ ಸಂಘಗಳ ಮಹಿಳೆಯರು ತ್ಯಾಜ್ಯ ಸಂಗ್ರಹಕ್ಕೆ ಕೈಜೋಡಿಸಿದ್ದಾರೆ. ಹಲವೆಡೆ ಹಸಿ ಕಸದಿಂದ ಕಾಂಪೋಸ್ಟ್ ತಯಾರಿಕೆ ನಡೆದಿದ್ದರೆ, ಇನ್ನೂ ಕೆಲವೆಡೆ ತ್ಯಾಜ್ಯ ಸಂಸ್ಕರಣೆಯಂತಹ ಘಟಕಗಳನ್ನು ಸ್ಥಾಪಿಸಿ ಪ್ಲಾಸ್ಟಿಕ್ ತ್ಯಾಜ್ಯವನ್ನು ಮಾರಾಟ ಮಾಡಿ ಆದಾಯ ಗಳಿಸಲಾಗುತ್ತಿದೆ.

ಕೊಪ್ಪಳ ತಾಲ್ಲೂಕಿನ ಲೇಬಗೇರಿ, ಕಾರಟಗಿ ತಾಲ್ಲೂಕಿನ ಬೆನ್ನೂರು ಸೇರಿ ಜಿಲ್ಲೆಯ 12 ಗ್ರಾಮ ಪಂಚಾಯಿತಿಗಳು ಸ್ವಚ್ಛಭಾರತ ಯೋಜನೆಯಡಿ ಆದಾಯದ ಮೂಲ ಸೃಷ್ಟಿಸಿಕೊಂಡಿವೆ. ದಾವಣಗೆರೆ ಜಿಲ್ಲೆಯ ಚೀಲೂರು, ಸಂತೆಬೆನ್ನೂರು, ಕುರ್ಕಿ, ಆವರಗೊಳ್ಳ, ಸವಳಂಗ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಸವು ರಸವಾಗಿ ಪರಿವರ್ತನೆಯಾಗಿದೆ.



ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 13-4-2000

● ಕ್ರೋನಿಯೆ ಸದ್ಯ ಭಾರತದ ವಶಕ್ಕೆ ಇಲ್ಲ

ಕೇಪ್‌ಟೌನ್, ಏ.12 (ರಾಯಿಟರ್ಸ್)– ಹ್ಯಾನ್ಸಿ ಕ್ರೋನಿಯೆ ಅವರ ವಿರುದ್ಧ ಹೂಡಲಾದ 'ಮೋಸದಾಟ' ಹಾಗೂ ಬಾಜಿ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಅವರನ್ನು ಭಾರತದ ವಶಕ್ಕೆ ಒಪ್ಪಿಸುವ ಬಗ್ಗೆ ನಿರ್ಣಯವನ್ನು ದಕ್ಷಿಣ ಆಫ್ರಿಕಾ ದೇಶದ ಅಧ್ಯಕ್ಷ ಥಾಬೊ ಮೆಬಿಕಿ ಅವರಿಗೆ ಬಿಡಲಾಗಿದೆ ಎಂದು ವಿದೇಶಾಂಗ ಖಾತೆಯ ಮೂಲಗಳು ತಿಳಿಸಿವೆ.

ಆದರೆ ತನಿಖೆ ನಡೆಸಲು ಸ್ವತಂತ್ರ ಸಮಿತಿ ರಚಿಸುವ ಮೊದಲು ಅವರನ್ನು ಭಾರತದ ವಶಕ್ಕೆ ಒಪ್ಪಿಸುವುದಿಲ್ಲ ಎಂದು ವಿದೇಶಾಂಗ ಖಾತೆಯ ಸಹಾಯಕ ಸಚಿವ ಅಜೀಜ್ ಪಹಾಡ್ ಅವರು ಹೇಳಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಪ್ರಕರಣದ ಪೂರ್ಣ ಮಾಹಿತಿ ದೊರೆಯುವವರೆಗೆ ನಾನು ಏನನ್ನೂ ಊಹಿಸಲು ಸಾಧ್ಯವಿಲ್ಲ. ಭಾರತದೊಂದಿಗೆ ದಕ್ಷಿಣ ಆಫ್ರಿಕಾ ಉತ್ತಮ ಸಂಬಂಧ ಹೊಂದಿದೆ. ಅದನ್ನು ಮುಂದುವರಿಸಿಕೊಂಡು ಹೋಗಬೇಕು ಎನ್ನುವುದು ಸರ್ಕಾರದ ಉದ್ದೇಶ' ಎಂದು ಹೇಳಿದರು.

ಈ ಮಧ್ಯೆ ಪ್ರಕರಣದ ತನಿಖೆ ಮಾಡಲು ನ್ಯಾಯಾಂಗ ಆಯೋಗವನ್ನು ಶೀಘ್ರವಾಗಿ ರಚಿಸಲಾಗುವುದು ಎಂದು ಕ್ರೀಡಾ ಸಚಿವಾಲಯದ ವಕ್ತಾರ ಗ್ರಹಾಂ ಅಬ್ರಹಾಂಸ್ ಅವರು ತಿಳಿಸಿದ್ದಾರೆ.

ಇಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ವಿಷಯ ಪ್ರಸ್ತಾಪಗೊಂಡಿದ್ದು ಇದನ್ನು ಒಂದು ರಾಷ್ಟ್ರೀಯ ಸಂಕಟ ಎಂದು ಪರಿಗಣಿಸಿ ಮರುಕ ಪಟ್ಟುಕೊಳ್ಳುತ್ತಾ ಕೂರಬಾರದು ಎಂದು ಸರ್ಕಾರ ಜನರಿಗೆ ಮನವಿ ಮಾಡಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಭಾನುವಾರ ಏಪ್ರಿಲ್ 13, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಶುದ್ಧ ಪೂರ್ಣಿಮಾ ಗಂ. 05-52 ನಕ್ಷತ್ರ: ಚಿತ್ತಾ ಗಂ. 21-11 ಯೋಗ: ಹರ್ಷಣ ಗಂ. 21-39 ಕರಣ: ಬವ ಗಂ. 05-52, ಮೀನ ಮಾಸದ 30 ನೇ ದಿನ, ಮಳೆನಕ್ಷತ್ರ: ರೇವತಿ 4.
ರಾಹುಕಾಲ: ಸಾಯಂಕಾಲ 04-30 – 06-00
ಸೂರ್ಯೋದಯ: 06-22 ಸೂರ್ಯಾಸ್ತ: 06-40 ಮುಸ್ಲಿಂ ದಿನಾಂಕ: 13 ಶವ್ವಾಲ್
ದಿನ ವಿಶೇಷ: ಓಳಿ ಮುಕ್ತಾಯ (ಜೈನ್), ವಿಷು (ಕೇರಳ), ಪಾಸೋವರ್ ಮೊದಲ ದಿನ (ಜ್ಯೂಯಿಷ್), ಪಾಮ್ ಭಾನುವಾರ (ಕ್ರಿಶ್ಚಿಯನ್) ಅದೃಷ್ಟ ಸಂಖ್ಯೆ: 5, 7

ಮೇಷ: ಸಾಂಸಾರಿಕವಾಗಿ ಇದ್ದಂತಹ ಹಲವು ಸಮಸ್ಯೆಗಳಿಗೆ ಪರಿಹಾರ ದೊರೆತು, ಮನಸ್ಸಿನ ಶಾಂತಿಯನ್ನು ಪಡೆಯುವಿರಿ. ದಲ್ಲಾಳಿ ವ್ಯವಹಾರದಲ್ಲಿ ಎಚ್ಚರವಹಿಸುವುದು ಸೂಕ್ತ. ರಾಜಕೀಯ ವ್ಯಕ್ತಿಗಳಿಗೆ ಬಿಡುವಿಲ್ಲದ ಓಡಾಟ.

ವೃಷಭ: ನೀವು ಯೋಚಿಸುವ ಪ್ರತಿಯೊಂದು ಕೆಲಸ-ಕಾರ್ಯಗಳು ವಿಳಂಬವಾಗಿ ನಡೆಯುವುದು ನಿಮ್ಮ ಉತ್ಸಾಹಕ್ಕೆ ಅಡ್ಡಿಯನ್ನು ಉಂಟುಮಾಡುತ್ತದೆ. ಆಲಸ್ಯಮಯವಾದ ಸಮಯವನ್ನು ಈ ದಿನ ನೀವು ಅನುಭವಿಸುವಿರಿ.

ಮಿಥುನ: ಯಾವುದೇ ಅಡಚಣೆಗಳು ಇಲ್ಲದೆ, ಅಪಾರವಾದ ಜನಬಲ ದೊರೆತು ದೊಡ್ಡ ಕಾರ್ಯಗಳನ್ನು ಸಾಧಿಸುವಿರಿ. ವಿಷ್ಣುಸಹಸ್ರನಾಮ ಪಾರಾಯಣ ಅಥವಾ ನಾರಾಯಣನ ನಾಮ ಸ್ಮರಣೆ ಮಾಡಿದಲ್ಲಿ ಒಳ್ಳೆಯದಾಗುವುದು.

ಕರ್ಕಾಟಕ: ಹೊಸ ಜವಾಬ್ದಾರಿಗಳನ್ನು ಪೂರೈಸುವತ್ತ ಗಮನಾರ್ಹ ಹೆಜ್ಜೆಯಿಡುವ ಮೂಲಕ ಅಚ್ಚರಿಯ ಫಲಿತಾಂಶ ಕಾಣುವಿರಿ. ಕಫ ಪ್ರಕೃತಿ ಶರೀರ ಹೊಂದಿದ ವ್ಯಕ್ತಿಗಳಿಗೆ ಉಸಿರಾಟದ ಸಮಸ್ಯೆ ಕಾಣಿಸಿಕೊಳ್ಳುವ ಸಾಧ್ಯತೆಯಿದೆ

ಸಿಂಹ: ಬದಲಾದ ಸನ್ನಿವೇಶಕ್ಕೆ ಒಗ್ಗಿಕೊಳ್ಳಬೇಕಾದ ಅನಿವಾರ್ಯ ಸ್ಥಿತಿಯು ಎದುರಾಗುತ್ತದೆ. ಆಸ್ತಿ ವ್ಯವಹಾರಕ್ಕೆ ಸಂಬಂಧಿಸಿದ ದಾಖಲೆ ಪತ್ರಗಳು ನಿಮ್ಮ ಕೈಸೇರಲಿವೆ. ಮನೆಯ ದುರಸ್ತಿ ಕಾರ್ಯ ನಡೆಯುವುದು.

ಕನ್ಯಾ: ಗುತ್ತಿಗೆ ವ್ಯವಹಾರಗಳನ್ನು ಒಪ್ಪಿಕೊಳ್ಳುವ ಮೊದಲು ನಿಮ್ಮಲ್ಲಿರುವ ಜನಸಂಪತ್ತಿನ ಬಗ್ಗೆ ಯೋಚಿಸುವುದು ಅಗತ್ಯವೆನಿಸಲಿದೆ. ಪ್ರೇಮಿಗಳಿಗೆ ಜೀವನವನ್ನು ನಿರ್ಣಯಿಸಲು ಉತ್ತಮ ಅವಕಾಶಗಳು ಈ ದಿನ ಬರಲಿದೆ.

ತುಲಾ: ತೋಟ ಮತ್ತು ಎಸ್ಟೇಟ್ ಕೆಲಸಗಾರರಿಗೆ ಸಂಪಾದನೆ ಹೆಚ್ಚಲಿದೆ ಜೊತೆಯಲ್ಲಿ ಹವಮಾನದ ವ್ಯತ್ಯಾಸದಿಂದಾಗಿ ಅನಾರೋಗ್ಯದ ಭೀತಿ ಉಂಟಾಗುವುದು. ನಿಮ್ಮೆಲ್ಲಾ ವ್ಯವಹಾರಗಳು ಬಹಿರಂಗವಾಗಿದ್ದರೆ ಒಳ್ಳೆಯದು.

ವೃಶ್ಚಿಕ: ಆರ್ಥಿಕ ವಿಚಾರದಲ್ಲಿ ಧನಾಗಮನದಿಂದ ಕಾರ್ಯಾನುಕೂಲಕ್ಕೆ ಹೆಚ್ಚಿನ ಬಲ ಸಿಗುವುದು. ಶತ್ರುಗಳೊಂದಿಗೆ ಇರುವ ಕಲಹ ಅಥವಾ ವಿವಾದದಿಂದ ಬಿಡುಗಡೆಯಾಗುವ ಮಾರ್ಗವನ್ನು ಹುಡುಕಿಕೊಳ್ಳಿರಿ.

ಧನು: ರಬ್ಬರ್, ಪ್ಲಾಸ್ಟಿಕ್ ಸಂಬಂಧಿತ ವ್ಯಾಪಾರದಲ್ಲಿರುವವರು ವೃತ್ತಿಯಲ್ಲಿ ಹೆಚ್ಚಿನ ಏರಿಳಿ ಕಂಡುಬಂದರೂ ನೆಮ್ಮದಿಗೆ ಕೊರತೆ ಇರುವುದಿಲ್ಲ. ಸಂಸಾರದ ವಿಚಾರದಲ್ಲಿ ಮನಸ್ತಾಪ ಬರದಂತೆ ಜಾಗ್ರತೆವಹಿಸಿ

ಮಕರ: ಸಾಮಾಜಿಕ ಕ್ಷೇತ್ರದಲ್ಲಿ ಹೆಸರು ಸಂಪಾದನೆ ಮಾಡುವ ಅಪೇಕ್ಷಿಗಳಿಗೆ ಹಲವಾರು ಉತ್ತಮ ಅವಕಾಶಗಳು ಎದುರಾಗುವುದು. ಮನೆಯಲ್ಲಿ ವಿವಾಹ, ಗೃಹಪ್ರವೇಶದಂತಹ ಶುಭಕಾರ್ಯಗಳ ಪ್ರಸ್ತಾವ ನೆರವೇರುವುದು.

ಕುಂಭ: ಪ್ರಭಾವಶಾಲಿ ವ್ಯಕ್ತಿಯೊಂದಿಗಿನ ಭೇಟಿಯನ್ನು ತಳ್ಳಿ ಹಾಕದೆ ಅವರಿಂದ ನಿಮ್ಮ ವೃತ್ತಿ ಕ್ಷೇತ್ರಕ್ಕೆ ಲಾಭ ಉಂಟಾಗುವಂತೆ ನೋಡಿಕೊಳ್ಳುವ ಪ್ರಯತ್ನಮಾಡಿ. ವಿದ್ಯಾರ್ಥಿಗಳು ವ್ಯಾಸಂಗದಲ್ಲಿ ಪರಿಶ್ರಮ ವಹಿಸಬೇಕಾಗುವುದು.


ಮೀನ: ಮನಸ್ಸು ಸಿರಿತನದ ಜೀವನವನ್ನು ಇಷ್ಟ ಪಡಲಿದೆ. ಆದರೆ ಬುದ್ಧಿ ಸ್ಥಿಮಿತದಲ್ಲಿರಲಿ. ಮೊಮ್ಮಕ್ಕಳ ಆಗಮನದಿಂದಾಗಿ ದೇಹಾಲಸ್ಯ ದೂರಾಗುವುದು. ಹಾಡುಗಾರರಿಗೆ ಈ ದಿನ ಒಳ್ಳೆಯ ಅವಕಾಶವಿರುವುದು.

ಪದಬಂಧ 6010

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ತೀಕ್ಷ್ಣವಾಗಿ ಮುಂದುವರೆಯುವನು (4)
3.ಈತ ಅನುಭವವುಳ್ಳವನು (4)
5.ಹೆಣ್ಣು ದುಂಬಿಯಿದು (4)
7.ಜಲದೊಳಗಿರುವ ಕ್ಲಿಷ್ಟತೆ (3)
8.ಪಾಕಕ್ಕೆ ಸಿಕ್ಕ ಬಹುಮಾನ (5)
11.ದಕ್ಷಿಣದ ವಿರುದ್ಧ ದಿಕ್ಕು (3)
12.ಹತ್ತು ಎನ್ನುವಷ್ಟರಲ್ಲಿ ವಾಸ್ತವ ಸುದ್ದಿ ಉಲ್ಟಾಆಗಿದೆ (4)
15.ವ್ಯಕ್ತಿಗೆ ಅರವತ್ತು ವರ್ಷ ತುಂಬಿದಾಗ ಮಾಡುವ ಸಮಾರಂಭ (4)
16.ಬಿಡುವು ಹೀಗೆ ಬಂದಿದೆ (4)

ಮೇಲಿಂದ ಕೆಳಕ್ಕೆ
1.ಅಂತ್ಯ ಕಾಲವಿದು (4)
2.ಈತ ಹಾಡುಗಾರ (3)
3.ತಂದೆಯ ಒಡಹುಟ್ಟಿದವಳು (2)
4.ಬಹಳ ಎಂದು ಹೀಗೆ ಹೇಳಿ (3)
6.ತಿರುಗಿಸಿದರೂ ಇದು ದುರಸ್ತಿ (3)
7.ಜನರ ಬಳಿಯಿರುವ ತಂದೆ (3)
8.ಮರದ ಹತ್ತಿರ ತಿಳುವಳಿಕೆಯಿಲ್ಲದವನು ನಿಂತಿದ್ದಾನೆ (3)
9.ಷರಬತ್ತು ಕುಡಿಯುವಾಗ ಹಾಕಿದ ಕರಾರು (3)
10.ಹಿಂದಿಯವನ ಪರಿಶ್ರಮ (4)
11.ಗಟ್ಟಿಯಾದ ಶಬ್ದ (3)
13.ನೂಲು ತೆಗೆಯುವ ಕಡ್ಡಿಯಾಕಾರದ ಸಾಧನ (3)
14.ಮನಸ್ಸಿಗೆ ತಟ್ಟನೆ ಹೊಳೆಯುವುದು (2)



6009ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪ್ರಲೋಭನೆ 2.ಆಕ್ಷೇಪಣೆ 4.ಚಕ್ರವಾಕ 7.ಜಗತಿ 8.ನೊಣ 9.ವಲ್ಲಭ 10.ಪಂಕ್ತಿ 11.ಹಾವಸೆ 12.ತರತಮ 14.ಹಗೆತನ 15.ಅಡಾವುಡಿ

ಮೇಲಿಂದ ಕೆಳಕ್ಕೆ: 1.ಪ್ರಪಂಚ 3.ಪದಾತಿ 5.ಕ್ರಮೇಣ 6.ಕತ್ತಿವರಸೆ 7.ಜಡಭರತ 10.ಪಂಡಿತ 11.ಹಾವುಗೆ 13.ಮಹಡಿ

ಸುಡೊಕು 6395

				8			2	
	3							8
6		5		9		4		3
	2		6				3	
5		3	2		1	8		9
	1				9		4	
	6			2				4
3		8	9				5	
	5			3	4			1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6394 ಸುಡೊಕು

1	8	3	5	2	6	9	4	7
2	9	5	3	4	7	1	8	6
7	6	4	9	8	1	5	2	3
9	1	6	4	7	5	2	3	8
3	4	7	2	9	8	6	1	5
5	2	8	6	1	3	7	9	4
8	3	1	7	5	9	4	6	2
6	5	2	1	3	4	8	7	9
4	7	9	8	6	2	3	5	1

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಸುಂಕ ಸಮರ: ವಹಿವಾಟು ಶೇ 3ರಷ್ಟು ಕುಸಿತ ಸಾಧ್ಯತೆ– ವಿಶ್ವಸಂಸ್ಥೆ

ಜಾಗತಿಕ ವ್ಯಾಪಾರಕ್ಕೆ ಪೆಟ್ಟು

ವಿಶ್ವಸಂಸ್ಥೆ (ಪಿಟಿಐ): ಅಮೆರಿಕದ ಪ್ರತಿ ಸುಂಕ ನೀತಿಯಿಂದಾಗಿ ಜಾಗತಿಕ ಮಟ್ಟದಲ್ಲಿ ವ್ಯಾಪಾರ ವಹಿವಾಟು ಶೇ 3ರಷ್ಟು ಕುಗ್ಗಲಿದೆ ಎಂದು ವಿಶ್ವಸಂಸ್ಥೆಯ ಅರ್ಥಶಾಸ್ತ್ರಜ್ಞರು ಅಂದಾಜಿಸಿದ್ದಾರೆ.

ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಕಳೆದ ವಾರ ಭಾರತ ಸೇರಿ ವಿವಿಧ ದೇಶಗಳ ಮೇಲೆ ಭಾರಿ ಪ್ರಮಾಣದಲ್ಲಿ ಪ್ರತಿ ಸುಂಕ ಘೋಷಿಸಿದ್ದರು. ಬಳಿಕ ಶ್ವೇತಭವನ ಆಡಳಿತವು ಚೀನಾ ಹೊರತುಪಡಿಸಿ ಇತರೆ ರಾಷ್ಟ್ರಗಳ ಮೇಲೆ ಹೇರಿದ್ದ ಪ್ರತಿ ಸುಂಕ ಜಾರಿಗೆ 90 ದಿನಗಳವರೆಗೆ ವಿರಾಮ ಘೋಷಿಸಿದೆ.

ಟ್ರಂಪ್ ಆಡಳಿತ ನೀತಿಯು ದೀರ್ಘಕಾಲದಲ್ಲಿ ವ್ಯಾಪಾರ ವಿಧಾನಗಳು ಮತ್ತು ಜಾಗತಿಕ ಆರ್ಥಿಕತೆ ಮೇಲೆ ಪರಿಣಾಮ ಬೀರಲಿದೆ. ಅಮೆರಿಕ ಮತ್ತು ಚೀನಾ ನಡುವೆ ಸುಂಕ ಸಮರ ನಡೆಯುತ್ತಿದೆ. ಇದರಿಂದ ಈ ದೇಶಗಳ ಮಾರುಕಟ್ಟೆಯನ್ನು ಅವಲಂಬಿಸಿರುವ ರಫ್ತು ಭಾರತ, ಕೆನಡಾ ಮತ್ತು ಬ್ರೆಜಿಲ್ ಮಾರುಕಟ್ಟೆಗಳಿಗೆ ಸ್ಥಳಾಂತರಗೊಳ್ಳುವ ನಿರೀಕ್ಷೆಯಿದೆ ಎಂದು ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ವ್ಯಾಪಾರ ಕೇಂದ್ರದ ಕಾರ್ಯನಿರ್ವಾಹಕ ನಿರ್ದೇಶಕಿ ಪಮೇಲಾ ಕೋಕ್ ಹ್ಯಾಮಿಲ್ಟನ್ ಹೇಳಿದ್ದಾರೆ.



ಮೆಕ್ಸಿಕೊ ಕೂಡ ಸುಂಕದ ಸುಳಿಗೆ ಸಿಲುಕಿದೆ. ಇಲ್ಲಿಂದ ಅಮೆರಿಕ, ಚೀನಾ, ಯೂರೋಪ್ ಮತ್ತು ಲ್ಯಾಟಿನ್ ಅಮೆರಿಕ ದೇಶಗಳಿಗೆ ರಫ್ತು ವಹಿವಾಟು ನಡೆಯುತ್ತದೆ. ಸದ್ಯ ಮೆಕ್ಸಿಕೊ ರಫ್ತಿನಿಂದ ಕೆನಡಾ, ಬ್ರೆಜಿಲ್ ಹೆಚ್ಚಿನ ಲಾಭ ಪಡೆಯುವ ಸಾಧ್ಯತೆಯಿದೆ. ಭಾರತಕ್ಕೆ ಇದರಿಂದ ಅಲ್ಪ ಪ್ರಮಾಣದಲ್ಲಿ ಲಾಭವಾಗಲಿದೆ ಎಂದು ಹೇಳಿದ್ದಾರೆ.

ವಿಯೆಟ್ನಾಂ ದೇಶದ ರಫ್ತು ವಹಿವಾಟು ಅಮೆರಿಕ, ಮೆಕ್ಸಿಕೊ ಮತ್ತು ಚೀನಾದ ಬದಲು ಮಧ್ಯ ಏಷ್ಯಾ, ಉತ್ತರ ಅಮೆರಿಕದ ಮಾರುಕಟ್ಟೆಯತ್ತ ಹೊರಳುವ ನಿರೀಕ್ಷೆಯಿದೆ ಎಂದು ವಿವರಿಸಿದ್ದಾರೆ.

ಬಹುಮುಖ್ಯವಾಗಿ ಸಿದ್ಧಉಡುಪು ರಫ್ತಿನ ಮೇಲೆ ಟ್ರಂಪ್ ಸುಂಕ ನೀತಿಯು ಹೆಚ್ಚಿನ ಪರಿಣಾಮ ಬೀರಲಿದೆ. ಬಾಂಗ್ಲಾದೇಶವು ಇಡೀ ವಿಶ್ವದಲ್ಲಿಯೇ ಸಿದ್ಧ ಉಡುಪುಗಳ ರಫ್ತಿನಲ್ಲಿ ಎರಡನೇ ಅತಿ ದೊಡ್ಡ ರಾಷ್ಟ್ರವಾಗಿದೆ. ಅದರ ಮೇಲೆ ಶೇ 37ರಷ್ಟು ಪ್ರತಿ ಸುಂಕ ವಿಧಿಸಲಾಗಿದೆ. ಇದು ಅಮೆರಿಕಕ್ಕೆ 2029ರ ವೇಳೆಗೆ ₹28 ಸಾವಿರ ಕೋಟಿ ರಫ್ತು ನಷ್ಟ ಉಂಟು ಮಾಡಲಿದೆ ಎಂದು ಹೇಳಿದ್ದಾರೆ.

ಆರ್ಥಿಕತೆಗೆ ಧಕ್ಕೆ: ಫ್ರೆಂಚ್‌ನ ಆರ್ಥಿಕ ಸಂಶೋಧನಾ ಸಂಸ್ಥೆಯಾದ ಸಿಇಪಿಐಐ ಅಂದಾಜಿನ ಪ್ರಕಾರ, ಅಮೆರಿಕದ ಸುಂಕ ನೀತಿಯು ಜಾಗತಿಕ ಆರ್ಥಿಕತೆ ಮೇಲೂ ಪರಿಣಾಮ ಬೀರಲಿದೆ. ಜಾಗತಿಕ ಜಿಡಿಪಿ ಶೇ 0.7ರಷ್ಟು ಕುಸಿತಕ್ಕೆ ಕಾರಣವಾಗಲಿದೆ ಎಂದು ಹೇಳಿದೆ.

ಮೆಕ್ಸಿಕೊ, ಚೀನಾ ಮತ್ತು ಥೈಲ್ಯಾಂಡ್ ಮತ್ತು ದಕ್ಷಿಣ ಆಫ್ರಿಕಾ ದೇಶಗಳು ಹೆಚ್ಚು ತೊಂದರೆಗೆ ಸಿಲುಕುತ್ತವೆ ಎಂದು ವಿವರಿಸಿದೆ.

ಮಧ್ಯಂತರ ಒಪ್ಪಂದ ಅಂತಿಮ ಶೀಘ್ರ?

ನವದೆಹಲಿ (ಪಿಟಿಐ): ಸುಂಕ ವಿರಾಮದ ಅವಧಿಯಲ್ಲಿ ಭಾರತ ಮತ್ತು ಅಮೆರಿಕದ ನಡುವೆ ದ್ವಿಪಕ್ಷೀಯ ವ್ಯಾಪಾರಕ್ಕೆ ಸಂಬಂಧಿಸಿದಂತೆ ಮಧ್ಯಂತರ ಒಪ್ಪಂದವು ಅಂತಿಮಗೊಳ್ಳುವ ಸಾಧ್ಯತೆ ಹೆಚ್ಚಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಈಗಾಗಲೇ, ಉಭಯ ದೇಶಗಳ ನಡುವೆ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದ ಮಾತುಕತೆಯ ಷರತ್ತುಗಳು ಅಂತಿಮಗೊಂಡಿವೆ ಎಂದು ಹೇಳಿದ್ದಾರೆ.

ಎರಡು ದೇಶಗಳು ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದಂತೆ ಈಗಾಗಲೇ ಮಾತುಕತೆಯಲ್ಲಿ ತೊಡಗಿವೆ. ಸೆಪ್ಟೆಂಬರ್– ಅಕ್ಟೋಬರ್ ವೇಳೆಗೆ ಮೊದಲ ಹಂತದ ಒಪ್ಪಂದವು ಅಂತಿಮಗೊಳ್ಳುವ ನಿರೀಕ್ಷೆಯಿದೆ ಎಂದು ಹೇಳಿದ್ದಾರೆ.

ಸದ್ಯ ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ವ್ಯಾಪಾರ ವಹಿವಾಟು ಮೌಲ್ಯ ₹16.44 ಲಕ್ಷ ಕೋಟಿ ಇದೆ. 2030ರ ವೇಳೆಗೆ ಇದನ್ನು ₹43 ಲಕ್ಷ ಕೋಟಿಗೆ ಹೆಚ್ಚಿಸುವ ಗುರಿ ಹೊಂದಲಾಗಿದೆ.

ಭಾರತವು ಅಮೆರಿಕವಷ್ಟೇ ಅಲ್ಲದೆ ಇತರೆ ದೇಶಗಳೊಟ್ಟಿಗೆ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದಂತೆ ಮಾತುಕತೆ ಆರಂಭಿಸಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಎಲೆಕ್ಟ್ರಾನಿಕ್ಸ್ ಸರಕು: ಪ್ರತಿ ಸುಂಕದಿಂದ ವಿನಾಯಿತಿ

ನ್ಯಾಶ್‌ವಿಲ್ಲೆ (ಎಪಿ): ಸ್ಮಾರ್ಟ್‌ಫೋನ್‌ಗಳು, ಲ್ಯಾಪ್‌ಟಾಪ್‌ಗಳು ಮತ್ತು ಇತರ ಎಲೆಕ್ಟ್ರಾನಿಕ್ಸ್ ಸರಕುಗಳಿಗೆ ಪ್ರತಿ ಸುಂಕಗಳಿಂದ ವಿನಾಯಿತಿ ನೀಡುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತ ಶುಕ್ರವಾರ ಘೋಷಿಸಿದೆ.

ಅಮೆರಿಕದಲ್ಲಿ ತಯಾರಾಗದ, ಜನಪ್ರಿಯ ಎಲೆಕ್ಟ್ರಾನಿಕ್ಸ್ ಸರಕುಗಳ ಬೆಲೆಗಳು ಇಳಿಕೆಯಾಗುವಲ್ಲಿ ಈ ಕ್ರಮ ನೆರವಾಗುತ್ತದೆ. ಇದು ಆ್ಯಪಲ್, ಸ್ಯಾಮ್‌ಸಂಗ್ ಮತ್ತು ಎನ್‌ವಿಡಿಯಾದಂತಹ ಚಿಪ್ ತಯಾರಿಕಾ ಕಂಪನಿಗಳಿಗೆ ಪ್ರಯೋಜನಕಾರಿ ಆಗಲಿದೆ. ಚೀನಾ ಸೇರಿದಂತೆ ವಿವಿಧ ದೇಶಗಳಿಗೆ ಇದರ ಪ್ರಯೋಜನ ದೊರೆಯಲಿದೆ.

‘ಸ್ಮಾರ್ಟ್‌ಫೋನ್‌ಗಳು, ಲ್ಯಾಪ್‌ಟಾಪ್‌ಗಳು, ಹಾರ್ಡ್ ಡ್ರೈವ್‌ಗಳು, ಫ್ಲಾಟ್–ಪ್ಯಾನಲ್ ಮಾನಿಟರ್‌ಗಳು ಮತ್ತು ಕೆಲ ಚಿಪ್‌ಗಳಂತಹ ವಸ್ತುಗಳು ವಿನಾಯಿತಿಗೆ ಅರ್ಹವಾಗಿವೆ. ಅಂತೆಯೇ ಸೆಮಿಕಂಡಕ್ಟರ್ ತಯಾರಿಸಲು ಬಳಸುವ ಯಂತ್ರಗಳಿಗೂ ವಿನಾಯಿತಿ ದೊರೆಯಲಿದೆ’ ಎಂದು ಅಮೆರಿಕದ ಕಸ್ಟಮ್ಸ್ ಮತ್ತು ಬಾರ್ಡರ್ ಪ್ರೊಟೆಕ್ಷನ್ ಇಲಾಖೆ ಹೇಳಿದೆ.

ಕಾರ್ಮಿಕರ ಕನಿಷ್ಠ ವೇತನ ಕರಡು ಅಧಿಸೂಚನೆ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಉದ್ದಿಮೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಕನಿಷ್ಠ ವೇತನ ದರವನ್ನು ನಿಗದಿ ಮಾಡಿ ಕರಡು ಅಧಿಸೂಚನೆ ಹೊರಡಿಸಲಾಗಿದೆ.

ಕಾರ್ಮಿಕರ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಲು ಯಾವುದೇ ರೀತಿಯ ಅಡೆತಡೆಗಳು ಇಲ್ಲದ ಕಾರಣ ಸುಪ್ರೀಂ ಕೋರ್ಟ್ ತೀರ್ಪಿನ ಅನ್ವಯ ಕನಿಷ್ಠ ವೇತನ ಪರಿಷ್ಕರಿಸಲಾಗಿದೆ ಎಂದು ಕಾರ್ಮಿಕ ಇಲಾಖೆ ತಿಳಿಸಿದೆ.

ಅನುಸೂಚಿ–2ರ ಅಡಿಯಲ್ಲಿ ಶೌಚಾಲಯಗಳು, ಸ್ನಾನಗೃಹಗಳು, ಒಳಚರಂಡಿಗಳನ್ನು ಶುಚಿ ಮಾಡುವ ಕೆಲಸದಲ್ಲಿ ತೊಡಗಿರುವ ವಲಯ–1ರಲ್ಲಿ ದಿನಕ್ಕೆ ₹989, ತಿಂಗಳಿಗೆ ₹25,714, ವಲಯ–2 ದಿನಕ್ಕೆ ₹899, ತಿಂಗಳಿಗೆ ₹23,376.43, ವಲಯ–3ರಲ್ಲಿ ದಿನಕ್ಕೆ ₹817.36, ತಿಂಗಳಿಗೆ ₹21,251.30.

ವಿದ್ಯುತ್ ಉತ್ಪಾದನಾ ಘಟಕಗಳಲ್ಲಿ (ಉಷ್ಣ ವಿದ್ಯುತ್ ಸ್ಥಾವರ) ಕೆಲಸ ಮಾಡುವ ಅತಿ ಕುಶಲ ಕಾರ್ಮಿಕರು ದಿನಕ್ಕೆ ₹1,316.36, ತಿಂಗಳಿಗೆ ₹34,225.42, ಕುಶಲ ಕಾರ್ಮಿಕರು ದಿನಕ್ಕೆ ₹1,196, ತಿಂಗಳಿಗೆ ₹31,114.02, ಅರೆ ಕುಶಲ ಕಾರ್ಮಿಕರು ₹1,087, ತಿಂಗಳಿಗೆ ₹28,285.47, ಅಕುಶಲ ಕಾರ್ಮಿಕರು ₹989, ತಿಂಗಳಿಗೆ ₹25,714.07. ಜಲ ಮತ್ತು ಸೌರ ವಿದ್ಯುತ್ ಸ್ಥಾವರಗಳಲ್ಲಿ ಕೆಲಸ ಮಾಡುವ ಅತಿ ಕುಶಲ ಕಾರ್ಮಿಕರಿಗೆ ದಿನಕ್ಕೆ ₹1,196.69, ತಿಂಗಳಿಗೆ ₹31,114.02, ಕುಶಲ ಕಾರ್ಮಿಕರಿಗೆ ದಿನಕ್ಕೆ ₹1,087, ತಿಂಗಳಿಗೆ ₹28,285, ಅರೆ ಕುಶಲ ಕಾರ್ಮಿಕರಿಗೆ ದಿನಕ್ಕೆ ₹989, ತಿಂಗಳಿಗೆ ₹25,714, ಅಕುಶಲ ಕಾರ್ಮಿಕರಿಗೆ ದಿನಕ್ಕೆ ₹899, ತಿಂಗಳಿಗೆ ₹23,376.

ಇದೇ ರೀತಿ ಅನುಸೂಚಿ–3 ಮತ್ತು ಅನುಸೂಚಿ–4ರ ವ್ಯಾಪ್ತಿಗೆ ಬರುವ ಕಾರ್ಮಿಕರ ಕನಿಷ್ಠ ವೇತನ ಪರಿಷ್ಕರಣೆ ದರವನ್ನು ಪ್ರಕಟಿಸಲಾಗಿದೆ. ಯಾವುದೇ ಆಕ್ಷೇಪಣೆ ಇದ್ದರೆ 2 ತಿಂಗಳಲ್ಲಿ ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, 4 ನೇ ಮಹಡಿ, ವಿಕಾಸಸೌಧ, ಬೆಂಗಳೂರು–1 ಇಲ್ಲಿಗೆ ಸಲ್ಲಿಸಬಹುದು.

ಟಿಟಿಡಿ: ₹1 ಕೋಟಿ ದೇಣಿಗೆ ನೀಡಿದ ಉದ್ಯಮಿ

ತಿರುಪತಿ (ಪಿಟಿಐ): ವಿಶಾಖಪಟ್ಟಣದ ಉದ್ಯಮಿಯೊಬ್ಬರು ಇಲ್ಲಿನ ಶ್ರೀ ವೆಂಕಟೇಶ್ವರ ಅನ್ನ ಪ್ರಸಾದ ಟ್ರಸ್ಟ್‌ಗೆ ಶನಿವಾರ ₹1 ಕೋಟಿ ದೇಣಿಗೆ ನೀಡಿದ್ದಾರೆ. ಗಣಿಗಾರಿಕೆ ಮತ್ತು ಮೂಲ ಸೌಕರ್ಯ ಉದ್ಯಮಿ ಶ್ರೀನಿವಾಸ ರಾವ್ ಅವರು ತಿರುಮಲದ ಕಚೇರಿಯಲ್ಲಿ ಟಿಟಿಡಿ ಅಧ್ಯಕ್ಷ ಬಿ.ಆರ್. ನಾಯ್ಡು ಅವರಿಗೆ ಡಿ.ಡಿ ರೂಪದಲ್ಲಿ ದೇಣಿಗೆಯನ್ನು ಹಸ್ತಾಂತರಿಸಿದ್ದಾರೆ.

‘ಥಾಂಗ್ಜಿಂಗ್ ಬೆಟ್ಟ ಹತ್ತದಿರಿ’

ಇಂಫಾಲ್ (ಪಿಟಿಐ): ಮಣಿಪುರದ ಚುರಾಚಾಂದಪುರ ಜಿಲ್ಲೆಯಲ್ಲಿರುವ ಥಾಂಗ್ಜಿಂಗ್ ಬೆಟ್ಟ ಹತ್ತದಂತೆ ಕುಕಿ–ಜೋ ಸಂಘಟನೆಗಳು ಮೈತೇಯಿ ಸಮುದಾಯಕ್ಕೆ ಎಚ್ಚರಿಕೆ ನೀಡಿವೆ.

‘ಮೈತೇಯಿಗಳು ಪವಿತ್ರ ಬೆಟ್ಟ ಏರುವ ಪ್ರಯತ್ನ ನಡೆಸಿದರೆ, ಅದನ್ನು ನಮಗೆ ಒಡ್ಡುವ ನೇರ ಸವಾಲು ಎಂದೇ ಪರಿಗಣಿಸಲಾಗುವುದು’ ಎಂದು ತಿಳಿಸಿವೆ.

ಸಂಕ್ಷಿಪ್ತ ಸುದ್ದಿ

104 ರೈಲು ನಿಲ್ದಾಣ ಮರು ಅಭಿವೃದ್ಧಿ ಕಾಮಗಾರಿ ಪೂರ್ಣ

ಮುಂಬೈ (ಪಿಟಿಐ): ಅಮೃತ್ ಭಾರತ್ ಯೋಜನೆಯಡಿ ದೇಶದಾದ್ಯಂತ 1,300 ರೈಲು ನಿಲ್ದಾಣಗಳ ಮರು ಅಭಿವೃದ್ಧಿಗೆ ಚಾಲನೆ ನೀಡಲಾಗಿದೆ. ಈ ಪೈಕಿ 104 ನಿಲ್ದಾಣಗಳ ಕಾಮಗಾರಿ ಪೂರ್ಣಗೊಂಡಿದೆ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ಮುಂಬೈನ ಛತ್ರಪತಿ ಶಿವಾಜಿ ಮಹಾರಾಜ್ ಟರ್ಮಿನಲ್‌ನ ಮರು ಅಭಿವೃದ್ಧಿಗೆ ₹1,800 ಕೋಟಿ ನಿಗದಿ ಪಡಿಸಲಾಗಿದೆ. ಇಲ್ಲಿ ಸಂಚರಿಸುವ ಪ್ರಯಾಣಿಕರಿಗೆ ವಿಶ್ವದರ್ಜೆ ಗುಣಮಟ್ಟದ ರೈಲ್ವೆ ಸೌಕರ್ಯ ಒದಗಿಸಲು ಒತ್ತು ನೀಡಲಾಗಿದೆ ಎಂದು ತಿಳಿಸಿದ್ದಾರೆ.

ನಿಲ್ದಾಣಗಳನ್ನು ಆಧುನೀಕರಣಗೊಳಿಸಿ ಪ್ರಯಾಣಿಕರಿಗೆ ಉತ್ತಮ ಸೌಕರ್ಯ ಕಲ್ಪಿಸುವುದು ಈ ಯೋಜನೆಯ ಗುರಿಯಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು, 2023ರಲ್ಲಿ ಇದಕ್ಕೆ ಚಾಲನೆ ನೀಡಿದ್ದರು.

ಸಾಲದ ಬಡ್ಡಿದರ ಇಳಿಸಿದ ಐಒಬಿ

ಚೆನ್ನೈ (ಪಿಟಿಐ): ಸರ್ಕಾರಿ ಸ್ವಾಮ್ಯದ ಇಂಡಿಯನ್ ಓವರ್‌ಸೀಸ್ ಬ್ಯಾಂಕ್ (ಐಒಬಿ) ರೆಪೊ ಆಧರಿತ ಸಾಲದ ಮೇಲಿನ ಬಡ್ಡಿದರವನ್ನು ಶೇ 0.25ರಷ್ಟು ಕಡಿತಗೊಳಿಸಿದೆ.

ಬ್ಯಾಂಕ್‌ನ ಆಸ್ತಿ ಹೊಣೆಗಾರಿಕೆ ನಿರ್ವಹಣಾ ಸಮಿತಿ ಸಭೆಯು ರೆಪೊ ದರ ಕಡಿತದ ಲಾಭವನ್ನು ಗ್ರಾಹಕರಿಗೆ ವರ್ಗಾಯಿಸಲು ಅನುಮತಿ ನೀಡಿದೆ. ಹಾಗಾಗಿ, ಬಡ್ಡಿದರವನ್ನು ಶೇ 9.10 ರಿಂದ ಶೇ 8.85ಕ್ಕೆ ತಗ್ಗಿಸಲಾಗಿದೆ. ಶನಿವಾರದಿಂದಲೇ ಪರಿಷ್ಕೃತ ಆದೇಶ ಜಾರಿಗೆ ಬಂದಿದೆ ಎಂದು ಬ್ಯಾಂಕ್ ತಿಳಿಸಿದೆ.

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊ ದರ ಕಡಿತಗೊಳಿಸಿದ ಬೆನ್ನಲ್ಲೇ ಐಒಬಿ ಈ ಕ್ರಮಕೈಗೊಂಡಿದೆ.

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹27500
ಎಸಿ	₹16520
ಆರ್‌ಪಿ	₹22000
ಆರ್‌ಸಿ	₹12420

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹306-576
ದ್ವಿತಳಿ (ಬಿ.ವಿ)	₹360-655

ದೆಹಲಿ: ಪ್ರತಿಕೂಲ ಹವಾಮಾನ– ಪ್ರಯಾಣಿಕರ ಪರದಾಟ

450 ವಿಮಾನ ಸಂಚಾರ ವ್ಯತ್ಯಯ

ನವದೆಹಲಿ (ಪಿಟಿಐ): ಪ್ರತಿಕೂಲ ಹವಾಮಾನ ಹಾಗೂ ಸಂಚಾರ ದಟ್ಟಣೆಯಿಂದಾಗಿ ದೆಹಲಿಯ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ (ಐಜಿಐಎ) ಶನಿವಾರ 450ಕ್ಕೂ ಹೆಚ್ಚು ವಿಮಾನಗಳ ಹಾರಾಟದಲ್ಲಿ ವ್ಯತ್ಯಯವಾಗಿದೆ.



ನಿಲ್ದಾಣದಲ್ಲಿ ಪ್ರಯಾಣಿಕರು ಕಾಯುತ್ತಿರುವ ಫೋಟೊ ಮತ್ತು ವಿಡಿಯೊ ದೃಶ್ಯಾವಳಿಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

ಶುಕ್ರವಾರ ಸಂಜೆ ಪ್ರತಿಕೂಲ ಹವಾಮಾನದಿಂದಾಗಿ ಹಲವು ವಿಮಾನಗಳ ಸಂಚಾರದಲ್ಲಿ ವಿಳಂಬವಾಗಿತ್ತು. ಈ ಸಮಸ್ಯೆಯು ಮುಂದುವರಿದಿದ್ದು, ಪ್ರಯಾಣಿಕರು ತೊಂದರೆಗೆ ಸಿಲುಕಿದ್ದಾರೆ.

‘ವಿಮಾನಗಳ ಕಾರ್ಯಚರಣೆಯಲ್ಲಿ ತಲೆದೋರಿದ್ದ ಸಮಸ್ಯೆಯು ಸ್ವಲ್ಪ ಮಟ್ಟಿಗೆ ಬಗೆಹರಿದಿದೆ. ಕೆಲವು ವಿಮಾನಗಳ ಸಂಚಾರದಲ್ಲಿ ವಿಳಂಬವಾಗಿದೆ. ಪ್ರಯಾಣಿಕರಿಗೆ ಆಗಿರುವ ತೊಂದರೆ ತಪ್ಪಿಸಲು ನಿಲ್ದಾಣದ ಅಧಿಕಾರಿಗಳು ಕಾರ್ಯ ನಿರತರಾಗಿದ್ದಾರೆ’ ಎಂದು ದೆಹಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರವು ‘ಎಕ್ಸ್’ನಲ್ಲಿ ತಿಳಿಸಿದೆ.

ವಿಮಾನಗಳ ಕಾರ್ಯಾಚರಣೆ ಬಗ್ಗೆ ಮಾಹಿತಿ ಒದಗಿಸುವ ಫ್ಲೈಟ್‌ರಾಡಾರ್ 24 ಡಾಟ್ ಕಾಂ ಪ್ರಕಾರ, ಪ್ರತಿ ವಿಮಾನದ ನಿಗದಿತ ಹಾರಾಟದ ಸಮಯದಲ್ಲಿ 40 ನಿಮಿಷ ವಿಳಂಬವಾಗಿದೆ.

ಸಂಚಾರ ದಟ್ಟಣೆಯಿಂದಾಗಿ ವಿಮಾನಗಳ ಆಗಮನ ಮತ್ತು ನಿರ್ಗಮನಕ್ಕೆ ಸಕಾಲದಲ್ಲಿ ಅನುಮತಿ ದೊರೆಯುತ್ತಿಲ್ಲ. ವಿಮಾನಗಳ ಸಂಚಾರಕ್ಕೆ ಅಡ್ಡಿಯಾಗಿದೆ ಎಂದು ಇಂಡಿಗೊ ವಿಮಾನಯಾನ ಕಂಪನಿ ತಿಳಿಸಿದೆ.

ಒಟ್ಟು ನಾಲ್ಕು ರನ್‌ವೇ ಪೈಕಿ ಮೂರು ಕಾರ್ಯ ನಿರ್ವಹಿಸುತ್ತಿವೆ. ದುರಸ್ತಿ ಕಾರ್ಯದಿಂದಾಗಿ ಒಂದು ರನ್‌ವೇ ಕಾರ್ಯಾಚರಣೆಯು ಸ್ಥಗಿತಗೊಂಡಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹450
12 ಕ್ಕೆ	₹60
ಮೈಸೂರು	
100ಕ್ಕೆ	₹450

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹192
ಆರ್‌ಎಸ್‌ಎಸ್-5	₹187
ಗುಡ್ ಲಾಟ್	₹179

(ಪ್ರತಿ ಕೆ.ಜಿಗೆ)

ದಿಢೀರ್ ಕೈಕೊಟ್ಟ ಯುಪಿಐ ಪಾವತಿ

ಒಂದನೇ ಪುಟದಿಂದ...

ಯುಪಿಐ ಸೇವೆಯನ್ನು ಐಎಂಪಿಎಸ್ (ತಕ್ಷಣದ ಪಾವತಿ ಸೇವೆ) ಅಡಿ ಅಭಿವೃದ್ಧಿ ಪಡಿಸಲಾಗಿದೆ. ಇದರಿಂದ ಗ್ರಾಹಕರು ಎರಡು ಬ್ಯಾಂಕ್ ಖಾತೆಗಳಲ್ಲಿರುವ ಹಣವನ್ನು ತ್ವರಿತವಾಗಿ ಪಾವತಿಸಲು ಅವಕಾಶವಿದೆ. ಇದಕ್ಕೆ ಯಾವುದೇ ಶುಲ್ಕ ಅನ್ವಯಿಸುವುದಿಲ್ಲ.

ದೇಶದಾದ್ಯಂತ ಚಿಕ್ಕ ಅಂಗಡಿಗಳಲ್ಲಿ ಸಣ್ಣ ಮೊತ್ತದ ಖರೀದಿಗೆ ವ್ಯಾಪಕವಾಗಿ ಯುಪಿಐ ಬಳಕೆಯಾಗುತ್ತಿದೆ. ಅಲ್ಲದೆ, ಯುಪಿಐ ಅಡಿ ಸ್ವಯಂಪಾವತಿ ವ್ಯವಸ್ಥೆ ಕಲ್ಪಿಸಲಾಗಿದೆ. ಯಾವುದೇ ಶುಲ್ಕ ಪಾವತಿ ಇತ್ಯಾದಿಗೆ ಬಳಕೆದಾರರು ಈ ವಿಧಾನವನ್ನು ಬಳಸಬಹುದಾಗಿದೆ.

ಯುಪಿಐ ವಹಿವಾಟು ಕೂಡ ಹೆಚ್ಚಳವಾಗುತ್ತಿದೆ. ಫೆಬ್ರುವರಿಯಲ್ಲಿ ಯುಪಿಐ ಮೂಲಕ ₹21.96 ಲಕ್ಷ ಕೋಟಿ ವಹಿವಾಟು ನಡೆದರೆ, ಮಾರ್ಚ್‌ನಲ್ಲಿ ₹24.77 ಲಕ್ಷ ಕೋಟಿ ಮುಟ್ಟಿದೆ. ವಹಿವಾಟು ಪ್ರಮಾಣದಲ್ಲಿ ಶೇ 12.7ರಷ್ಟು ಹೆಚ್ಚಳವಾಗಿದೆ.

ವಕ್ಫ್: ಹಿಂಸಾಚಾರಕ್ಕೆ 3 ಬಲಿ



ಮುರ್ಶಿದಾಬಾದ್ ಜಿಲ್ಲೆಯ ಜಾಂಗಿಪುರದಲ್ಲಿ ಪೊಲೀಸ್ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು ಪಿಟಿಐ ಚಿತ್ರ

ಒಂದನೇ ಪುಟದಿಂದ...

‘ಘಟನೆ ಬಗ್ಗೆ ತನಿಖೆ ಕೈಗೆತ್ತಿಕೊಳ್ಳಲಾಗಿದ್ದು, ಹತ್ಯೆಯಲ್ಲಿ ಭಾಗಿಯಾಗಿದವರನ್ನು ಪತ್ತೆಹಚ್ಚಲು ಪ್ರಯತ್ನಿಸುತ್ತಿದ್ದೇವೆ. ಸಂತ್ರಸ್ತರ ಕುಟುಂಬದ ಇತರ ಸದಸ್ಯರು ಮತ್ತು ಸ್ಥಳೀಯ ನಿವಾಸಿಗಳಿಂದ ಮಾಹಿತಿ ಕಲೆಹಾಕಿದ್ದೇವೆ’ ಎಂದು ಪೊಲೀಸರು ಹೇಳಿದ್ದಾರೆ.

ಇಬ್ಬರಿಗೆ ಗುಂಡೇಟು: ಪ್ರತ್ಯೇಕ ಪ್ರಕರಣವೊಂದರಲ್ಲಿ, ಶಂಷೇರ್‌ಗಂಜ್‌ನ ಧುಲಿಯಾನ್‌ನಲ್ಲಿ ಇಬ್ಬರು ಗುಂಡೇಟಿನಿಂದ ಗಾಯಗೊಂಡಿದ್ದಾರೆ. ಗುಲಾಮ್ ಮೊಯಿನುದ್ದೀನ್ ಶೇಖ್ ಮತ್ತು ಇನ್ನೊಬ್ಬ ಬಾಲಕನಿಗೆ ಗುಂಡು ತಗುಲಿದೆ ಎಂದು ಜಿಲ್ಲಾಡಳಿತದ ಮೂಲಗಳು ತಿಳಿಸಿವೆ.‘ಮುರ್ಶಿದಾಬಾದ್ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಇಬ್ಬರೂ ಚಿಕಿತ್ಸೆ ಪಡೆಯುತ್ತಿದ್ದು, ಆರೋಗ್ಯ ಸ್ಥಿರವಾಗಿದೆ’ ಎಂದಿದೆ.

‘ಮುರ್ಶಿದಾಬಾದ್ ಜಿಲ್ಲೆಯ ವಿವಿಧೆಡೆ ಶುಕ್ರವಾರ ನಡೆದ ಹಿಂಸಾಚಾರದಲ್ಲಿ 15 ಪೊಲೀಸರು ಗಾಯಗೊಂಡಿದ್ದಾರೆ. ಇದುವರೆಗೆ 118 ಮಂದಿಯನ್ನು ಬಂಧಿಸಲಾಗಿದೆ’ ಎಂದು ಎಡಿಜಿಪಿ (ಕಾನೂನು ಮತ್ತು ಸುವ್ಯವಸ್ಥೆ) ಜಾವೇದ್ ಶಮೀಮ್ ತಿಳಿಸಿದ್ದಾರೆ.

ಚೀನಾದ ತತ್ವಜ್ಞಾನಿ ಪ್ರಶಂಸಿಸಿದ ಪ್ರಧಾನಿ ಮೋದಿ

ಬೀಜಿಂಗ್ (ಪಿಟಿಐ): ಚೀನಾದಲ್ಲಿ ಭಾರತದ ಸಾಂಸ್ಕೃತಿಕ ಸಂಪ್ರದಾಯಗಳು, ವೇದಾಂತ ಮತ್ತು ಯೋಗವನ್ನು ಜನಪ್ರಿಯಗೊಳಿಸಲು ಯತ್ನಿಸುತ್ತಿರುವ ಚೀನಾದ ತತ್ವಜ್ಞಾನಿ ಮತ್ತು ಪ್ರೊಫೆಸರ್ ವಾಂಗ್ ಝಿಚೆಂಗ್ ಅವರ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ಮೆಚ್ಚುಗೆ ವ್ಯಕ್ತಪಡಿಸಿ, ಪತ್ರ ಬರೆದಿದ್ದಾರೆ.



ಝೆಜಿಯಾಂಗ್ ವಿಶ್ವವಿದ್ಯಾಲಯದ ಆವರಣದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಮೋದಿ ಅವರು ಬರೆದ ಪತ್ರವನ್ನು ಭಾರತದ ರಾಯಭಾರಿ ಪ್ರತೀಕ್ ಮಾಥೂರ್ ಝಿಚೆಂಗ್ ಅವರಿಗೆ ಹಸ್ತಾಂತರಿಸಿದರು.

ಈ ಪತ್ರದಲ್ಲಿ ಭಾರತೀಯ ತತ್ವಶಾಸ್ತ್ರೀಯ ಸಿದ್ಧಾಂತದ ಸಂಪ್ರದಾಯಗಳ ಬಗ್ಗೆ ಅವರ ಜ್ಞಾನ, ವಿಶೇಷವಾಗಿ ಯೋಗ ಮತ್ತು ವೇದಾಂತ ಕುರಿತ ಅವರ ಕಾರ್ಯವನ್ನು ಮೋದಿ ಶ್ಲಾಘಿಸಿದ್ದಾರೆ.

ಇಂಡಿಯನ್ ಸೂಪರ್ ಲೀಗ್: ಬೆಂಗಳೂರು ಎಫ್‌ಸಿ ರನ್ನರ್ಸ್ ಅಪ್

ಮೋಹನ್ ಬಾಗನ್ ಚಾಂಪಿಯನ್

ಕೋಲ್ಕತ್ತ (ಪಿಟಿಐ): ಹೆಚ್ಚುವರಿ ಅವಧಿಯಲ್ಲಿ ಜೆಮಿ ಮ್ಯಾಕ್ಲರೆನ್ ಗಳಿಸಿದ ಗೋಲಿನ ನೆರವಿನಿಂದ ಆತಿಥೇಯ ಮೋಹನ್ ಬಾಗನ್ ಸೂಪರ್ ಜೈಂಟ್ಸ್ ತಂಡವು ಫೈನಲ್ ಪಂದ್ಯದಲ್ಲಿ ಶನಿವಾರ 2–1ರಿಂದ ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡವನ್ನು ಮಣಿಸಿ ಇಂಡಿಯನ್ ಸೂಪರ್ ಲೀಗ್ ಕಿರೀಟವನ್ನು ಮುಡಿಗೇರಿಸಿಕೊಂಡಿತು.



ಇಂಡಿಯನ್ ಸೂಪರ್ ಲೀಗ್ ಕಿರೀಟ ಗೆದ್ದ ಮೋಹನ್ ಬಾಗನ್ ಸೂಪರ್ ಜೈಂಟ್ಸ್ ತಂಡದ ಆಟಗಾರರ ಸಂಭ್ರಮ ಪಿಟಿಐ ಚಿತ್ರ

2022–23ರಲ್ಲಿ ಚಾಂಪಿಯನ್ ಆಗಿದ್ದ ಮೋಹನ್ ಬಾಗನ್ ತಂಡವು ಸತತ ಮೂರನೇ ಬಾರಿ ಫೈನಲ್ ಪ್ರವೇಶಿಸಿತ್ತು. ಜೋಸ್ ಮೊಲಿನಾ ಮಾರ್ಗದರ್ಶನದ ತಂಡವು ಕಳೆದ ಆವೃತ್ತಿಯಲ್ಲಿ ರನ್ನರ್ಸ್ ಅಪ್ ಆಗಿತ್ತು. ಈ ಬಾರಿ ಲೀಗ್ ಹಂತದ ಪಂದ್ಯಗಳ ನಂತರ ಅಗ್ರಸ್ಥಾನದೊಂದಿಗೆ ಸತತ ಎರಡನೇ ಬಾರಿ ‘ಐಎಸ್‌ಎಲ್ ಶೀಲ್ಡ್’ ಗೆದ್ದಿತ್ತು. ಈ ಮೂಲಕ ಐಎಸ್‌ಎಲ್ ಇತಿಹಾಸದಲ್ಲಿ ಮುಂಬೈ ಸಿಟಿ (2020-21) ಬಳಿಕ ಒಂದೇ ಋತುವಿನಲ್ಲಿ ಐಎಸ್‌ಎಲ್ ಕಪ್ ಮತ್ತು ಐಎಸ್‌ಎಲ್ ಶೀಲ್ಡ್ ಗೆದ್ದ ಎರಡನೇ ತಂಡ ಎನಿಸಿತು.

ಮತ್ತೊಂದೆಡೆ ಎರಡನೇ ಬಾರಿ ಚಾಂಪಿಯನ್ ಪಟ್ಟಕ್ಕೇರುವ ಕನಸು ಕಂಡಿದ್ದ ಸುನಿಲ್ ಚೆಟ್ರಿ ಬಳಗಕ್ಕೆ ನಿರಾಸೆಯಾಯಿತು. 2018–19ರ ಆವೃತ್ತಿಯಲ್ಲಿ ಬೆಂಗಳೂರು ತಂಡವು ಚಾಂಪಿಯನ್ ಆಗಿತ್ತು. ನಾಲ್ಕನೇ ಬಾರಿ ಫೈನಲ್ ಪ್ರವೇಶಿಸಿದ್ದ ಬಿಎಫ್‌ಸಿ ತಂಡವು ಮೂರನೇ ಬಾರಿ ರನ್ನರ್ಸ್ ಅಪ್ ಆಯಿತು.

ಕೋಲ್ಕತ್ತದ ವಿವೇಕಾನಂದ ಯುವ ಭಾರತಿ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಹಣಾಹಣಿಯಲ್ಲಿ ಮೊದಲಾರ್ಧ ಯಾವುದೇ ತಂಡಕ್ಕೆ ಗೋಲು ದಕ್ಕಲಿಲ್ಲ. ಆದರೆ, ಬಾಗನ್ ತಂಡದ ಅಲ್ಬರ್ಟೊ ರಾಡ್ರಿಗಸ್ 49ನೇ ನಿಮಿಷದಲ್ಲಿ ‘ಉಡುಗೊರೆ’ ಗೋಲು ನೀಡಿದ್ದರಿಂದ ಬಿಎಫ್‌ಸಿ ಮುನ್ನಡೆ ಪಡೆಯಿತು. ಆದರೆ, ಈ ಸಂಭ್ರಮ ಹೆಚ್ಚು ಹೊತ್ತು ಇರಲಿಲ್ಲ.

71ನೇ ನಿಮಿಷದಲ್ಲಿ ಬಾಗನ್ ತಂಡದ ಜೇಸನ್ ಕಮಿಂಗ್ಸ್ ಪೆನಾಲ್ಟಿ ಅವಕಾಶದಲ್ಲಿ ಚೆಂಡನ್ನು ಗುರಿ ಸೇರಿದರು. ಹೀಗಾಗಿ ತಂಡಗಳ ಸ್ಕೋರ್ 1–1ರಿಂದ ಸಮಬಲಗೊಂಡಿತು. ನಂತರದಲ್ಲಿ ಎರಡು ತಂಡಗಳೂ ಮೇಲುಗೈ ಸಾಧಿಸಲು ಸಾಕಷ್ಟು ಕಸರತ್ತು ನಡೆಸಿದವು. 96ನೇ ನಿಮಿಷದಲ್ಲಿ ಬೆಂಗಳೂರು ತಂಡದ ರಕ್ಷಣಾ ವ್ಯೂಹವನ್ನು ಭೇದಿಸಿದ ಜೇಮಿ ಮ್ಯಾಕ್ಲರೆನ್ ಅವರು ನಿರ್ಣಾಯಕ ಗೆಲುವಿನ ಗೋಲು ದಾಖಲಿಸಿದರು.

ಇಂಡಿಯನ್ ಸೂಪರ್ ಲೀಗ್‌ನ ವಿಜೇತರು

ವರ್ಷ	ಒಟ್ಟು ತಂಡ	ಚಾಂಪಿಯನ್	ರನ್ನರ್ಸ್ ಅಪ್
2014	8	ಎಟಿಕೆ ಫುಟ್‌ಬಾಲ್ ಕ್ಲಬ್	ಕೇರಳ ಬ್ಲಾಸ್ಟರ್ಸ್ ಎಫ್‌ಸಿ
2015	8	ಚೆನ್ನೈಯಿನ್ ಎಫ್‌ಸಿ	ಗೋವಾ ಎಫ್‌ಸಿ
2016	8	ಎಟಿಕೆ ಫುಟ್‌ಬಾಲ್ ಕ್ಲಬ್	ಕೇರಳ ಬ್ಲಾಸ್ಟರ್ಸ್ ಎಫ್‌ಸಿ
2017-18	10	ಚೆನ್ನೈಯಿನ್ ಎಫ್‌ಸಿ	ಬೆಂಗಳೂರು ಎಫ್‌ಸಿ
2018-19	10	ಬೆಂಗಳೂರು ಎಫ್‌ಸಿ	ಗೋವಾ ಎಫ್‌ಸಿ
2019-20	10	ಎಟಿಕೆ ಫುಟ್‌ಬಾಲ್ ಕ್ಲಬ್	ಚೆನ್ನೈಯಿನ್ ಎಫ್‌ಸಿ
2020-21	11	ಮುಂಬೈ ಸಿಟಿ ಎಫ್‌ಸಿ	ಮೋಹನ್ ಬಾಗನ್
2021-22	11	ಹೈದರಾಬಾದ್ ಎಫ್‌ಸಿ	ಕೇರಳ ಬ್ಲಾಸ್ಟರ್ಸ್ ಎಫ್‌ಸಿ
2022-23	11	ಮೋಹನ್ ಬಾಗನ್	ಬೆಂಗಳೂರು ಎಫ್‌ಸಿ
2023-24	12	ಮುಂಬೈ ಸಿಟಿ ಎಫ್‌ಸಿ	ಮೋಹನ್ ಬಾಗನ್
2024-25	13	ಮೋಹನ್ ಬಾಗನ್	ಬೆಂಗಳೂರು ಎಫ್‌ಸಿ

ಏಕದಿನ: ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಚಿಂತನೆ

2 ಹೊಸ ಚೆಂಡಿನ ಬಳಕೆಯಲ್ಲಿ ಬದಲಾವಣೆ?

ನವದೆಹಲಿ (ಪಿಟಿಐ): ಏಕದಿನ ಕ್ರಿಕೆಟ್ ಮಾದರಿಯು ಬ್ಯಾಟರ್‌ಗಳಿಗೆ ಅನುಕೂಲಕರವಾಗಿದೆ ಎಂಬ ದೀರ್ಘಕಾಲದ ಕಳವಳಕ್ಕೆ ಪರಿಹಾರ ಕಂಡುಕೊಳ್ಳಲು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಮುಂದಾಗಿದೆ. ಏಕದಿನ ಪಂದ್ಯದಲ್ಲಿ ಪ್ರಸ್ತುತ ಇರುವ ಎರಡು ಹೊಸ ಚೆಂಡುಗಳ ಬಳಕೆಯಲ್ಲಿ ಬದಲಾವಣೆ ತರುವ ಬಗ್ಗೆ ಚಿಂತನೆ ನಡೆಸುತ್ತಿದೆ ಎಂದು ವರದಿಯಾಗಿದೆ.

ಭಾರತ ತಂಡದ ಮಾಜಿ ನಾಯಕ ಸೌರವ್ ಗಂಗೂಲಿ ನೇತೃತ್ವದ ಐಸಿಸಿ ಕ್ರಿಕೆಟ್ ಸಮಿತಿಯು ಏಕದಿನ ಪಂದ್ಯದಲ್ಲಿ ಒಂದೇ ಚೆಂಡಿನ ಬಳಕೆಗೆ ಶಿಫಾರಸು ಮಾಡಿದೆ. ಏಕದಿನ ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಎರಡು ಹೊಸ ಚೆಂಡುಗಳ ಬಳಕೆ ದಶಕಕ್ಕೂ ಹೆಚ್ಚು ಸಮಯದಿಂದ ಚಾಲ್ತಿಯಲ್ಲಿದೆ.

ಈ ಶಿಫಾರಸನ್ನು ಐಸಿಸಿ ನಿರ್ದೇಶಕರ ಮಂಡಳಿ ಸ್ಥಿರೀಕರಿಸಬೇಕಾಗಿದೆ. ನಂತರವಷ್ಟೇ ಆಟದ ಪರಿಷ್ಕೃತ ನಿಯಮಗಳಲ್ಲಿ ಇದರ ಸೇರ್ಪಡೆಯಾಗಲಿದೆ. ಐಸಿಸಿ ಮಂಡಳಿಯು ಹರಾರೆಯಲ್ಲಿ (ಜಿಂಬಾಬ್ವೆ) ಈ ವಿಷಯದ ಮೇಲೆ ಭಾನುವಾರ ಚರ್ಚೆ ನಡೆಸಲಿದೆ.

ಪ್ರಸ್ತುತ ಏಕದಿನ ಪಂದ್ಯಗಳಲ್ಲಿ ಎರಡು ಎಂಡ್‌ಗಳಿಂದ ಬೌಲಿಂಗ್ ಮಾಡುವ ಬೌಲರ್‌ಗಳು ಪ್ರತ್ಯೇಕ ಹೊಸ ಚೆಂಡನ್ನು ಬಳಸುತ್ತಿದ್ದಾರೆ. ಚೆಂಡು ತನ್ನ ಹೊಸತನ (ಹಾರ್ಡ್‌ನೆಸ್) ಉಳಿಸಿ ಕೊಂಡು ಬ್ಯಾಟರ್‌ಗಳಿಗೆ ಸರಾಗವಾಗಿ ರನ್ ಗಳಿಸಲು ಅನುಕೂಲವಾಗುತ್ತದೆ. ಕ್ಷೇತ್ರರಕ್ಷಣೆ ಮಿತಿಯೂ ಇರುವುದರಿಂದ ಬ್ಯಾಟರ್‌ಗಳಿಗೆ ಚೆಂಡನ್ನು ಹೊಡೆದಟ್ಟಲು ಹೆಚ್ಚು ಅವಕಾಶವಾಗುತ್ತದೆ.

ವೇಗದ ಬೌಲರ್‌ಗಳಿಗೆ ರಿವರ್ಸ್ ಸ್ವಿಂಗ್ ಮಾಡಲೂ ಕಷ್ಟವಾಗುತ್ತದೆ. ರಿವರ್ಸ್ ಸ್ವಿಂಗ್ ಪಡೆಯಲು ಚೆಂಡು ಕಡೇಪಕ್ಷ 35 ಓವರುಗಳಾಷ್ಟದರೂ ಹಳೆಯದಾಗಿರಬೇಕಾಗುತ್ತದೆ. ಹೊಸ ಚೆಂಡಿನಲ್ಲಿ ಟರ್ನ್ ಪಡೆಯಲು ಸ್ಪಿನ್ನರ್‌ಗಳಿಗೆ ಕಷ್ಟವಾಗುತ್ತದೆ.

‘ಐಸಿಸಿ ಕ್ರಿಕೆಟ್ ಸಮಿತಿಯು ಮೂರು ನಿಯಮಗಳ ಬದಲಾವಣೆಗೆ ಶಿಫಾರಸು ಮಾಡಿದೆ. ಏಕದಿನ ಕ್ರಿಕೆಟ್‌ನಲ್ಲಿ ಒಂದೇ ಹೊಸ ಚೆಂಡು, ಟೆಸ್ಟ್ ಪಂದ್ಯಗಳಲ್ಲೂ ಓವರುಗಳ ವೇಗ ಪರಿಶೀಲನೆಗೆ ಕ್ಲಾಕ್ ಟೈಮರ್ ಬಳಕೆ, 19 ವರ್ಷದೊಳಗಿನವರ ಏಕದಿನ ವಿಶ್ವಕಪ್‌ಅನ್ನು ಟಿ20 ಮಾದರಿಗೆ ಬದಲಾಯಿಸುವುದು ಈ ಮೂರು ನಿಯಮಗಳಾಗಿವೆ’ ಎಂದು ಐಸಿಸಿ ಸದಸ್ಯರೊಬ್ಬರು ಪಿಟಿಐಗೆ ತಿಳಿಸಿದರು.

ಟೆಸ್ಟ್ ಪಂದ್ಯದಲ್ಲಿ ಓವರುಗಳ ಮಧ್ಯೆ ಬಿಡುವಿನ ಅವಧಿಯನ್ನು ಒಂದು ನಿಮಿಷಕ್ಕೆ ಸೀಮಿತಗೊಳಿಸಲು ಟೈಮರ್ ಬಳಕೆಗೆ ಶಿಫಾರಸು ಮಾಡಲಾಗಿದೆ. ಇದರಿಂದ ನಿಗದಿತ ಅವಧಿಯೊಳಗೆ 90 ಓವರುಗಳನ್ನು ಮುಗಿಸಲು ಸಾಧ್ಯವಾಗಲಿದೆ ಎನ್ನುವುದು ಇದರ ಹಿಂದಿನ ಉದ್ದೇಶ.

ಬಿಲಿಯರ್ಡ್ಸ್: ಪಂಕಜ್‌ಗೆ ಬೆಳ್ಳಿ

ನವದೆಹಲಿ (ಪಿಟಿಐ): ಭಾರತದ ಅನುಭವಿ ಆಟಗಾರ ಪಂಕಜ್ ಅಡ್ವಾಣಿ ಅವರು ಇಲ್ಲಿ ನಡೆದ ಡಬ್ಲ್ಯುಬಿಎಲ್ ವಿಶ್ವ ಮ್ಯಾಚ್‌ಪ್ಲೇ ಬಿಲಿಯರ್ಡ್ಸ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದರು.




ಶನಿವಾರ ನಡೆದ ರೋಚಕ ಫೈನಲ್‌ನಲ್ಲಿ ಇಂಗ್ಲೆಂಡ್‌ನ ಡೇವಿಡ್ ಕಾಸಿಯರ್ 8–7ರಿಂದ ಪಂಕಜ್ ಅವರನ್ನು ಮಣಿಸಿದರು. 51 ವರ್ಷ ವಯಸ್ಸಿನ ಡೇವಿಡ್ ಚಿನ್ನದ ಪದಕ ಗೆದ್ದರು.

ಆರಂಭದಲ್ಲಿ 2–0 ಮುನ್ನಡೆ ಪಡೆದಿದ್ದ 39 ವರ್ಷದ ವಯಸ್ಸಿನ ಪಂಕಜ್ ನಂತರದ ಫ್ರೇಮ್‌ನಲ್ಲಿ ಹಿನ್ನಡೆ ಅನುಭವಿಸಿದರು. ಒಂದು ಹಂತದಲ್ಲಿ 7–5 ಮುನ್ನಡೆಯೊಂದಿಗೆ ಪಂಕಜ್ ಗೆಲುವಿನ ಹೊಸ್ತಿಲಲ್ಲಿದ್ದರು.



ತಮ್ಮ ಮನೆಯಲ್ಲಿರುವ ಧ್ವನಿಮುದ್ರಿಕೆಗಳ ಸಂಗ್ರಹದೊಂದಿಗೆ ಜಯಲಕ್ಷ್ಮಿ, ಶ್ರೀನಿವಾಸ್ ರಾವ್



ದ್ರಾಕ್ಷಿ ಗೊಂಚಲು ಚಿತ್ರಗಳು: ಸಂಜೀವ ಅಕ್ಕಿ

ದ್ರಾಕ್ಷಿ ತೋಟದಾಗ್ ಏನೇನ್ ಕಂಡೆ...



ವಿಜಯಪುರ ಸಮೀಪದ ಹಂಚಿನಾಳ ತಾಂಡದ ತೋಟವೊಂದರಲ್ಲಿ ದ್ರಾಕ್ಷಿ ಕೊಯ್ಲಿನಲ್ಲಿ ನಿರತ ಮಹಿಳೆಯರು

ಬೇಸಿಗೆಯ ಬಿಸಿಲಿನ ತಾಪದಲ್ಲಿ ಬಾಯಾರಿಕೆ ನೀಗಿಸಿಕೊಳ್ಳಲು ದ್ರಾಕ್ಷಿಹಣ್ಣು ಹೇಳಿಮಾಡಿಸಿದಂತಿದೆ. ಈಗ ಎಲ್ಲೆಲ್ಲೂ ಕಣ್ಣಿಗೆ ಕಾಣಿಸುವ ದ್ರಾಕ್ಷಿಯನ್ನು ಹೇಗೆ ಬೆಳೆಯುತ್ತಾರೆ? ಅದಕ್ಕೆ ಹೇಗೆ ಅದ್ಭುತ ರುಚಿ, ಬಣ್ಣ ಬರುತ್ತದೆ? ಒಣದ್ರಾಕ್ಷಿ ಹೇಗೆ ಮಾಡುತ್ತಾರೆ? ಎನ್ನುವ ಕುತೂಹಲಕರ ಪ್ರಶ್ನೆಗಳಿಗೆ ಇಲ್ಲಿದೆ ಉತ್ತರ.

ಬಸವರಾಜ್ ಸಂಪಳ್ಳಿ

ಹಸಿರು ಹೊದ್ದ ಚಪ್ಪರದಂತಿರುವ ತೋಟ. ಆ ತೋಟದಲ್ಲಿ ನೆಲದತ್ತ ತಲೆಬಾಗಿ ತೂಗಾಡುತ್ತಿರುವ ಹಸಿರು, ಹಳದಿ ಬಣ್ಣದ ದ್ರಾಕ್ಷಿ ಹಣ್ಣುಗಳ ಗೊಂಚಲು. ಪ್ರಖರ ಬಿಸಿಲಿನಲ್ಲೂ ದ್ರಾಕ್ಷಿ ತೋಟದ ನಡುವಿನ ನಡಿಗೆ ಮನಸ್ಸಿಗೆ ಹಿತ ಎನಿಸಿತು. ಹಣ್ಣು ಬಾಯಲ್ಲಿ ನೀರೂರಿಸಿತು. ಗೊಂಚಲಿಗೆ ತಾನೇ ತಾನಾಗಿ ಕೈ ಹೋಯಿತು. ಒಂದೊಂದೇ ಹಣ್ಣಿನ ರುಚಿಯನ್ನು ಆಸ್ವಾದಿಸುತ್ತಾ ತೋಟದ ಒಳಗೆ ಸಾಗುತ್ತಿದ್ದಾಗ ಮಾಲೀಕ ಪದ್ದು ಚವ್ಹಾಣ (ಹಂಚಿನಾಳ ಎಲ್.ಟಿ) ಎದುರಾದರು. ಪರಿಚಯಕ್ಕೂ ಮುನ್ನವೇ ತಾಜಾ ದ್ರಾಕ್ಷಿ ಗೊಂಚಲನ್ನು ಕೈಗಿತ್ತರು. ಅದೋ ಸಿಹಿ ಜೇನು!

ಇಷ್ಟೊಂದು ರುಚಿಕರ ದ್ರಾಕ್ಷಿ ಬಳ್ಳಿಯನ್ನು ಹೊಲದಲ್ಲಿ ಹಬ್ಬಿಸುವುದು ಹೇಗೆ? ಒಣದ್ರಾಕ್ಷಿಗೆ ಜೇನಿನ ಸ್ವಾದ ನೀಡುವುದು ಹೇಗೆ? ಗೊಬ್ಬರ, ಔಷಧ, ಕೂಲಿ, ಖರ್ಚು, ಆದಾಯ, ಮಾರುಕಟ್ಟೆ, ಇತ್ಯಾದಿ ತಿಳಿಯುವ ಕುತೂಹಲಕರ ಪ್ರಶ್ನೆಗಳಿಗೆ ಪದ್ದು ಚವ್ಹಾಣ ಉತ್ತರವಾದರು.

ದ್ರಾಕ್ಷಿ ಬೆಳೆ ಬೆಳೆಯುವುದು ಎಂದರೆ ನಿಸರ್ಗದೊಂದಿಗೆ ಜೂಜಾಡಿದಂತೆ. ಹವಾಮಾನ ಸ್ವಲ್ಪ ವ್ಯತ್ಯಾಸವಾದರೂ ಇಡೀ ವರ್ಷದ ಶ್ರಮ ವ್ಯರ್ಥ. ಹವಾಮಾನ ಸರಿಯಾಗಿದ್ದರೆ ಬೆಳೆಗಾರರ ನಸೀಬು ಬದಲಾಗುತ್ತದೆ. ದ್ರಾಕ್ಷಿ ಅತ್ಯಂತ ಸೂಕ್ಷ್ಮ ಬೆಳೆ. ಹೂವು, ಕಾಯಿ, ಹಣ್ಣು ಆಗುವಾಗ ಮೋಡವಾದರೂ ಸಮಸ್ಯೆ, ಮಳೆ ಬಂದರೂ ಸಮಸ್ಯೆ, ಇಬ್ಬನಿ ಬಿದ್ದರೂ ಸಮಸ್ಯೆ, ಆಲಿಕಲ್ಲು ಬಿದ್ದರಂತೂ ಜೀವವೇ ಹೋದಂತೆ.

ವರ್ಷಕ್ಕೊಂದೇ ಬೆಳೆಯಾದರೂ ನಿರಂತರವಾಗಿ ಕೃಷಿ ಮಾಡುತ್ತಲೇ ಇರಬೇಕು. ಮೊದಲು ಬಳ್ಳಿ ತಯಾರಾಗಬೇಕು. ಬಳಿಕ ಬಳ್ಳಿ ಕಟಾವು ಮಾಡಬೇಕು. ಅದಕ್ಕೆ ಚಾಟ್ನಿ ಮಾಡಿದ ತಕ್ಷಣ ಯಾವುದೇ ರೋಗ ಬರದಂತೆ ಔಷಧೋಪಚಾರ ಮಾಡುತ್ತಲೇ ಇರಬೇಕು.

‘ಹೂವು ಕಟ್ಟಲು ಔಷಧ, ಮಳೆ ಬಂದರೆ ಔಷಧ, ಇಬ್ಬನಿ ಬಿದ್ದರೆ ಔಷಧ, ಮೋಡ ಕವಿದರೆ ಔಷಧ, ಹಣ್ಣು ಒಣಗಿಸಲು ಔಷಧ ಸಿಂಪಡಿಸಲೇಬೇಕು. ಔಷಧವೇ ದ್ರಾಕ್ಷಿಗೆ ಪರಮೌಷಧ. ದ್ರಾಕ್ಷಿ ಗಿಡಗಳು ಒಂದು ರೀತಿ ಅಸ್ತಮಾ ರೋಗಿ ಇದ್ದಂತೆ’ ಎನ್ನುತ್ತಾರೆ ಪದ್ದು ಚವ್ಹಾಣ.

ಏಪ್ರಿಲ್‌ನಲ್ಲಿ ಗಿಡಗಳನ್ನು ಕತ್ತರಿಸಬೇಕು. ತಿಪ್ಪೆಗೊಬ್ಬರ ಹಾಕಿ ಕೃಷಿ ಮಾಡಬೇಕು. ಜೊತೆಗೆ ರಸಗೊಬ್ಬರ, ನೀರು ಪೂರೈಕೆ ಹಿತಮಿತವಾಗಿ ಮಾಡುತ್ತಿರಬೇಕು. ಅಕ್ಟೋಬರ್‌ಗೆ ಕಾಯಿ ಚಾಟ್ನಿ ಮಾಡಬೇಕು. ಹಣ್ಣುಗಳಿಗೆ ಆಕರ್ಷಕ ಬಣ್ಣ ಬರಬೇಕು ಎಂದರೆ ನಿಯಮಿತವಾಗಿ ನೀರು ನೀಡಬೇಕು.

ಇಡೀ ತೋಟದಲ್ಲಿ ಬೆಳೆದಿರುವ ದ್ರಾಕ್ಷಿ ಒಮ್ಮೆಗೆ ಹಣ್ಣಾಗಿರುವುದು ಹೇಗೆ? ಒಂದೇ ಬಣ್ಣ, ಒಂದೇ ಗಾತ್ರ, ಒಂದೇ ರುಚಿ ಇರುವುದು ಹೇಗೆ? ಎಂಬ ಕುತೂಹಲಕ್ಕೂ ಪದ್ದು ಕರಾರುವಕ್ಕಾದ ಉತ್ತರ ನೀಡಿದರು. ಒಂದು ಬಳ್ಳಿಯಲ್ಲಿ ಕನಿಷ್ಠ 50 ರಿಂದ ಗರಿಷ್ಠ 60 ಗೊನೆ ಇರುವಂತೆ ಆರಂಭದಿಂದಲೇ ನೋಡಿಕೊಳ್ಳಬೇಕು. ಒಂದು ಗೊನೆಯಲ್ಲಿ ಕನಿಷ್ಠ 150 ಹಣ್ಣು ಬರುವಂತೆ ನಿರ್ವಹಣೆ ಮಾಡಬೇಕು. ಕಡಿಮೆ ಗೊನೆಗಳನ್ನು ಇಟ್ಟರೆ ಹಳದಿ ಹಣ್ಣು ಬರುತ್ತದೆ. ಹಸಿರು ಹಣ್ಣು ಮಾಡಬೇಕು ಎಂದರೆ ಗಿಡದಲ್ಲಿ ಎಲೆ ಹೆಚ್ಚಿರಬೇಕು. ಹಣ್ಣಿನ ಗೊನೆ ಮೇಲೆ ಬಿಸಿಲು ಬೀಳದಂತೆ ನೋಡಿಕೊಳ್ಳಬೇಕು. ಹಾಗಿದ್ದಾಗ ಮಾತ್ರ ಇದು ಸಾಧ್ಯ. ಇಂತಹ ಹಣ್ಣುಗಳಿಗೆ ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆ, ಬೆಲೆ ಹೆಚ್ಚು.

‘ಮೂವತ್ತು ವರ್ಷಗಳಿಂದ ದ್ರಾಕ್ಷಿ ಬೆಳೆಯುತ್ತಿದ್ದೇನೆ. ಇದರಲ್ಲೇ ಒಳ್ಳೆಯ ಬದುಕು ಕಂಡುಕೊಂಡಿದ್ದೇನೆ. ಎಕರೆಗೆ ಕನಿಷ್ಠ ₹2 ರಿಂದ ₹3 ಲಕ್ಷ ಖರ್ಚು ಬರುತ್ತದೆ. ಉತ್ತಮ ಬೆಳೆ, ಬೆಲೆ ಸಿಕ್ಕರೆ ಕನಿಷ್ಠ ₹6 ರಿಂದ ₹7 ಲಕ್ಷ ಆದಾಯ ಗ್ಯಾರಂಟಿ. ಹಾಗಂತ ಈ ಮಾತು ಎಲ್ಲರಿಗೂ ಅನ್ವಯವಾಗದು’ ಎಂದರು ಪದ್ದು ಚವ್ಹಾಣ.

ಬಂಗಾರದ ಬಣ್ಣದ ಒಣದ್ರಾಕ್ಷಿ

ವಿಜಯಪುರ ಸಮೀಪವೇ ಅಲಿಯಾಬಾದ್ ಎಂಬ ಪುಟ್ಟ ಊರಿದೆ. ಈ ಭಾಗದಲ್ಲಿ ಬಹುತೇಕ ಬೆಳೆಗಾರರು ಹೊಲದಲ್ಲಿ ತಾವೇ ಹಸಿರು ಶೆಡ್ ನಿರ್ಮಿಸಿ, ಒಣದ್ರಾಕ್ಷಿ ತಯಾರು ಮಾಡುವುದು ಸಾಂಪ್ರದಾಯಿಕ ಪದ್ಧತಿಯಾಗಿದೆ. ಆ ಊರಿನ ಹೊಲದಲ್ಲಿ ಎಲ್ಲಿ ನೋಡಿದರಲ್ಲಿ ಒಣದ್ರಾಕ್ಷಿ ತಯಾರಿಸುವ ಹಸಿರು ಶೆಡ್‌ಗಳು ಕಾಣಿಸುತ್ತವೆ.

ಅಲಿಯಾಬಾದ್‌ನ ನಾಥೂ ಜಾಧವ್ ಅವರ ದ್ರಾಕ್ಷಿ ಶೆಡ್‌ಗೆ ಹೋದಾಗ ಒಣದ್ರಾಕ್ಷಿಯನ್ನು ತಯಾರಿಸಿ, ಶೇಖರಿಸಿಡುವ ವಿಧಾನವು ರೈತರಿಗೆ ಹೇಗೆ ತಲೆತಲಾಂತರದಿಂದ ಕರಗತವಾಗಿದೆ ಎಂಬುದು ತಿಳಿಯಿತು. ರೈತರು ತಾವೇ ದ್ರಾಕ್ಷಿ ಒಣಗಿಸಿ, ಮಾರಾಟ ಮಾಡಿದರೆ ಲಾಭ ಹೆಚ್ಚು ಸಿಗುತ್ತದೆ ಎನ್ನುತ್ತಾರೆ ನಾಥೂ ಜಾಧವ್.

ಎಲ್ಲ ಹಣ್ಣುಗಳಿಂದ ಒಣದ್ರಾಕ್ಷಿ ಮಾಡಲು ಸಾಧ್ಯವಿಲ್ಲ. ಬೀಜವಿಲ್ಲದ, ಹಳದಿ ಹಣ್ಣುಗಳಿರುವ, ಹೆಚ್ಚು ಸಕ್ಕರೆ ಅಂಶ ಇರುವ ಥಾಮ್‌ಸನ್ ಸೀಡ್‌ಲೆಸ್, ಅರ್ಕಾವತಿ ಹಣ್ಣುಗಳಿಂದ ಮಾತ್ರ ಗುಣಮಟ್ಟದ ಮತ್ತು ಆಕರ್ಷಕವಾದ ಒಣದ್ರಾಕ್ಷಿ ತಯಾರಿಸಬಹುದು.

ದ್ರಾಕ್ಷಿ ಬೆಳೆಯಲು ಬಿಸಿಲಿನ ವಾತಾವರಣ ಅತ್ಯಗತ್ಯ. ಆದರೆ, ಹಣ್ಣನ್ನು ಮಾತ್ರ ನೆರಳಲ್ಲೇ ಒಣಗಿಸಬೇಕು. ಇದಕ್ಕಾಗಿ ಹಸಿರು ಶೆಡ್‌ಗಳು ಅಗತ್ಯ. ಹಸಿರು ಶೆಡ್‌ಗಳಲ್ಲಿ ಹಿತಕರವಾದ ಬಿಸಿಲಿನ ತಾಪಕ್ಕೆ ಹಳದಿ ಬಣ್ಣ ಬರುತ್ತದೆ. ಬಿಸಿಲಿನಲ್ಲಿ ಒಣಗಿಸಿದರೆ ಕೆಂಪು ಬರುತ್ತವೆ. ಔಷಧ ಸಿಂಪಡಿಸಿದರೆ ಸಿಹಿ ಹೆಚ್ಚಾಗುತ್ತದೆ. ಹೆಚ್ಚಿನ ಉಷ್ಣತೆ ಮತ್ತು ಕಡಿಮೆ ತೇವಾಂಶದಲ್ಲಿ ದ್ರಾಕ್ಷಿಯನ್ನು ಒಣಗಿಸುವುದರಿಂದ ಉತ್ತಮ ಗುಣಮಟ್ಟವನ್ನು ಪಡೆಯಲು ಸಾಧ್ಯ ಎಂಬುದು ಜಾಧವ್ ಅವರ ಅನುಭವದ ಮಾತು.

ರೈತರು ತಾವು ಗಿಡದಿಂದ ಕಿತ್ತು ತಂದ ದ್ರಾಕ್ಷಿ ಗೊಂಚಲನ್ನು ಡಿಪ್ಪಿಂಗ್ ಆಯಿಲ್‌ನಲ್ಲಿ ಅದ್ದಿ ತೆಗೆದು, ಬಳಿಕ ನೆರಳಿನಲ್ಲಿ ನೈಲಾನ್ ಜಾಳಿಗೆಯ ಮೇಲೆ ಸಮವಾಗಿ ಹರಡುತ್ತಾರೆ. ಈ ರೀತಿಯಾಗಿ ಹರಡಿದ ದ್ರಾಕ್ಷಿ ಗೊಂಚಲಿಗೆ ಪೊಟ್ಯಾಷಿಯಂ ಕಾರ್ಬೊನೇಟ್ ಮತ್ತು ಇಥೈಲ್ ಓಲಿಯೇಟ್ ಅನ್ನು ನೀರಿನಲ್ಲಿ ಕರಗಿಸಿ, ಸಿಂಪಡಿಸುತ್ತಾರೆ. ನೈಲಾನ್ ಜಾಳಿಗೆ ಮೇಲೆ ಹರಡಿದ ಗೊಂಚಲುಗಳನ್ನು 10-12 ದಿನ ಒಣಗಿಸುತ್ತಾರೆ. ಈ ಸಂದರ್ಭದಲ್ಲಿ ತೇವಾಂಶ ಕಡಿಮೆ ಮಾಡಿ, ಹಣ್ಣುಗಳು ಒಡೆಯದಂತೆ ಮಾಡಲು ಹಾಗೂ ಹಣ್ಣುಗಳಿಗೆ ಉತ್ತಮ ಬಣ್ಣ ಬರಲು ಗಂಧಕದ ಹೊಗೆ ಕೊಡುತ್ತಾರೆ. ಒಣಗಿಸಿದ ಬಳಿಕ ಜಾಳಿಗೆಯ ಮೇಲೆ ದ್ರಾಕ್ಷಿಯನ್ನು ತಿಕ್ಕಿ, ಸ್ವಚ್ಛಗೊಳಿಸುತ್ತಾರೆ. ಒಣಗಿಸುವ ಪ್ರಕ್ರಿಯೆ ಮುಗಿದ ಬಳಿಕ ಒಣದ್ರಾಕ್ಷಿಯನ್ನು ಯಂತ್ರಕ್ಕೆ ಹಾಕಿ ಗ್ರೇಡಿಂಗ್ ಮಾಡಿ, ಕೋಲ್ಡ್ ಸ್ಟೋರೇಜ್‌ನಲ್ಲೇ ಸಂಗ್ರಹಿಸಿ ಇಡುತ್ತಾರೆ.

ಒಣದ್ರಾಕ್ಷಿಯ ಇಳುವರಿ ತಾಜಾ ಹಣ್ಣಿನ ಗುಣಮಟ್ಟವನ್ನು ಅವಲಂಬಿಸಿರುತ್ತದೆ. ಉತ್ತಮ ಗುಣಮಟ್ಟದ ಹಾಗೂ ಹೆಚ್ಚು ಸಕ್ಕರೆ ಪ್ರಮಾಣ ಹೊಂದಿರುವ 3.5 ರಿಂದ 4 ಕೆ.ಜಿ. ತಾಜಾ ಹಣ್ಣಿನಿಂದ ಸುಮಾರು 1 ಕೆ.ಜಿ. ಒಣದ್ರಾಕ್ಷಿ ಸಿಗುತ್ತದೆ. ವಿಜಯಪುರ ಸೇರಿದಂತೆ ನೆರೆಯ ಮಹಾರಾಷ್ಟ್ರದ ಸೊಲ್ಲಾಪುರ, ಸಾಂಗ್ಲಿ, ಪಂಢರಪುರ, ತಾಸಾಗಾಂವ್ ದ್ರಾಕ್ಷಿ ಮಾರುಕಟ್ಟೆಗೆ ಪ್ರಸಿದ್ಧ. ಯಾವ ಮಾರುಕಟ್ಟೆಯಲ್ಲಿ ಹೆಚ್ಚಿನ ದರ ಸಿಗುವುದೋ ಅಲ್ಲಿಗೆ ರೈತರು ದ್ರಾಕ್ಷಿ ಕೊಂಡೊಯ್ದು ಮಾರಾಟ ಮಾಡುತ್ತಾರೆ.

11ನೇ ಪುಟಕ್ಕೆ...

ದ್ರಾಕ್ಷಿಗಿದೆ ಶತಮಾನದ ಇತಿಹಾಸ

ರಾಜ್ಯದಲ್ಲಿ ಶತಮಾನದ ಈಚೆಗೆ ದ್ರಾಕ್ಷಿ ಕೃಷಿ ಪ್ರಾರಂಭವಾಗಿದೆ ಎಂಬುದು ಸಯ್ಯದ್ ಸಿರಾಜುಲ್ ಹಸನ್ ಬರೆದಿಟ್ಟ ಟಿಪ್ಪಣಿಯಿಂದ ತಿಳಿದುಬರುತ್ತದೆ ಎನ್ನುತ್ತಾರೆ ವಿಜಯಪುರ ಕೃಷಿ ವಿಜ್ಞಾನ ಕೇಂದ್ರ ಮುಖ್ಯಸ್ಥ ಎಸ್.ಎಂ.ವಸ್ತ್ರದ. 1904ರಲ್ಲಿ ದೌಲತಾಬಾದ್‌ನಿಂದ ದ್ರಾಕ್ಷಿ ಕಡ್ಡಿಗಳನ್ನು ನಾಸಿಕ್, ಪುಣೆ ಹಾಗೂ ಬೆಂಗಳೂರಿಗೆ ತೆಗೆದುಕೊಂಡು ಹೋಗಿ ತೋಟ ಬೆಳೆಸಲಾಗಿದೆ ಎಂಬುದು ಹಸನ್ ಅವರ ಲೇಖನದಲ್ಲಿ ಪ್ರಸ್ತಾವವಾಗಿದೆ.

“₹ 40 ಕೋಟಿ ವೆಚ್ಚದಲ್ಲಿ ತೊರವಿಯಲ್ಲಿ ಸದ್ಯ ಹತ್ತು ಸಾವಿರ ಮೆಟ್ರಿಕ್ ಟನ್ ಸಾಮರ್ಥ್ಯದ ಕೋಲ್ಡ್ ಸ್ಟೋರೇಜ್ ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ”

ರಾಹುಲ್ ಭಾವಿದೊಡ್ಡಿ
ಉಪ ನಿರ್ದೇಶಕ, ವಿಜಯಪುರ ತೋಟಗಾರಿಕೆ ಇಲಾಖೆ

“ಆನ್‌ಲೈನ್ ಮಾರುಕಟ್ಟೆಗೆ ಪೂರಕವಾಗಿ, ಒಣದ್ರಾಕ್ಷಿಯ ಗುಣಮಟ್ಟಕ್ಕೆ ಅನುಗುಣವಾಗಿ ಗ್ರೇಡಿಂಗ್ ಮತ್ತು ಸರ್ಟಿಫೈ ಮಾಡುವ ಏಜೆನ್ಸಿ ಅಗತ್ಯವಿದೆ. ಈ ವ್ಯವಸ್ಥೆಯಾದರೆ ಒಣದ್ರಾಕ್ಷಿ ರಫ್ತಿಗೆ ಉತ್ತೇಜನ ಲಭಿಸಲಿದೆ”

ಮುಂಬಾರೆಡ್ಡಿ
ದ್ರಾಕ್ಷಿ ಬೆಳಗಾರ, ವಿಜಯಪುರ

ಪಾಳುಬಿದ್ದ ವೈನ್ ಪಾರ್ಕ್ ಜಾಗ

ದ್ರಾಕ್ಷಿ ಬೆಳೆಗಾರರಿಗೆ ಉತ್ತೇಜನ ನೀಡಲು ಹಾಗೂ ದ್ರಾಕ್ಷಿ ಮೌಲ್ಯವರ್ಧನೆ ಸಲುವಾಗಿ ವಿಜಯಪುರ ಸಮೀಪದ ತೊರವಿಯಲ್ಲಿ ವೈನ್ ಪಾರ್ಕ್ ನಿರ್ಮಾಣಕ್ಕಾಗಿ ದಶಕದ ಹಿಂದೆಯೇ ರಾಜ್ಯ ಸರ್ಕಾರ 141 ಎಕರೆ ಕಾಯ್ದಿರಿಸಿದ್ದು, ಅದು ಪಾಳು ಬಿದ್ದಿದೆ.

‘ದ್ರಾಕ್ಷಿ ವೈನ್ ಪಾರ್ಕ್, ಒಣದ್ರಾಕ್ಷಿ ಸಂಸ್ಕರಣ ಘಟಕ, ಒಣದ್ರಾಕ್ಷಿ ಸಂಗ್ರಹಕ್ಕೆ ಕೋಲ್ಡ್ ಸ್ಟೋರೇಜ್ ಆರಂಭಿಸಲು ರಾಜ್ಯ ಸರ್ಕಾರ ಆದ್ಯತೆ ನೀಡಬೇಕು. ಇದಕ್ಕಾಗಿ ಕನಿಷ್ಠ ₹100 ಕೋಟಿ ಅನುದಾನ ನೀಡಬೇಕು’ ಎನ್ನುತ್ತಾರೆ ಕರ್ನಾಟಕ ದ್ರಾಕ್ಷಿ ಬೆಳೆಗಾರರ ಸಂಘದ ಅಧ್ಯಕ್ಷ ಅಭಯಕುಮಾರ್ ನಾಂದ್ರೇಕರ್.

‘ವೈನ್ ಪಾರ್ಕ್ ಅಭಿವೃದ್ಧಿಯಿಂದ ಪ್ರತಿ ವರ್ಷ ದ್ರಾಕ್ಷಿ ಮೇಳ, ವೈನ್ ಮೇಳ, ವೈನ್ ಟೇಸ್ಟಿಂಗ್, ವೈನ್ ಜೂಸ್ ಸೇರಿ ಇತರೆ ಚಟುವಟಿಕೆಗಳ ಮೂಲಕ ಜಿಲ್ಲೆಯಲ್ಲಿ ಪ್ರವಾಸೋದ್ಯಮಕ್ಕೂ ಉತ್ತೇಜನ ಲಭಿಸಲಿದೆ. ಇದರಿಂದ ದ್ರಾಕ್ಷಿ ಬೆಳೆಗಾರರಿಗೂ ಅನುಕೂಲವಾಗಲಿದೆ’ ಎನ್ನುತ್ತಾರೆ ವಿಜಯಪುರ ದ್ರಾಕ್ಷಿ ಬೆಳೆಗಾರರ ಸಂಘ ಅಧ್ಯಕ್ಷ ಕೆ.ಎಸ್.ಮುಂಬಾರೆಡ್ಡಿ.

ಹವ್ಯಾಸ, ಅಭಿರುಚಿ ವ್ಯಕ್ತಿತ್ವಕ್ಕೆ ಮೆರಗು ಕೊಡುತ್ತದೆ. ಬಾಲ್ಯದಲ್ಲಿ ಅಂಟಿಕೊಂಡ ಹವ್ಯಾಸ ಬದುಕಿನುದ್ದಕ್ಕೂ ಜೊತೆಯಾಗುವುದು ಖುಷಿಯ ಸಂಗತಿಯೇ. ಜಯಲಕ್ಷ್ಮಿ ಅವರ ಸಂಗೀತ ಮೋಹ ಹಲವು ಅಪರೂಪದ ಗ್ರಾಮಫೋನ್ ಪ್ಲೇಟ್‌ಗಳು, ಸಿ.ಡಿ.ಗಳು, ಕ್ಯಾಸೆಟ್‌ಗಳು, ಸೌಂಡ್‌ಬಾಕ್ಸ್‌ಗಳನ್ನು ತನ್ನ ಸಂಗ್ರಹದಲ್ಲಿ ಸೇರಿಕೊಳ್ಳುವಂತೆ ಮಾಡಿದೆ.

ನಾದಮಯ ಮನೆ, ಬೀದಿಯೆಲ್ಲ...

ಸ್ವರೂಪ್ ಕೊಟ್ಟೂರು

ಮೂಡಣದಲಿ ನೇಸರ ಉದಯಿಸುವ ಕಾತುರದಲ್ಲಿದ್ದ. ಹೊಸಪೇಟೆಯ ಆಕಾಶವಾಣಿ ಕೇಂದ್ರದ ಸಮೀಪದ ಈಶ್ವರ ನಗರದಲ್ಲಿ ವಾಕಿಂಗ್ ಹೊರಟಿದ್ದೆ. ಈ ಬೀದಿಯಲ್ಲಿ ಬರೀ ಮರಗಿಡಗಳೇ. ಆ ನೀರವತೆ, ಶುದ್ಧಗಾಳಿ, ತಂಗಾಳಿ, ಹಕ್ಕಿಗಳ ಇಂಚರವನ್ನು ಅನುಭವಿಸುತ್ತಾ ಹೆಜ್ಜೆ ಹಾಕುತ್ತಿದ್ದೆ. ಇದ್ದಕ್ಕಿದ್ದಂತೆ ಮನೆಯೊಂದರಿಂದ ಕೊಳಲಿನ ನಿನಾದ ತೇಲಿ ಬಂತು. ಅದಕ್ಕೆ ಮೋಹಿತನಾಗಿ, ವಾದನ ಕೇಳಿ ಬರುತ್ತಿವತ್ತ ಅಪ್ರಯತ್ನಪೂರ್ವಕವಾಗಿ ಹೆಜ್ಜೆ ಹಾಕಿದೆ. ನಾಲ್ಕು ಹೆಜ್ಜೆ ಹೋಗಿ ಆ ಮನೆಯ ಮುಂದೆ ನಿಲ್ಲುವಷ್ಟರಲ್ಲಿ ವಾದನ ನನ್ನನ್ನೂ ಪೂರ್ಣವಾಗಿ ಆವರಿಸಿ ಮೈಮರೆಸಿತು. ಕೆಲ ಹೊತ್ತಿನ ನಂತರ ಕುತೂಹಲ ಹೆಚ್ಚಾಗಿ ದೃಷ್ಟಿ ಕಿರಿದಾಗಿಸಿ ಅರೆ ತೆರೆದಿದ್ದ ಬಾಗಿಲಿನಿಂದ ಒಳ ನೋಡಿದರೆ ಎದುರಿನ ಕುರ್ಚಿಗಳಲ್ಲಿ ಕುಳಿತಿದ್ದ ದಂಪತಿ ತಲೆದೂಗುತ್ತಾ ವಾದನ ಕೇಳುವುದರಲ್ಲೇ ತಲ್ಲೀನರಾಗಿದ್ದರು. ಮನಸ್ಸು ತಡೆಯಲಿಲ್ಲ. ಕದ ತಟ್ಟಿದೆ. ಪ್ರತ್ಯುತ್ತರ ಬರಲಿಲ್ಲ. ಕೊನೆಗೆ ಧೈರ್ಯ ಮಾಡಿ ಕದ ತಳ್ಳಿ ಬಿಟ್ಟೆ! ಆಗ ಮನೆ ಒಡತಿ ಎದ್ದು ಬಂದರು. ‘ಅಮ್ಮ ಈ ಕೊಳಲು ನುಡಿಸುತ್ತಿರುವವರು ಯಾರು? ಅವರನ್ನು ಕಾಣಬಹುದಾ?’ ಎಂದೆ.

‘ಅದು ಪಂಡಿತ್ ಪನ್ನಾಲಾಲ್ ಘೋಷ್‌ರವರದ್ದು. ಗ್ರಾಮಫೋನ್‌ನಲ್ಲಿ ಪ್ಲೇ ಮಾಡುತ್ತಿರೋದು’ ಅಂದರು ಜಯಲಕ್ಷ್ಮಿ.



ಇವರ ಮನೆಯಲ್ಲಿರುವ ಕ್ಯಾಸೆಟ್‌ಗಳ ಸಂಗ್ರಹಕ್ಕೆ ಲೆಕ್ಕವಿಲ್ಲ!

ಜಯಲಕ್ಷ್ಮಿ, ಶ್ರೀನಿವಾಸ್ ರಾವ್ ಅವರ ಮನೆಯಷ್ಟೇ ಸಂಗೀತಮಯ ಆಗಿರುವುದಿಲ್ಲ. ಇವರು ಹಾಕುವ ಪ್ರತಿ ಹಾಡುಗಳು, ಸಂಗೀತ ಇಡೀ ಬೀದಿಯನ್ನೆಲ್ಲ ತುಂಬುತ್ತವೆ. ಸಂಗೀತ ಆಲಿಸುವುದರೊಂದಿಗೆ ಈ ಬೀದಿಯ ದಿನದ ಆರಂಭವಾಗುತ್ತದೆ, ಹಾಗೆಯೇ ಮುಕ್ತಾಯ ಕೂಡ. ಅಂದಹಾಗೆ ಇವರು ಪ್ಲೇ ಮಾಡುವ ಹಾಡುಗಳು, ಸಂಗೀತ ಇಂದು ನಿನ್ನೆಯವಲ್ಲ. ಅವು ಕೇಳುಗರನ್ನು ಆರೇಳು ದಶಕಗಳ ಹಿಂದಕ್ಕೆ ಕರೆದೊಯ್ದು ಮಂತ್ರಮುಗ್ಧಗೊಳಿಸುವಂಥವು. ಹಾಗಾಗಿ ಇಲ್ಲಿಯವರೆಲ್ಲ ಈ ಸಂಗೀತವನ್ನು ಒಂದಿಷ್ಟೂ ಅಲಕ್ಷಿಸದೆ ಸದಾ ಕಾದಿದ್ದು, ಅಪೇಕ್ಷೆಪಟ್ಟು ಕೇಳುತ್ತಾರೆ. ಅಚಾನಕ್ ಆಗಿ ಕೆಲವೊಮ್ಮೆ ಇವರು ಸೌಂಡ್ ಕಮ್ಮಿ ಇಟ್ಟರೆ ದಾರಿಹೋಕರು, ಮನೆಯ ಆಜುಬಾಜಿನವರು ‘ತಮಗೂ ಒಂಚೂರು ಕೇಳಿಸುವಂತೆ ಸೌಂಡ್ ಇಡಿ’ ಎಂದು ಪ್ರೀತಿಪೂರ್ವಕವಾಗಿ ಆಗ್ರಹಿಸುತ್ತಾರೆ. ಹೀಗಾಗಿ ಇವರಿರುವ ಮನೆ, ಬೀದಿ ಸಂಗೀತಮಯವಾಗಿದೆ. ಸ್ಥಳೀಯರಲ್ಲಿ ‘ಜಯಲಕ್ಷ್ಮಿ ಶ್ರೀನಿವಾಸ್ ರಾವ್ ದಂಪತಿ ಮನೆ ಎಲ್ಲಿ?’ ಎಂದು ಕೇಳಿದರೆ ತಕ್ಷಣಕ್ಕೆ ಗೊತ್ತಾಗುವುದಿಲ್ಲ. ಅದೇ ‘ಒಳ್ಳೊಳ್ಳೆ ಹಳೆಯ ಹಾಡುಗಳು, ಕ್ಲಾಸಿಕಲ್ ಮ್ಯೂಸಿಕ್ ಸದಾ ಮನೆಯಲ್ಲಿ ಹಾಕುತ್ತಾರಲ್ಲ, ಅವರ ಮನೆ..?’ ಅಂದರೆ ಥಟ್ ಅಂಥ ತೋರಿಸುತ್ತಾರೆ.


ಸಂಬಳವೆಲ್ಲ ಸಂಗೀತಕ್ಕೇ..

ಜಯಲಕ್ಷ್ಮಿ ಅವರಿಗೆ ಚಿಕ್ಕಂದಿನಿಂದಲೂ ಸಂಗೀತದ ಮೇಲೆ ವಿಪರೀತ ಮೋಹ. ಇಂಥ ಅಭಿರುಚಿ ತಾಯಿಯಿಂದ ಬಂದ ಬಳುವಳಿ. ಬಡತನದ ಕಾರಣಕ್ಕೆ ಬಾಲ್ಯದಲ್ಲಿ ಕೇವಲ ಸಿನಿಮಾ ನೋಡುತ್ತಾ, ರೇಡಿಯೊದಲ್ಲಿ ಹಾಡು, ಸಂಗೀತ ಕೇಳುತ್ತಾ ತಮ್ಮ ಆಸೆ, ಆಸಕ್ತಿಯನ್ನು ತಣಿಸಿಕೊಳ್ಳುತ್ತಿದ್ದರು. ಮುಂದೆ ಬ್ಯಾಂಕ್ ಉದ್ಯೋಗಿ ಆದ ನಂತರ ಬರುತ್ತಿದ್ದ ಸಂಬಳ ಭತ್ಯೆ ಬೋನಸ್‌ಗಳಲ್ಲಿ ಗರಿಷ್ಠ ಮೊತ್ತವನ್ನು ಇವುಗಳ ಖರೀದಿಗೆ ವ್ಯಯಿಸಿದರು.

9ನೇ ಪುಟಕ್ಕೆ...

ಕಟೀಲಮ್ಮನ ಸನ್ನಿಧಿಯಲ್ಲಿ ಅಗ್ನಿಕೇಳಿ

ಕಟೀಲು ದುರ್ಗಾಪರಮೇಶ್ವರಿ ದೇವಸ್ಥಾನದ ವಾರ್ಷಿಕ ಜಾತ್ರೆಯು ಏಪ್ರಿಲ್ 13ರಿಂದ 20ರವರೆಗೆ ನಡೆಯಲಿದ್ದು, ಏ.20ರ ನಸುಕಿನಲ್ಲಿ ತೂಟೆದಾರ ಸೇವೆ ಜರುಗಲಿದೆ.



ಗಣೇಶ ಚಂದನಶಿವ


ಬೆಂಕಿ ಹಚ್ಚಿದ ತೆಂಗಿನಗರಿಗಳ ತೂರಾಟ. ಬೆಂಕಿಯ ಕಿಡಿಗಳು ಮೈಮೇಲೆ ಬೀಳುತ್ತಿದ್ದಂತೆ ಮತ್ತಷ್ಟು ರೋಷಾವೇಷ. ಕಾರ್ಗತ್ತಲನ್ನು ಭೇದಿಸಿದ ಬೆಂಕಿಯ ಕಿಡಿಗಳು ನರ್ತಿಸುತ್ತಿವೆಯೇನೋ ಎಂಬಂತಹ ನೋಟ. ಈ ರೋಮಾಂಚನಕಾರಿ ದೃಶ್ಯವನ್ನು ಕಣ್ತುಂಬಿಕೊಳ್ಳುವ ಸಹಸ್ರಾರು ಭಕ್ತರು.

ಎರಡು ಮಾಗಣೆ (ಹೋಬಳಿ)ಗಳ ಭಕ್ತರ ಮಧ್ಯೆ ನಡೆಯುವ ‘ಅಗ್ನಿಕೇಳಿ’ ವ್ರತಾಚರಣೆ ದಕ್ಷಿಣ ಕನ್ನಡ ಜಿಲ್ಲೆಯ ಕಟೀಲು ದುರ್ಗಾಪರಮೇಶ್ವರಿಯ ವರ್ಷಾವಧಿ ಜಾತ್ರೆಯ ಪ್ರಮುಖ ಆಕರ್ಷಣೆ. ಇದು ‘ತೂಟೆದಾರ ಸೇವೆ’ ಎಂತಲೂ ಪ್ರಸಿದ್ಧಿ.

ಈ ಅಗ್ನಿಕೇಳಿ ನಡೆಯುವುದು ಕಟೀಲು ಬಳಿಯ ಅತ್ತೂರು ಮತ್ತು ಕೊಡೆತ್ತೂರು ಮಾಗಣೆಗಳ ಗ್ರಾಮಸ್ಥರ ಮಧ್ಯೆ.

ತೆಂಗಿನಗರಿಗಳನ್ನು ಪೊರಕೆಯಂತೆ ಸುತ್ತಲಾಗಿರುತ್ತದೆ. ಅದಕ್ಕೆ ಒಂದು ತುದಿಯಿಂದ ಬೆಂಕಿ ಹಚ್ಚುತ್ತಾರೆ. ಒಂದೆಡೆ ಅತ್ತೂರು, ಇನ್ನೊಂದೆಡೆ ಕೊಡೆತ್ತೂರು ಮಾಗಣೆಯವರು ನಿಂತು, ಬೆಂಕಿ ಹಚ್ಚಿದ ತೆಂಗಿನಗರಿಗಳ ‘ಪಂಜ’ನ್ನು ಪರಸ್ಪರರ ಮೇಲೆ ಎಸೆಯುತ್ತಾರೆ. ತೂರಿ ಬರುವ ಗರಿಗಳಿಂದ ಉದುರುವ ಬೆಂಕಿಯ ಕಿಡಿಗಳು, ಮೈಮೇಲೆ ಬಿದ್ದರೂ ಈ ಆಟದಲ್ಲಿ ತೊಡಗಿರುವವರಿಗೆ ಏನೂ ಅನಿಸುವುದೇ ಇಲ್ಲ. ಪೈಪೋಟಿಗೆ ಬಿದ್ದವರಂತೆ ಅವರೆಲ್ಲ ಈ ‘ಬೆಂಕಿಯ ಓಕುಳಿ’ಯಲ್ಲಿ ಮೈಮರೆಯುತ್ತಾರೆ.

9ನೇ ಪುಟಕ್ಕೆ...



ಹೀಗಿರುತ್ತದೆ ನೋಡಿ ತೂಟೆದಾರ... ಚಿತ್ರಗಳು: ಫಕ್ರುದ್ದೀನ್ ಎಚ್.

ರೊಶೊಮನ್ ಸತ್ಯ ಎನ್ನುವುದು ಮಿಂಚಿನ ಹಾಗೆ





ನಾಟಕದ ದೃಶ್ಯ

ಹೆಸರಾಂತ ನಿರ್ದೇಶಕ ಅಕಿರಾ ಕುರಸೋವಾನ 'ರೊಶೊಮನ್' ಸಿನಿಮಾದಿಂದ ಪ್ರೇರಿತವಾದ ನಾಟಕವಿದು. ಮಹಿಳೆಯ ಮಾನಸಿಕ ಯಾತನೆ, ನೋವಿನೊಂದಿಗೆ ಮಹಿಳಾ ಪರವಾದ ಧ್ವನಿಯನ್ನು ಎತ್ತುತ್ತದೆ. ಮಂಗಳಾ ನಿರ್ದೇಶಿಸಿರುವ ಈ ನಾಟಕವನ್ನು ಎಸ್.ಮಾಲತಿ ಅನುವಾದಿಸಿದ್ದಾರೆ

ಕಿರಣ ಭಟ್, ಹೊನ್ನಾವರ

ಮಿಂಚು, ಗುಡುಗುಗಳ ಕೆಳಗೆ ನಿಂತ ಶತಮಾನಗಳಷ್ಟು ಹಳೆಯದಾದ ರೊಶೊಮನ್ ದ್ವಾರ. ಒಬ್ಬ ಬೌದ್ಧ ಭಿಕ್ಷು ಮತ್ತು ಒಬ್ಬ ಮರ ಕಡಿಯುವವ ದ್ವಾರದಡಿ ಸೇರಿದ್ದಾರೆ. ಈ ನಡುವೆ ಮಳೆಯಿಂದ ರಕ್ಷಣೆ ಪಡೆಯಲು ಕಳ್ಳನೊಬ್ಬನೂ ಇವರ ಮಧ್ಯೆ ಸಿಕ್ಕಿಕೊಳ್ಳುತ್ತಾನೆ. ಮಾತು ಕಾಡಿನಲ್ಲಿ ಸಿಕ್ಕಿದ ಸಮುರಾಯ್ ನ ಹೆಣದ ಸುತ್ತ ಸುತ್ತತೊಡಗುತ್ತದೆ. ಆ ಹೆಣವನ್ನು ಮೊದಲು ಕಂಡವನೂ ಪೊಲೀಸರಿಗೆ ಸುದ್ದಿ ಮುಟ್ಟಿಸಿದವನೂ ಇದೇ ಕಟ್ಟಿಗೆ ಕಡಿಯುವವನೇ. ಆತನ ದೃಶ್ಯ ವಿವರಣೆಯೇ ನಾಟಕದ ಮೂಲಕ್ಕೂ, ಕ್ರೂರಿ, ಡಕಾಯಿತ ತಾಜೋಮಾರೋವಿನ ಪಾತ್ರಕ್ಕೂ ಪ್ರವೇಶ ದೊರಕಿಸಿಕೊಡುತ್ತದೆ.

ಕೊಲೆ ಆರೋಪಿ ಡಕಾಯಿತ ತಾಜೋಮಾರೋನನ್ನು ಪೊಲೀಸರು ಹಿಡಿದು ತಂದಿದ್ದಾರೆ. ಆತ ಕತೆಯನ್ನು ಹೇಳತೊಡಗಿದ್ದಾನೆ.

'ಮರಗಳ ಅಡಿಯಲ್ಲಿ ಬಿದಿರು ಮೆಳೆಗಳ ನಡುವೆ ನಾನು ಮಲಗಿದ್ದೆ. ಯೋಧನೂ, ಹೆಂಡತಿಯೂ ಕುದುರೆಯೇರಿ ಬರುತ್ತಿದ್ದರು. ಗಾಳಿಗೆ ಸೆರಗು ಹಾರಿದಾಗ ನಾನು ಆಕೆಯನ್ನು ಕಂಡೆ. ಯೋಧನನ್ನು ದೂರ ಕರೆದುಕೊಂಡು ಹೋಗಿ ಆತನ ಕೈ ಬಾಯಿ ಕಟ್ಟಿಹಾಕಿದೆ. ಆಕೆಯ ಮೇಲೆರಗಿದೆ. ಆತನನ್ನು ಕೊಂದೆ. ಇದಕ್ಕಿಂತ ಭಿನ್ನವಾಗಿ ಆ ಹೆಣ್ಣು ಹೇಳುವ ಸಾಕ್ಷ್ಯವೇ ಬೇರೆ. ಇಲ್ಲಿ, ಯೋಧನನ್ನು ಕೊಂದವಳು ಆಕೆಯೇ. ಈ ನಡುವೆ ಮಾಧ್ಯಮವೊಂದರ ಮೂಲಕ ಕೊಲೆಯಾದ ಯೋಧನನ್ನೂ ಮಾತನಾಡಿಸಲಾಗುತ್ತದೆ. ಅವನ ಪ್ರಕಾರ ಆತನನ್ನು ಕೊಂದುಕೊಂಡಿದ್ದು ಆತನೇ. ಹೀಗೆ ಕೊಲೆಯ ಆ ಒಂದು ಘಟನೆ ಬೇರೆ ಬೇರೆ ವ್ಯಕ್ತಿಗಳ ಬಾಯಲ್ಲಿ ಬೇರೆ ಬೇರೆ ರೂಪ ಪಡೆದುಕೊಳ್ಳುತ್ತ ಹೋಗುತ್ತದೆ. ಎಲ್ಲವೂ ಸತ್ಯ ಎನಿಸುವ ಹಾಗೆ. ಎಲ್ಲವೂ ಗೋಜಲಾಗುವಂತೆ ಕೂಡ.

ಮಳೆ ನಿಂತಿದೆ. ವಿರೋಧಾಭಾಸದ ಹೇಳಿಕೆಗಳಿಂದ ಬೇಸರಗೊಂಡ ಭಿಕ್ಷು ಇನ್ನೇನು ಹೊರಡಬೇಕು ಎನ್ನುವಾಗ ಬಾಗಿಲಾಚೆಯಿಂದ ಮಗುವಿನ ಅಳುವೊಂದು ಕೇಳುತ್ತದೆ. ಅನಾಥ ಮಗುವನ್ನೆತ್ತಿಕೊಂಡ ಭಿಕ್ಷು ಅದನ್ನು ಕಟ್ಟಿಗೆ ಕಡಿಯುವವನ ಕೈಗಿಡುತ್ತಾನೆ. ಆತ ಮಗುವನ್ನು ಎದೆಗಿಟ್ಟು ಅಪ್ಪುತ್ತಾನೆ. ಹಿತವಾದ ಸಂಗೀತ, ದಾರಿ ತೋರುವ ಬೆಳಕು. ಕತ್ತಲು ಮಾಯವಾಗುತ್ತಿದೆ. ಮಾನವೀಯತೆ ಮೆರೆಯುತ್ತದೆ.

ಹೆಸರಾಂತ ನಿರ್ದೇಶಕ ಅಕಿರಾ ಕುರಸೋವಾನ 'ರೊಶೊಮನ್' ಸಿನಿಮಾದಿಂದ ಪ್ರೇರಿತವಾದ, ಪ್ರಸ್ತುತ ರಂಗ ಪ್ರಯೋಗ ಎಸ್.ಮಾಲತಿಯವರ ಅನುವಾದವನ್ನು ಆಧರಿಸಿದ್ದು.

'ರೊಶೊಮನ್'ನ ಸಂಕೀರ್ಣತೆಗೆ ಸವಾಲೇನೋ ಎಂಬಂತೆ ತುಂಬ ಸರಳವಾದ ರಂಗಸಜ್ಜಿಕೆಯಲ್ಲಿ ನಾಟಕ ಕಟ್ಟುತ್ತಾರೆ ಮಂಗಳಾ. ರಂಗವನ್ನೂ ಅಷ್ಟೇ ಸರಳವಾಗಿ ವಿಭಾಗಿಸಿಕೊಳ್ಳುತ್ತಾರೆ. ರಂಗದ ಒಂದು ಮೂಲೆಯಲ್ಲಿ ಶಿಥಿಲವಾದ 'ರೊಶೊಮನ್' ಬಾಗಿಲು. ನಾಟಕದ ಜೀವವಾದ ಕತ್ತಿವರಸೆಗೆ ತಡೆಯಾಗದಂತೆ, ಮುಖ್ಯಾಂಗಣದಲ್ಲಿ ದೂರ ದೂರದಲ್ಲಿ ಬಿದಿರು ಮೆಳೆಗಳು. ಆದರೆ ಇವುಗಳನ್ನು ಉಪಯೋಗಿಸುವುದರಲ್ಲಿಯೇ ಜಾಣತನ ತೋರುತ್ತಾರೆ. ಹಲವಾರು ಸಂದರ್ಭಗಳಲ್ಲಿ ಬಿದಿರು ಮೆಳೆಗಳ ಹಿಂಭಾಗ ತುಂಬ ಪ್ರಭಾವಶಾಲಿಯಾಗಿ ಉಪಯೋಗವಾಗಿದೆ. ಕಲಾತ್ಮಕ ನೋಟಗಳನ್ನೂ ಕೊಡುತ್ತದೆ. ದೃಶ್ಯಗಳ ಹೆಣಿಗೆಯೂ ಚೆನ್ನ. ಕೆಲವು ಸಂದರ್ಭಗಳಲ್ಲಂತೂ ಮಾತುಗಳನ್ನೂ ಮೀರಿ ಪಾತ್ರಗಳ ನೋಟಗಳೇ ಎಲ್ಲವನ್ನೂ ಹೇಳಿಬಿಡುತ್ತವೆ.

ಅಂತೆಯೇ ನಾಟಕದುದ್ದಕ್ಕೂ ಯೋಧ ಮತ್ತು ಅವನ ಹೆಂಡತಿಯ ಸಂಬಂಧವನ್ನೂ ಮುಖ್ಯವಾಹಿನಿಗೆ ತರಲೆತ್ನಿಸುತ್ತಾರೆ ಮಂಗಳಾ. ಆ ಮಹಿಳೆಯ ಮಾನಸಿಕ ಯಾತನೆ, ನೋವು, ಅವಮಾನಗಳು ತೀಕ್ಷ್ಣವಾಗಿ ಇಲ್ಲಿ ನಿವೇದಿಸಲ್ಪಡುತ್ತವೆ. ನಾಟಕ ಮಹಿಳಾ ಪರ ದನಿಯನ್ನೂ ಎತ್ತತೊಡಗುತ್ತದೆ. ಇವೆಲ್ಲವುಗಳ ಒಟ್ಟೂ ಮೊತ್ತ ದಾಖಲಾಗುವುದು ಕೊನೆಯ ದೃಶ್ಯದಲ್ಲಿ. ಹಾಗಾಗಿ ಈ ರಂಗ ಪ್ರಯೋಗ ಮಗುವಿನ ಎತ್ತಿಕೊಳ್ಳುವಿಕೆಯೊಂದಿಗೆ ಮುಗಿಯುವುದಿಲ್ಲ. ಆ ಯುವತಿಗೆ ನ್ಯಾಯ ಕೇಳಬೇಕಿದೆ. ಆಕೆಯ 'ಆತ್ಮ ಹಾಗೂ ದೇಹಕ್ಕಾದ ಘಾತಕ್ಕಾಗಿ, ನೋವುಂಡ ಬದುಕಿಗಾಗಿ. ಇದು ಮಹಿಳೆಯರೆಲ್ಲರ ಧ್ವನಿಯಾಗುತ್ತ ಹಿನ್ನೆಲೆಯಲ್ಲಿ ಕೇಳುವ ಇಂಥದೇ ದನಿಗಳ ಜೊತೆಗೆ ಸೇರಿಕೊಳ್ಳುತ್ತದೆ.

ನಾಟಕದ ಚಲನೆಯ ಮುಖ್ಯ ಭಾಗ ಕತ್ತಿವರಸೆ ಯುದ್ಧ. ಅದನ್ನು ಸಾಕಷ್ಟು ತೀಕ್ಷ್ಣವಾಗಿಯೂ ಕರಾರುವಾಕ್ಕಾಗಿಯೂ ನಾಟಕದಲ್ಲಿ ಬಳಸಿಕೊಳ್ಳಲಾಗಿದೆ. (ಅಂಜು ಸಿಂಗ್) ದೇಹಭಾಷೆಯ ಅತ್ಯುತ್ತಮ ಬಳಕೆಯಿದೆ.

ಅಭಿನಯದ ತಂಡ ಶಕ್ತಿಯುತವಾಗಿದೆ. ಧನುಷ್ ನಾಗ್, ಚುಕ್ಕಿ ರಮಾ, ಸೂರಜ್ ನಾಯ್ಕ್, ನಾಗರಾಜ ವಿ. ಸಂದೀಪ್ ಜೈನ್, ಚಿರಂತನ್, ಆರ್ಯಕ್ ಮತ್ತು ಅಭಿಷೇಕ್ ಪ್ರಬುದ್ಧವಾಗಿಯೇ ಅಭಿನಯಿಸಿದ್ದಾರೆ. ಕತ್ತಿವರಸೆಯಲ್ಲೂ ಮಿಂಚುತ್ತಾರೆ. ಸಂಗೀತ ಹಿತವಾಗಿದೆ. ಸರಳವಾದ ಬೆಳಕಿನ ವಿನ್ಯಾಸ ಪೂರಕವಾಗಿದೆ. ಯುದ್ಧದ ದೃಶ್ಯಗಳಲ್ಲಿ ಇನ್ನಷ್ಟು ಬೆಳಕಿನಾಟ ಆಡಬಹುದಿತ್ತೇನೋ. ಮೂಲವನ್ನೇ ಆಧರಿಸಿದ ವಸ್ತ್ರವಿನ್ಯಾಸ ನಿಖರವಾಗಿದೆ.

ಇಷ್ಟಾಗಿಯೂ ನಾಟಕದ ಮುಖ್ಯ ಭಾಗದ ದೃಶ್ಯಗಳ ಕಟ್ಟುವಿಕೆ ಇನ್ನಷ್ಟು ಕಲಾತ್ಮಕವಾಗಿಯೂ ಗಟ್ಟಿಯಾಗಿಯೂ ಇರಬಹುದಿತ್ತೇನೋ ಎನಿಸದಿರದು.

ನಾಟಕದ ಕೊನೆಯಲ್ಲಿ ಕಳ್ಳ ಒಂದು ಮಾತು ಹೇಳುತ್ತಾನೆ: 'ಸತ್ಯ ಮಿಂಚಿನ ಥರ. ಅದು ಈಗ ಹೊಳೆಯುತ್ತೆ, ಈಗ ಮಾಯವಾಗುತ್ತೆ. ಆದರೆ ಸುಳ್ಳು ತಿಗಣೆಯ ಥರ, ಪ್ರತಿ ದಿನವೂ ಮಲಗುವಾಗ ಕಚ್ಚುತ್ತೆ. ನಾವು ಅದನ್ನು ಹಾಸಿಗೆಯಲ್ಲಿ ಹೊಸಕಿ ಹೊಸಕಿ ಹಾಕುತ್ತಿರುತ್ತೇವೆ'. ಇದು ಸ್ವಲ್ಪ ಒರಟಾಗಿದೆ. ಆದರೆ ನಾಟಕ ಇದನ್ನೇ ಧ್ವನಿಸಲು ಪ್ರಯತ್ನಿಸುತ್ತದೆ.

ನಾದಮಯ ಮನೆ, ಬೀದಿಯೆಲ್ಲ...!

8ನೇ ಪುಟದಿಂದ...

'ನಾನು ದುಬಾರಿ ಬಟ್ಟೆ-ಬರೆ, ಅಲಂಕಾರ, ಬಂಗಾರ.. ಇದಕ್ಕೆಲ್ಲ ದುಡ್ಡು ಇಡಲಿಲ್ಲ. ಬದಲಿಗೆ ಹತ್ತಾರು ಸುಪ್ರಸಿದ್ಧ ಗಾಯಕರು ಹಾಡಿದ, ವಾದಕರು ನುಡಿಸಿದ ಧ್ವನಿಸುರುಳಿಗಳಿಗೆ, ಟೇಪ್‌ರೆಕಾರ್ಡರ್, ಸೌಂಡ್ ಬಾಕ್ಸ್‌ಗಳಿಗೆ ಖರ್ಚು ಮಾಡಿದೆ. ನನ್ನವರಿಗೆ ನನ್ನಂತೆ ಸಂಗೀತದಲ್ಲಿ ಆಸಕ್ತಿ. ಅದು ಒಳ್ಳೆಯದೇ ಆಯಿತು. ಮಂಗಳೂರಿನ ಸೆಕೆಂಡ್ ಹ್ಯಾಂಡ್ ಶೋ ರೂಂನಿಂದ ತರೇಹವಾರಿ ಸೌಂಡ್ ಬಾಕ್ಸ್‌ಗಳನ್ನು ಖರೀದಿಸಿ ತರುತ್ತಿದ್ದೆವು' ಎನ್ನುತ್ತಾರೆ ಜಯಲಕ್ಷ್ಮಿ.

ಇವರು ತಮ್ಮ ಮೊದಲ ಸಂಬಳದಲ್ಲಿ ಖರೀದಿಸಿದ್ದು ಪಂಡಿತ್ ಭೀಮಸೇನ್ ಜೋಶಿಯವರ (ದಾಸವಾಣಿಯನ್ನು!.) ಮದುವೆ ವೇಳೆ ಇವರ ಅಣ್ಣ ಉಡುಗೊರೆ ಆಗಿ ಕೊಟ್ಟಿದ್ದು ಫಿಲಿಪ್ಸ್ ರೇಡಿಯೊವನ್ನು!. 800 ರೂಪಾಯಿಗಳಲ್ಲಿ ಖರೀದಿಸಿದ ಗ್ರಾಮಫೋನ್ ಅನ್ನು ಜಯಲಕ್ಷ್ಮಿ ಅವರ ತಂದೆ ಅಳಿಯನಿಗೆ ಉಡುಗೊರೆ ಆಗಿ ಕೊಟ್ಟಿದ್ದರು!. ಇವರ ಹುಟ್ಟುಹಬ್ಬ ಸೇರಿದಂತೆ ಶುಭದಿನಕ್ಕೆಲ್ಲ ಬಂಧುಮಿತ್ರರು ಬಹುತೇಕವಾಗಿ ಉಡುಗೊರೆ ರೂಪದಲ್ಲಿ ಕೊಟ್ಟಿದ್ದು ಸಂಗೀತದ ಸಿಡಿ, ಕ್ಯಾಸೆಟ್‌ಗಳನ್ನೇ. ಇನ್ನು ಮುಂಬೈನಲ್ಲಿದ್ದ ಶ್ರೀನಿವಾಸ್ ರಾವ್ ಅವರ ಚಿಕ್ಕಪ್ಪ ತಮ್ಮ ಕೊನೆಗಾಲದಲ್ಲಿ 'ಗ್ರಾಮಫೋನ್ ಪ್ಲೇಟ್ಸ್, ಸಂಗೀತದ ಧ್ವನಿಸುರುಳಿಗಳನ್ನು ನನ್ನ ಕಾಲವಾದ ನಂತರ ಬಿಸಾಡಬೇಡಿ. ಮಾರಲೂ ಬೇಡಿ. ಜಯಾಗೆ ಗಿಫ್ಟ್ ಕೊಟ್ಟುಬಿಡಿ' ಎಂದು ಮನೆಯವರಿಗೆ ತಿಳಿಸಿದ್ದರು. ಅದರಂತೆ ಅವರ ಮರಣದ ನಂತರ ಇವರು ಮುಂಬೈಗೆ ಹೋಗಿ ಅವುಗಳನ್ನೆಲ್ಲ ನೀಟಾಗಿ ಪ್ಯಾಕ್ ಮಾಡಿಕೊಂಡು ಸುರಕ್ಷಿತವಾಗಿ ತಂದಿದ್ದನ್ನು ಮೆಲುಕು ಹಾಕಿದರು.

ಅತ್ಯಮೂಲ್ಯ ಸಂಗ್ರಹ



ಗ್ರಾಮಫೋನ್

ಕನ್ನಡ, ಹಿಂದಿ, ತೆಲುಗು, ಮರಾಠಿ ಭಾಷೆಯ ಭಾವಗೀತೆ, ಭಕ್ತಿಗೀತೆ, ರೋಮ್ಯಾಂಟಿಕ್, ಕ್ಲಾಸಿಕಲ್, ಇನ್ಸ್ಟ್ರುಮೆಂಟಲ್, ವೆಸ್ಟ್ರನ್ ಮ್ಯೂಸಿಕ್, ಅಭಂಗಗಳು, ಹರಿಕತೆಗಳು.. ಇವೆಲ್ಲ ಇವರ ಸಂಗ್ರಹದಲ್ಲಿವೆ. ಗ್ರಾಮಫೋನ್ ತಟ್ಟೆಗಳು ಎಲ್.ಪಿ (ಲಾಂಗ್ ಪ್ಲೇಸ್) - 500, ಶಾರ್ಟ್ ಪ್ಲೇಸ್ - 200, ಕ್ಯಾಸೆಟ್‌ಗಳು- 300 ಸಂಖ್ಯೆಯಲ್ಲಿವೆ. ಅವುಗಳಲ್ಲಿ ತುಂಬಾ ಹಳೆಯ ಮತ್ತು ಇತ್ತೀಚಿನ ಸುಪ್ರಸಿದ್ಧ ಗಾಯಕರು, ವಾದಕರಾದ ಉಸ್ತಾದ್ ಅಬ್ದುಲ್ ಅಲಿ ಜಾಫರ್ ಖಾನ್, ಡಿ.ವಿ. ಪಲೋಸ್ಕರ್, ಸಿ.ಆರ್. ವ್ಯಾಸ್, ಉಸ್ತಾದ್ ವಿಲಾಯತ್ ಖಾನ್, ಹರಿಪ್ರಸಾದ್ ಚೌರಾಶಿಯಾ, ಕುನ್ನಕುಡಿ ವೈದ್ಯನಾಥನ್, ಕುಮಾರ ಗಂಧರ್ವ, ಗಂಗೂಬಾಯಿ ಹಾನಗಲ್, ಎಂ.ಎಸ್.ಸುಬ್ಬಲಕ್ಷ್ಮಿ ಮುಂತಾದವರ ಕಲೆಕ್ಷನ್ಸ್ ಇದ್ದು, ಇವೆಲ್ಲ ಒರಿಜಿನಲ್ ಎನ್ನುವುದು ವಿಶೇಷ. '1974 ರಲ್ಲಿ ಲಂಡನ್‌ನಲ್ಲಿ ಲತಾ ಮಂಗೇಶ್ವರ್ ನಡೆಸಿಕೊಟ್ಟ ಸಂಗೀತ ಕಛೇರಿಯ ನಾಲ್ಕು ಗ್ರಾಮಫೋನ್ ಪ್ಲೇಟ್ಸ್ ನಮ್ಮ ಅಪರೂಪದ, ಅತ್ಯಮೂಲ್ಯ ಸಂಗ್ರಹಗಳಲ್ಲಿ ಒಂದು..' ಎನ್ನುತ್ತಾರೆ ಶ್ರೀನಿವಾಸ್‌ರಾವ್. ಇವುಗಳಿಗೆ ಇಂದು ಲಕ್ಷಾಂತರ ಬೆಲೆ ಇದೆ. ಇವರು ತಮ್ಮ ವೃತ್ತಿ ಬದುಕಿನಲ್ಲಿ ಹತ್ತಾರು ಊರುಗಳಿಗೆ ಅಲೆದರೂ ಇವುಗಳನ್ನು ಅತ್ಯಂತ ಕಾಳಜಿ ಮಾಡಿಕೊಂಡು ಬಂದಿದ್ದಾರೆ.

ತುಂಬಾ ಹಳೆಯದಾದ ಸಂಗೀತ ಪ್ಲೇ ಮಾಡುವ ಸಾಧನಗಳು ಇಂದಿಗೂ ಸುಸ್ಥಿತಿಯಲ್ಲಿರುವುದು ವಿಶೇಷ. ಕೇನ್‌ವುಡ್ ಕಂಪನಿಯ ಎಂಪಿ ಪ್ಲೈಯರ್, ರಾಯಕ್ ಸಿಸ್ಟಮ್ ಟೇಪ್ ರೆಕಾರ್ಡರ್, ಟು ಇನ್ ಒನ್, ತ್ರಿ ಇನ್ ಒನ್, ಒಟ್ಟಿಗೆ 06 ಸಿ.ಡಿ ಹಾಕಿ ಪ್ಲೇ ಮಾಡುವ ಸಿಡಿ ಪ್ಲೇಯರ್, ಗ್ರಾಫಿಕ್ ಎನ್ ಕ್ಯುಲೇಸರ್... ಇವುಗಳನ್ನೆಲ್ಲಾ ಶ್ರೀನಿವಾಸ್ ರಾವ್ ಆಗ್ಗಾಗ್ಗೆ ಸ್ವಚ್ಛ ಮಾಡಿ ಸುಸ್ಥಿತಿಯಲ್ಲಿಡುತ್ತಾರೆ. ಕೈಕೊಟ್ಟರೆ ರಿಪೇರಿ ಮಾಡುತ್ತಾರೆ. 'ಇಂದಿಗೂ ಇವೆಲ್ಲ ಒಂದಿಷ್ಟೂ ರಸಭಂಗವಾದಂತೆ ಕಾರ್ಯನಿರ್ವಹಿಸುತ್ತಿದ್ದು, ಓಣಿಯಲ್ಲಿ ಸಾರ್ವಜನಿಕ ಗಣೇಶ ಪ್ರತಿಷ್ಠಾಪನೆ ವೇಳೆ ಅಕ್ಕಪಕ್ಕದವರು, ಪರಿಚಯಸ್ಥರು ಸಂಗೀತದ ಧ್ವನಿಸುರುಳಿಗಳನ್ನು ಕೇಳಿ ಒಯ್ಯುತ್ತಾರೆ. ಅವರ ಅಭಿರುಚಿ ಸಂತಸ ತಂದಿದೆ..' ಎನ್ನುತ್ತಾರೆ ಜಯಲಕ್ಷ್ಮಿ.

ಇಲ್ಲಿ ನಿತ್ಯ ಸಂಗೀತ ಕೇಳುವುದರಿಂದ ತಮ್ಮೊಳಗೆ ಮತ್ತು ಪರಿಸರದಲ್ಲಿ ಗುಣಾತ್ಮಕ ಬದಲಾವಣೆ ಆಗುತ್ತಿರುವುದನ್ನು ಇವರು ಗುರುತಿಸಿದ್ದಾರೆ. ವಯೋಸಹಜ ಕಾಯಿಲೆಗಳು ಉಲ್ಬಣವಾಗದೇ ನಿಯಂತ್ರಣದಲ್ಲಿರುವುದು ಇವರ ಅನುಭವಕ್ಕೆ ಬಂದಿದೆ. ಇಳಿವಯಸ್ಸಿನಲ್ಲಿ ಚಿಂತೆ, ಒತ್ತಡ ಕಾಡದೇ ಇರುವುದಕ್ಕೆ ಸದಾ ಉತ್ಸಾಹ-ಲವಲವಿಕೆಯಿಂದ ಇರಲಿಕ್ಕೆ ಅನುದಿನ ಹೊಚ್ಚ ಹೊಸತು ಆಗಿ ಕಾಣುವಲ್ಲಿ ಮನಶಾಂತಿಯಲ್ಲಿ ಸಂಗೀತ ಆಲಿಸುವುದು ಕಾರಣ ಎನ್ನುತ್ತಾರೆ ಈ ದಂಪತಿ.

ಒಂದೊಳ್ಳೆ ಹವ್ಯಾಸ, ಸದಭಿರುಚಿ ಇಳಿವಯಸ್ಸಿನಲ್ಲಿ ಆಪ್ತ ಸಂಗಾತಿ ಆಗುವ ಪರಿಯೇ ಅದ್ಭುತ.



ತೂಟೆದಾರಕ್ಕೆ ಸಿದ್ಧತೆ

ಕಟೀಲಮ್ಮನ ಸನ್ನಿಧಿಯಲ್ಲಿ ಅಗ್ನಿಕೇಳಿ

8ನೇ ಪುಟದಿಂದ...

ಕಟೀಲು ದುರ್ಗಾಪರಮೇಶ್ವರಿಗೆ ಅರುಣಾಸುರ ಮರ್ದಿನಿ ಎಂದು ಕರೆಯುವುದೂ ಉಂಟು. ಅರುಣಾಸುರನನ್ನು ಸಂಹರಿಸಿದ ದೇವಿ, ವಿಜಯಶಾಲಿಯಾಗಿ ಮರಳಿದಾಗ ಬೆಂಕಿಯ ಸ್ವಾಗತ ಕೋರಲಾಗಿತ್ತು. ಅದರ ಸ್ಮರಣಾರ್ಥ ತೂಟೆದಾರ ಸೇವೆ ನಡೆಯುತ್ತದೆ. ಇದು ದುರ್ಗಾಪರಮೇಶ್ವರಿಗೆ ಬಲು ಇಷ್ಟದ ಆಟ ಎಂಬುದು ಪ್ರತೀತಿ.

ಕಟೀಲು ದುರ್ಗಾಪರಮೇಶ್ವರಿ ದೇವಸ್ಥಾನದ ಆನುವಂಶಿಕ ಅರ್ಚಕ ಶ್ರೀಹರಿ ನಾರಾಯಣದಾಸ ಅಸ್ರಣ್ಣ ಅವರು ಹೇಳುವಂತೆ, 'ಕಟೀಲಮ್ಮ ಜಲದುರ್ಗೆ. ದೇವಿಯ ಜಾತ್ರೆಯಲ್ಲಿ ಯಾವುದಾದರೂ ಆಟ ಆಗಬೇಕು. ಇಲ್ಲಿ ಅಗ್ನಿಕೇಳಿಯ ಆಟ ನಡೆಯುತ್ತದೆ. ಇದು ಯಾವಾಗ ಆರಂಭವಾಯಿತು ಎಂಬುದು ಯಾರಿಗೂ ಗೊತ್ತಿಲ್ಲ'.

ಅತ್ತೂರು ಮತ್ತು ಕೊಡೆತ್ತೂರು ಮಾಗಣೆಗಳು ಕಟೀಲಿಗೆ ಸಂಬಂಧಿಸಿದ ಮಾಗಣೆಗಳು. ಈ ಎರಡೂ ಮಾಗಣೆಗಳ ವ್ಯಾಪ್ತಿಯಲ್ಲಿ ಎಂಟು ಊರುಗಳು ಬರುತ್ತವೆ. ಈ ಊರುಗಳಲ್ಲಿ ತೂಟೆದಾರ ಸೇವೆ ಮಾಡುವ ಮನೆತನಗಳು ಇವೆ. ವಂಶಪಾರಂಪರ್ಯವಾಗಿ ಅವರು ಈ ಸೇವೆ ಮಾಡುತ್ತಿದ್ದಾರೆ. ಇದು ಅತ್ಯಂತ ಸಂಪ್ರದಾಯಬದ್ಧ ಹಾಗೂ ನಿಯಮಬದ್ಧವಾಗಿ ನಡೆಯುವ ಸೇವೆ. ಇಂತಹ ಸೇವೆ ಮಾಡುವ ಮನೆಯವರು ಒಂದು ಮನೆಯಿಂದ ಒಬ್ಬರು ಮಾತ್ರ ಬರಬೇಕು. ಸೂತಕ ಇದ್ದರೆ ಬರುವ ಹಾಗಿಲ್ಲ. ಆ ಮನೆತನದವರ ಬದಲು ಬೇರೆಯವರು ಬರುವಂತೆಯೂ ಇಲ್ಲ... ಹೀಗೆ ಹಲವು ನಿಯಮಗಳಿವೆ. ಇದು ಪರಂಪರಾಗತವಾಗಿ ನಡೆದುಕೊಂಡು ಬಂದಿರುವ ಸೇವೆ.

ತೂಟೆದಾರ ಸೇವೆಗೆ ಈ ಎಂಟು ಊರಿಗೆ ಸಂಬಂಧಿಸಿದವರಿಗೆ ಮಾತ್ರ ಅವಕಾಶ. ಸೇವೆ ಮಾಡುವವರು ಎಂಟು ದಿನ ಉಪವಾಸ ವ್ರತ ಮಾಡಬೇಕು. ಈ ಸೇವೆಗೆ ಬೇಕಾದ ತೆಂಗಿನಗರಿಗಳನ್ನು ಅತ್ತೂರು ಶರಣ ಗ್ರಾಮದವರು ತಂದು ಕೊಡುವುದು ಸಂಪ್ರದಾಯ. ಪ್ರತಿ ವರ್ಷವೂ ಈ ಊರಿನವರೇ ತೆಂಗಿನ ಗರಿಗಳನ್ನು ಪಂಜದ ಆಕಾರದಲ್ಲಿ ಸುತ್ತಿ ತಂದು ದೇವಸ್ಥಾನಕ್ಕೆ ಕೊಡುತ್ತಾರೆ.

ಮೇಷ ಸಂಕ್ರಮಣದಂದು ಧ್ವಜಾರೋಹಣದೊಂದಿಗೆ ಎಂಟು ದಿನಗಳ ಕಟೀಲು ವರ್ಷಾವಧಿ ಜಾತ್ರೆಗೆ ಚಾಲನೆ ದೊರೆಯುತ್ತದೆ. ಧ್ವಜಾರೋಹಣದ ಬಳಿಕ ಮದ್ಯ-ಮಾಂಸ ತ್ಯಜಿಸಿ ವ್ರತ ಆಚರಿಸುತ್ತಾರೆ. ಈ ಅಗ್ನಿಕೇಳಿ ಸಂದರ್ಭದಲ್ಲಿ ವ್ರತಾಧಾರಿಗಳಿಗೆ ಕುಂಕುಮ ಹಾಗೂ ಹೂವು ನೀಡಲಾಗುತ್ತದೆ. ವ್ರತಾಧಾರಿಗಳು ದೇಹಕ್ಕೆ ಕುಂಕುಮ ಲೇಪಿಸಿಕೊಳ್ಳುತ್ತಾರೆ. ಬೆಂಕಿ ಸೇವೆಯ ಬಳಿಕ ವ್ರತಾಧಾರಿಗಳು ದೇವಸ್ಥಾನದ ಬಳಿಯ ನಂದಿನಿ ನದಿಯಲ್ಲಿ ಸ್ನಾನಮಾಡಿ, ಮೈಗೆ ಗಂಧ ಲೇಪಿಸಿಕೊಂಡು ದೇವಸ್ಥಾನದಲ್ಲಿ ತೀರ್ಥಪ್ರಸಾದ ಸ್ವೀಕರಿಸುತ್ತಾರೆ.

ನಸುಕಿನ 2 ಗಂಟೆಗೆ ನಡೆಯುವ ಈ ಬೆಂಕಿ ಕಾಳಗದಲ್ಲಿ ಅಕ್ಷರಶಃ ವೈರಿಗಳಂತೆ ಕಾದಾಡುತ್ತಾರೆ. ಆಯಾ ಗ್ರಾಮಗಳ ಗುತ್ತು ಬರ್ಕೆ (ಮುಖಂಡರು)ಯವರು ಇದು ಅತಿರೇಕಕ್ಕೆ ಹೋಗದಂತೆ ಹತೋಟಿಗೆ ತರುತ್ತಾರೆ. ಅಗ್ನಿಕೇಳಿಯಲ್ಲಿ ಪ್ರತಿವರ್ಷ 400ಕ್ಕೂ ಹೆಚ್ಚು ಜನ ಪಾಲ್ಗೊಳ್ಳುತ್ತಾರೆ. ಅವರಿಗೆ ಸೇವಾಕರ್ತರು ಎಂದು ಕರೆಯಲಾಗುತ್ತದೆ.

ಜಾತ್ರೆಯ ಎಂಟನೇ ದಿನ ಬಲಿ ಉತ್ಸವದ ನಂತರ ವಸಂತ ಮಂಟಪದಲ್ಲಿ ದುರ್ಗಾಪರಮೇಶ್ವರಿಗೆ ಪೂಜೆ ನಡೆಯುತ್ತದೆ. ಸಂಜೆ 7.30ರಿಂದ ಶ್ರೀದೇವಿಯ ಸವಾರಿಗಳು ನಡೆಯುತ್ತವೆ. ವಿಶೇಷವಾಗಿ ಅಲಂಕೃತಗೊಂಡ ಚಿನ್ನದ ಪಲ್ಲಕ್ಕಿಯಲ್ಲಿ ವಿರಾಜಮಾನಳಾದ ದೇವಿಯ ಮೂರ್ತಿಯನ್ನು ವಾದ್ಯವೃಂದದೊಂದಿಗೆ ಎಕ್ಕಾರಿಗೆ ಕರೆದೊಯ್ಯಲಾಗುತ್ತದೆ. ಅಲ್ಲಿಂದ ವಾಪಸ್ ಬರುವಾಗ 18 ಕಟ್ಟೆಗಳಲ್ಲಿ ದೇವಿಗೆ ಪೂಜೆ ಸಲ್ಲಿಸಲಾಗುತ್ತದೆ. ದೇವಸ್ಥಾನದ ಆವರಣದಲ್ಲಿ ಬ್ರಹ್ಮರಥೋತ್ಸವ ನಡೆಯುತ್ತದೆ. ನಂದಿನಿ ನದಿಯಲ್ಲಿರುವ ಸ್ನಾನದ ಕಟ್ಟೆಯಲ್ಲಿ ಅವಭೃತೋತ್ಸವ ಜರುಗುತ್ತದೆ. ವಿಶೇಷ ರಥದಲ್ಲಿ ದೇವಿ ಸ್ನಾನಕ್ಕೆ ಸಾಗುವಾಗ ತೂಟೆದಾರ ವ್ರತಧಾರಿಗಳೂ ಜೊತೆಯಲ್ಲೇ ಸಾಗುತ್ತಾರೆ. ಅಜಾರು ರಕ್ತೇಶ್ವರಿ ಸನ್ನಿಧಿ ಬಳಿ ದೇವಿಯ ಜೊತೆ ವ್ರತಧಾರಿಗಳೂ ನಂದಿನಿ ನದಿಯಲ್ಲಿ ಸ್ನಾನ ಮಾಡುತ್ತಾರೆ. ಬಳಿಕ ನದಿ ತೀರದಲ್ಲಿ ದೇವರಿಗೆ ವಿಶೇಷ ಪೂಜೆ, ಅಲ್ಲೇ ಸ್ವಲ್ಪ ಹೊತ್ತು ತೂಟೆದಾರ ಸೇವೆ ನಡೆಯುತ್ತದೆ. ನಂತರ ಕೂಗು ಹಾಕುತ್ತಾ ವ್ರತಾಧಾರಿಗಳು ದೇವಸ್ಥಾನದ ಎದುರಿನ ಮೈದಾನಕ್ಕೆ ಬಂದು ಅಲ್ಲಿ ತೂಟೆದಾರ ಸೇವೆ ಮುಂದುವರಿಸುತ್ತಾರೆ. ದೇವಿಯ ಸನ್ನಿಧಾನದಲ್ಲಿ ನಡೆಯುವ ಈ 'ಅಗ್ನಿ ಓಕುಳಿ' ಸೇವೆ ನೋಡಲು ಸಹಸ್ರಾರು ಭಕ್ತರು ಸೇರಿರುತ್ತಾರೆ.

ಮುನ್ನೋಟ 13-04-2025 ರಿಂದ 19-04-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಕೆಲವು ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳುವಿರಿ. ಆದಾಯವು ನಿರೀಕ್ಷೆಯ ಹತ್ತಿರ ಬರುತ್ತದೆ. ನಿಮ್ಮ ಬಂಧುಗಳ ಸಹಕಾರ ನಿಮಗೆ ದೊರೆಯುವುದಿಲ್ಲ. ಭೂಮಿ ವ್ಯವಹಾರ ಮಾಡುವವರ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲವಿರುತ್ತದೆ. ಸಂಗಾತಿಯ ವಿಪರೀತ ಖರ್ಚುಗಳು ಗಾಬರಿ ಹುಟ್ಟಿಸುತ್ತದೆ. ಕೃಷಿಯಿಂದ ಅನಿರೀಕ್ಷಿತ ಆದಾಯ ಬರುತ್ತದೆ. ಹಿರಿಯರಿಂದ ಧನಸಹಾಯವನ್ನು ನಿರೀಕ್ಷೆ ಮಾಡಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಗೌರವಯುತವಾದ ನಡವಳಿಕೆಯನ್ನು ಅಳವಡಿಸಿಕೊಳ್ಳುವಿರಿ. ಆದಾಯವು ನಿಮ್ಮ ನಿರೀಕ್ಷೆಯ ಹತ್ತಿರ ಬರುತ್ತದೆ. ಎಲ್ಲರ ಸಹಕಾರ ನಿಮಗೆ ದೊರೆಯುತ್ತದೆ. ಕೃಷಿಭೂಮಿಯನ್ನು ಕೊಳ್ಳಬಹುದು. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲವಿರುತ್ತದೆ. ಸಂಗಾತಿಯಿಂದ ನಿಮ್ಮ ಕೃಷಿ ಕಾರ್ಯಗಳಿಗೆ ಹೆಚ್ಚು ಸಹಕಾರ ದೊರೆಯುತ್ತದೆ. ಕೆಲವರಿಗೆ ಅನಿರೀಕ್ಷಿತ ಆದಾಯ ಲಭಿಸುವ ಸಾಧ್ಯತೆ ಇದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಕೃಷಿಯಿಂದ ಆದಾಯವಿರುತ್ತದೆ. ನಿಮ್ಮ ಬಂಧುಗಳ ಸಹಕಾರ ನಿಮಗೆ ದೊರೆಯುತ್ತದೆ. ಪಶುಸಂಗೋಪನೆ ಮಾಡುವವರಿಗೆ ಲಾಭವಿದೆ. ವೃತ್ತಿಯಲ್ಲಿ ಸಂಪಾದನೆ ಹೆಚ್ಚಾಗುವ ಸಾಧ್ಯತೆ ಇದೆ. ಕೆಲವರಿಗೆ ಬಾಯಿ ಹುಣ್ಣು ಕಾಡಬಹುದು. ಶಾಲಾ ಕಾಲೇಜನ್ನು ನಡೆಸುವವರಿಗೆ ಕಾನೂನಿನ ತೊಡಕುಗಳು ಎದುರಾಗಬಹುದು. ಕಬ್ಬಿಣದ ವ್ಯಾಪಾರಿಗಳಿಗೆ ಅನಿರೀಕ್ಷಿತ ಲಾಭ ಬರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ಮಹಿಳೆಯರಿಂದ ಕೆಲಸ ಕಾರ್ಯಗಳಿಗೆ ಅಡ್ಡಿಯಾಗಬಹುದು. ಆಸ್ತಿ ಕೊಳ್ಳಲು ತಯಾರಿ ನಡೆಸಬಹುದು. ಕ್ರೀಡಾಪಟುಗಳಿಗೆ ಸಾಮರ್ಥ್ಯವನ್ನು ತೋರಿಸಲು ಉತ್ತಮ ಅವಕಾಶ ದೊರೆಯುತ್ತದೆ. ಹಣಕಾಸಿನ ವ್ಯವಹಾರಗಳಲ್ಲಿ ಅಷ್ಟು ಲಾಭವಿರುವುದಿಲ್ಲ. ಸಂಗಾತಿಯು ತಮ್ಮ ಸಂಪಾದನೆಯಲ್ಲಿ ಹೆಚ್ಚಿನ ಭಾಗ ಸಂಸಾರಕ್ಕೆ ನೀಡುತ್ತಾರೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಅಧಿಕ ಒತ್ತಡದ ನಡುವೆ ಕೆಲಸ ಮಾಡುವಿರಿ. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ಮಹಿಳೆಯರಿಂದ ಅಡ್ಡಿ ಬರಬಹುದು. ಭೂ ವ್ಯವಹಾರಗಳಲ್ಲಿ ಅಷ್ಟು ಲಾಭ ಇರುವುದಿಲ್ಲ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ರಾಜಕೀಯ ನಾಯಕರುಗಳಿಗೆ ಜನ ಬೆಂಬಲ ಪುನಃ ದೊರೆಯುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಮನಸಿನಲ್ಲಿ ಸ್ಥಿರ ಭಾವನೆಗಳಿರುವುದಿಲ್ಲ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಕೃಷಿಯಿಂದ ಸಾಕಷ್ಟು ಲಾಭವನ್ನು ಪಡೆಯಬಹುದು. ಪುಸ್ತಕ ವ್ಯಾಪಾರಿಗಳಿಗೆ ಹೆಚ್ಚು ವ್ಯಾಪಾರವಾಗುತ್ತದೆ. ಮಕ್ಕಳ ಬಗ್ಗೆ ಶುಭ ವಾರ್ತೆಗಳನ್ನು ಕೇಳಬಹುದು. ಕಬ್ಬಿಣ ಮತ್ತು ಉಕ್ಕು ಮಾರಾಟಗಾರರಿಗೆ ಸಾಕಷ್ಟು ಲಾಭವಿರುತ್ತದೆ. ಸಂಗಾತಿಯ ಆದಾಯದಲ್ಲಿ ಹೆಚ್ಚಳವನ್ನು ಕಾಣಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಸರಿಯಾದ ನಿರ್ಧಾರಗಳಿಲ್ಲದೆ ಮನಸ್ಸು ಗೊಂದಲದ ಗೂಡಾಗುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ಕೆಲವು ಕೆಲಸಗಳಿಗೆ ಹಿರಿಯರಿಂದ ವಿರೋಧ ಬರಬಹುದು. ಕೃಷಿಭೂಮಿಯನ್ನು ವ್ಯಾಪಾರ ಮಾಡುವ ದಲ್ಲಾಳಿಗಳಿಗೆ ಹೆಚ್ಚಿನ ಕಮಿಷನ್ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಫಲಿತಾಂಶ ಪಡೆಯುವುದು ಕಷ್ಟವಾಗಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಕೆಲವು ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳಲೇ ಬೇಕಾದ ಪರಿಸ್ಥಿತಿ ಇರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ಜನ ಬೆಂಬಲ ದೊರೆಯುತ್ತದೆ. ಕೃಷಿ ಸಂಶೋಧನಾಕಾರರಿಗೆ ಸಾಕಷ್ಟು ಪ್ರಗತಿ ಇರುತ್ತದೆ. ವಿದ್ಯಾರ್ಥಿಗಳು ಶ್ರಮಪಟ್ಟು ಉತ್ತಮ ಫಲಿತಾಂಶ ಪಡೆಯಬಹುದು. ಬೆಂಕಿಯ ಜೊತೆ ಕೆಲಸ ಮಾಡುವವರು ಹೆಚ್ಚು ಎಚ್ಚರದಿಂದ ಕೆಲಸ ಮಾಡಿ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ನಿಮ್ಮ ಶತ್ರುಗಳಿಗೂ ಸಹಾಯ ಮಾಡುವಿರಿ. ಆದಾಯವು ಕಡಿಮೆ ಇದ್ದು ಅದರಲ್ಲೇ ನಿರ್ವಹಣೆ ಮಾಡುವಿರಿ. ವಿದೇಶದಲ್ಲಿರುವವರು ಅಲ್ಲಿಯೇ ಸ್ಥಿರಾಸ್ತಿ ಮಾಡಿಕೊಳ್ಳಬಹುದು. ವಿದ್ಯಾರ್ಥಿಗಳು ಸಾಕಷ್ಟು ಪರಿಶ್ರಮ ಹಾಕಿ ಫಲಿತಾಂಶ ಪಡೆಯಬಹುದು. ಆಸ್ತಿ ಖರೀದಿಗೆ ಸಂಗಾತಿಯಿಂದ ಧನಸಹಾಯ ಒದಗುತ್ತದೆ. ಕೃಷಿಯಿಂದ ನಿರೀಕ್ಷಿತ ಆದಾಯ ಇರುವುದಿಲ್ಲ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ನಿಮ್ಮ ಪರಿಶ್ರಮದಿಂದ ವೃತ್ತಿಯಲ್ಲಿ ಒಳ್ಳೆಯ ಹೆಸರನ್ನು ಪಡೆಯುವಿರಿ. ಆದಾಯವು ಕಡಿಮೆ ಇದ್ದರೂ ಸಮಸ್ಯೆಯಾಗುವುದಿಲ್ಲ. ನಿಮ್ಮ ಬಂಧುಗಳ ಅಡ್ಡಿಯ ನಡುವೆಯೂ ನಿಮ್ಮ ಗುರಿ ಸಾಧಿಸುವಿರಿ. ಕಟ್ಟಡ ನಿರ್ಮಾಣಕಾರರಿಗೆ ಉತ್ತಮ ಕೆಲಸ ದೊರೆತು ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಅತಿ ಹೆಚ್ಚು ಫಲಿತಾಂಶ ಪಡೆಯುವ ಯೋಗವಿದೆ. ನಿಮ್ಮ ಆರೋಗ್ಯದ ಕಡೆ ಗಮನವಿರಲಿ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಸಮಾಜಮುಖಿಯಾಗಿ ಕೆಲಸ ಮಾಡುವಿರಿ. ಆದಾಯವು ನಿರೀಕ್ಷೆಯಷ್ಟಿರುತ್ತದೆ. ಸಂಬಂಧಿಕರಿಗೆ ಕೊಟ್ಟ ಸಾಲ ವಾಪಾಸು ಬರುವುದಿಲ್ಲ. ಸ್ಥಿರಾಸ್ತಿಯನ್ನು ಕೊಳ್ಳುವ ಯೋಚನೆ ಮಾಡಬಹುದು. ಹೊಸ ವ್ಯಾಪಾರ ವ್ಯವಹಾರಗಳಲ್ಲಿ ನಿಮಗೆ ಅವಕಾಶ ದೊರೆಯುತ್ತದೆ. ಹರಿತವಾದ ಆಯುಧಗಳ ಜೊತೆ ಕೆಲಸ ಮಾಡುವವರು ಎಚ್ಚರದಿಂದ ಮಾಡಿ. ವೃತ್ತಿಯಲ್ಲಿ ಸಹೋದ್ಯೋಗಿಗಳ ಸಹಕಾರ ದೊರೆಯುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಅತಿಯಾದ ಆತ್ಮವಿಶ್ವಾಸ ನಿಮ್ಮಲ್ಲಿ ಇರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಧರ್ಮದ ಕಡೆಗೆ ಮನಸ್ಸು ಹೆಚ್ಚು ವಾಲುತ್ತದೆ. ಮಕ್ಕಳಿಂದ ಸೂಕ್ತ ಗೌರವ ದೊರೆಯುವುದಿಲ್ಲ. ಹಿರಿಯರ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆಯನ್ನು ಕಾಣಬಹುದು. ಸಂಗಾತಿಯ ಸಹಕಾರದೊಂದಿಗೆ ಸಂಪಾದನೆಯನ್ನು ಹೆಚ್ಚು ಮಾಡಿಕೊಳ್ಳಬಹುದು. ಕೃಷಿಯಿಂದ ಹೆಚ್ಚು ಆದಾಯವನ್ನು ನಿರೀಕ್ಷೆ ಮಾಡಬಹುದು.

ಪದಬಂಧ 2887



ಮೇಲಿನಿಂದ ಕೆಳಕ್ಕೆ

1. ಮರಾಠಿಯ ಮೋಸ ತಂತ್ರದವ 3
2. ಮತ್ತೊಬ್ಬರ ಶ್ರೇಯಸ್ಸಿಗೆ ಹೇಳುವ ಮಧುರವಾದ ಮಾತು 5
3. ದೈವದಂಥ ಭುವಿಯನ್ನು ಹಿಡಿದಿಟ್ಟುಕೊಂಡಿರುವ ಒಡೆಯ 5
4. ಆಡಳಿತಾಧಿಕಾರದ ವ್ಯಾಪ್ತಿ ಸಮುದ್ರದ ಎಲ್ಲೆ 3
6. ವಸುವನ್ನು ಧರಿಸಿರುವ ಭೂಮಾತೆ 4
9. ಹೆಂಡತಿಯ ಅನುಮಾನ 5
10. ನಾವಿರುವ ನಾಡಿನ ಬಗ್ಗೆ ಇರುವ ಹೆಮ್ಮೆ, ಗೌರವ 5
11. ಸನ್ಮಾನಿಸಿ ಕುತ್ತಿಗೆಗೆ ಹಾಕುವ ಮೆಡಲ್ಲು 3
12. ಕೊಡುಗೆಯಾಗಿ ಮೊದಲು ಹುಟ್ಟಿದವ 3
13. ಕೆಲಸವಾಗಬೇಕಾದರೆ ಸಾಹೇಬರಿಗೆ ತಲೆ ತಗ್ಗಿಸಿ ನಮಸ್ಕರಿಸು 5
14. ಶುಕ್ರವಾರದ ಪೂಜೆಯ ವೇಳೆಗೆ ಈಕೆಗೆ ಆಹ್ವಾನ 4
15. ಹೊಸ ಉದಯೋನ್ಮುಖ ಹಾಡುಗಾರ 5
17. ಒಂಟಿ ಒಳನುಗ್ಗಲು ಕಷ್ಟವಾಗುವ ಹಂಗಾಮಿ ಡೇರೆ 3
19. ಮಾಯಾ ಮಂತ್ರದ ಮೋಡಿ ವಿದ್ಯೆ 3

ಎಡದಿಂದ ಬಲಕ್ಕೆ

1. ಗೋಮಾಳದಲ್ಲಿ ಪಶುಪಾಲಕ 4
3. ಹಳೆಗನ್ನಡದಲ್ಲಿ ಇಷ್ಟಪಟ್ಟು ಮದುವೆಯಾಗುವವ 3
5. ನಿಧಾನವಾಗಿ ಲಗ್ನವಾಗು, ಹಿಡಿದು ಹಿಡಿದು ಮಾತಾಡು 5
7. ಸಿಗ್ಗಿನಿಂದ ತಲೆ ತಗ್ಗಿಸಿದ ಸೋದರಿ ಪತಿ 4
8. ಬೇಳೆ ಕಾಳುಗಳ ಅಧಿಕೃತ ಒಡೆಯ 4
10. ಭಗವಂತನ ಹಾಡಿಕೆಯಲ್ಲಿ ಬೆರೆತು ತಲ್ಲೀನನಾಗಿ ಹೋದವ 8
13. ಎಲ್ಲಾ ಬಗೆಯ ಮಂದಿ ಸೇರಿರುವ ಗುಂಪು 8
16. ನಗು ಮೊಗದ ರಘುವರನನ್ನು ನೋಡ ಬಯಸುವ ತ್ಯಾಗರಾಜರ ಕೃತಿ 4
18. ಬೀಸುವ ವಾಯುವಿನ ಒಡೆಯನೆಂಬ ಹನುಮನ ಹೆಸರು 4
20. ಹಳೆಯದು ಮುಗಿದಮೇಲೆ ಶುರುವಾಗುವ ಚರ್ಚಾ ವಿಚಾರ 5
21. ಜಿಲೇಬಿ ಜೊತೆ ಗಟ್ಟಿ ಕ್ಷೀರವನ್ನು ಬಿಹಾರದಲ್ಲಿ ಹೀಗೆನ್ನುವರೆ? 3
22. ಸುಮಂಗಲಿ ಕೊರಳಿನ ಕರಿ ಪೂಸು 4

ಪದಬಂಧ ಉತ್ತರ -2886

ಮೇಲಿಂದ ಕೆಳಕ್ಕೆ

1.ಶಾಶ್ವತ 2. ವಿಷ 3.ಎತ್ತು 4.ಖನನ 6.ರಜಕ 8.ಕುಲದೈವ 9.ಪಕ್ಷ 11.ಟಾಕೀಸು 13.ಸುಸ್ವರ 14.ಹಣತೆ 16.ರವಳಿ 18.ಮದಗಜ 21.ಕೋಣ 22.ಕೆಣಕು 23.ರಾಧೇಮಾ 25.ವಣಿಕ 26.ಸಂಜೆ 27.ಲಕ್ಷ

ಎಡದಿಂದ ಬಲಕ್ಕೆ

1.ಶಾರದಾದೇವಿ 3.ಎರಡುಮುಖ 5.ಷರತ್ತು 7.ತಳ್ಳಿಹಾಕು 9.ಪದ್ಮಾಸನ 10.ಲಕ್ಷ್ಮೀಕಟಾಕ್ಷ 12.ತಾಸು 14.ಹರಿ 15.ಸ್ವಯಂವರ 17.ಸುಮಬಾಣ 19.ಸ್ಥಿರ 20. ತೆರೆ 21.ಕೋಳಿಕೆರಂಗ 23.ರಾಮಾಯಣ 24.ಜಯದೇವ 26.ಸಂಕುಲ 28. ಮಾನಸಪೂಜೆ 29.ಕ್ಷಯಕಾರಕ

ಪ್ರೇಕ್ಷಕರು ತಾಳ್ಮೆ ಬೆಳೆಸಿಕೊಳ್ಳುವುದು ಮುಖ್ಯ

ಸಂದರ್ಶನ: ಎಂ. ಸೂರ್ಯ ಪ್ರಸಾದ್

ಭರತನಾಟ್ಯಕ್ಕೆ ವಿಶಿಷ್ಟ ಕೊಡುಗೆಗಳನ್ನು ನೀಡಿ ದಂತಕತೆಯಾಗಿ ವಿಜೃಂಭಿಸಿದ ಆಚಾರ್ಯ ಪಾರ್ವತಿಕುಮಾರ್ ನಿಜಕ್ಕೂ ಆಚಾರ್ಯ ಪುರುಷರು. ಸರ್ಫೋಜಿ ಮಹಾರಾಜರ ಮರಾಠಿ ನಿರೂಪಣಂಗಳ ಬಗೆಗೆ ಸಂಶೋಧನೆಯನ್ನು ಮಾಡಿ ಅವುಗಳನ್ನು ನೃತ್ಯೀಕರಿಸಿದ ಶ್ರೇಯಸ್ಸಿಗೆ ಪಾತ್ರರಾದವರು. ನಂದೀಕೇಶ್ವರನ 'ಅಭಿನಯ ದರ್ಪಣಂ' ಶಾಸ್ತ್ರ ಗ್ರಂಥವನ್ನು ಕೂಲಂಕಷವಾಗಿ ಅಧ್ಯಯನ ಮಾಡಿ ಅದನ್ನೇ ಆಧಾರವಾಗಿಟ್ಟುಕೊಂಡು ಭರತನಾಟ್ಯದ ಸಂಯೋಜನೆಗಳನ್ನು ಮಾಡಿ ಸಾಧಿಸಿದವರು. ಅವರ ಶಿಷ್ಯೆ ಸಂಧ್ಯಾ ಪುರೇಚಾ ಭರತನಾಟ್ಯ ಕ್ಷೇತ್ರದ ಹಿರಿಯ ಕಲಾವಿದೆ.

ಗುರುಗಳ ಆದೇಶ ಮತ್ತು ಮಾರ್ಗದರ್ಶನದಲ್ಲಿ 'ಅಭಿನಯ ದರ್ಪಣಂ' ನ ಶ್ಲೋಕಗಳ ಸಮಗ್ರ ಅಧ್ಯಯನ ಕೈಗೊಂಡು ಅವುಗಳನ್ನು ಭರತನಾಟ್ಯಕ್ಕೆ ಅಳವಡಿಸಿದ ಮೊದಲ ಕಲಾವಿದೆ ಸಂಧ್ಯಾ, ಕರಣಗಳ ಬಗೆಗೆ ಸಂಶೋಧನೆ ಮಾಡಿ ಡಾಕ್ಟರೇಟ್ ಪಡೆದಿದ್ದಾರೆ. ಪ್ರಬುದ್ಧ ಕಲಾವಿದೆ, ಸಂಯೋಜಕಿ, ಶಿಕ್ಷಕಿ, ಸಂಘಟಕಿ ಪಾತ್ರಗಳಲ್ಲಿ ಮಿಂಚಿದ್ದಾರೆ. ದೇಶದ ಸಂಗೀತ, ನೃತ್ಯ, ನಾಟಕಾದಿ ಕಲೆಗಳ ಪ್ರಾತಿನಿಧಿಕ ಸಂಸ್ಥೆಯಾಗಿರುವ ದೆಹಲಿಯಲ್ಲಿರುವ ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಅಧ್ಯಕ್ಷೆಯಾಗಿ ಸಕ್ರಿಯರಾಗಿದ್ದಾರೆ. ಮಧ್ಯಪ್ರದೇಶ ಸರ್ಕಾರದ ಪ್ರತಿಷ್ಠಿತ 'ಕಾಳಿದಾಸ್ ಸಮ್ಮಾನ್'ಗೂ ಭಾಜನರಾಗಿದ್ದಾರೆ.

- **ನಿಮ್ಮ ಕಲಾಯಾನ ಆರಂಭಗೊಂಡಿದ್ದು ಹೇಗೆ?**

ನಮ್ಮ ನೃತ್ಯ ಶೈಲಿಯು ಒಂದು ಗಟ್ಟಿಯಾದ ಅರ್ಥಪೂರ್ಣ ಶಾಸ್ತ್ರೀಯತೆ, ಸಂಪ್ರದಾಯ ಹಾಗೂ ಪರಂಪರೆಯ ಮೇಲೆ ಸುಭದ್ರವಾಗಿ ಬೇರೂರಿದೆ. ನಾವು ಅದನ್ನು ಸಂರಕ್ಷಿಸುತ್ತಾ ಉಳಿಸಿ ಬೆಳೆಸಬೇಕು. ಸಾಂಪ್ರದಾಯಿಕ ಸಂಯೋಜನೆಯ ರಚನೆಗಳನ್ನು ಯಥಾವತ್ತಾಗಿ ಕಾಪಿಟ್ಟುಕೊಳ್ಳಬೇಕು. ಏನೇ ಆಗಲಿ, ಸಾಂಪ್ರದಾಯಿಕತೆಯನ್ನು ಕಡೆಗಣಿಸಬಾರದು. ಅವುಗಳ ಸಾರ ಮತ್ತು ಸ್ವಾರಸ್ಯವನ್ನು ಭವಿಷ್ಯದ ಪೀಳಿಗೆಯು ಅರ್ಥಮಾಡಿಕೊಳ್ಳುವ ಅವಕಾಶವನ್ನು ನಾವು ಕಸಿದುಕೊಳ್ಳಬಾರದು ಎಂದು ನಂಬಿರುವ ನಾನು ಅದನ್ನೇ ಮಾಡುತ್ತಿದ್ದೇನೆ. ಹಾಗಾಗಿ ನನಗೆ ಆತ್ಮ ಸಂತೋಷದ ಜೊತೆಗೆ ಅನೇಕ ರೀತಿಯಲ್ಲಿ ಅದರ ಸತ್ಫಲಗಳನ್ನು ಹೊಂದಿ ಅವುಗಳನ್ನು ಹಂಚುತ್ತಿದ್ದೇನೆ. ಭಾರತೀಯ ಜನಪದ ನೃತ್ಯಗಳನ್ನು ಕಲಿಯುವುದರೊಂದಿಗೆ ನನ್ನ ಕಲಾಯಾನ ಪ್ರಾರಂಭವಾಯಿತು. ನಂತರ ನೃತ್ಯ ಸಂಯೋಜಕ, ಸಂಶೋಧಕ, ಗುರು ಆಚಾರ್ಯ ಪಾರ್ವತಿಕುಮಾರ್ ಅವರ ಶಿಸ್ತುಬದ್ಧ ಮಾರ್ಗದರ್ಶನದಲ್ಲಿ ನನ್ನ ಸಾಧನೆ ಮುಂದುವರೆಯಿತು. ಭಾರತನಾಟ್ಯದ ಮುದ್ರೆಗಳು ಮತ್ತು ಭಂಗಿಗಳ ಮೂಲವನ್ನು ಮರುಶೋಧಿಸಲು ನಂದಿಕೇಶ್ವರನ 'ಅಭಿನಯಾ ದರ್ಪಣಂ' ಸೂಕ್ತ ಗ್ರಂಥವೆಂದು ಪರಿಗಣಿಸಿ ಪಟ್ಟುಬಿಡದೆ ಮಾಡಿದ್ದ ಆಚಾರ್ಯರ ಕೆಲಸವನ್ನು ಮುಂದವರೆಸಿ ಸುಮಾರು ಐದು ವರ್ಷಗಳಲ್ಲಿ ಅದರ 324 ಶ್ಲೋಕಗಳನ್ನು ಕಲಿತು ಪ್ರಸ್ತುತ ಪಡಿಸಿದೆ. 'ಭರತನಾಟ್ಯದಲ್ಲಿ ಆಂಗಿಕಾಭಿನಯ-ಸಿದ್ಧಾಂತ ಮತ್ತು ಅಭ್ಯಾಸ' ವಿಷಯವನ್ನು ಕುರಿತಾಗಿ ಪಿಎಚ್‌ಡಿ ಪದವಿ ಪಡೆದೆ.

'ಗುರು ದಕ್ಷಿಣ', 'ಅರ್ಥಶೃಂಗಾರ್', 'ಋತು ಸಂಹಾರ್' ಮುಂತಾದ ನನ್ನ ಬಹುಮಾನಿತ ಪ್ರಸ್ತುತಿಗಳು ಒಂದು ರೀತಿಯಲ್ಲಿ 'ಅಭಿನಯ ದರ್ಪಣಂ'ನ ವಿಸ್ತರಣೆಯೇ ಆಗಿದ್ದು, ಅದರ ಸಂಗೀತ, ಥೀಮ್ ಮತ್ತು ವೇಷಭೂಷಣಗಳು ಸಮಕಾಲೀನವಾಗಿತ್ತು. ಇವು ಕೇವಲ ಒಂದೆರಡು ಉದಾಹರಣೆಗಳಾಗಿವೆ. ನನ್ನ ಬಹುತೇಕ ಎಲ್ಲಾ ನಿರ್ಮಾಣಗಳು ಶಾಸ್ತ್ರದೊಂದಿಗೆ ಉಸಿರಾಡುತ್ತವೆ.



ಸಂಧ್ಯಾ ಪುರೇಚಾ

- **ಕಲಾ ಪ್ರದರ್ಶನಗಳಲ್ಲಿ ಬದಲಾವಣೆಗಳನ್ನು ನೀವು ಸ್ವಾಗತಿಸುತ್ತೀರಾ?**

ಪರಿವರ್ತನೆಯೇ ಜೀವನ. ಇದು ನಿರಂತರ ಸತ್ಯ. ಅದು ನಿಂತ ನೀರಾಗದೆ ಮರು ಮೌಲ್ಯಮಾಪನವಾಗುತ್ತಿರಬೇಕು ಮತ್ತು ಸಮಯದೊಂದಿಗೆ ರಿಫ್ರೆಶ್ ಆಗಬೇಕು! ಅಲಂಕಾರ ಶಾಸ್ತ್ರ ಅಥವಾ ಕಾವ್ಯಗಳಲ್ಲಿ ನಾವು ಔಚಿತ್ಯ ಮತ್ತು ಅನೌಚಿತ್ಯಗಳ ಅಧ್ಯಯನ ಮಾಡುವಂತೆಯೇ ಅದೇ ತತ್ವವನ್ನು ನೃತ್ಯಕ್ಕೂ ಅನ್ವಯಿಸಬೇಕು.

- **ಪ್ರೇಕ್ಷಕರು ಮತ್ತು ಕಲಾವಿದರ ಪ್ರತಿಕ್ರಿಯೆಗಳು ಮತ್ತು ಜವಾಬ್ದಾರಿಗಳು ಏನು?**

ಇಂದು ಪ್ರೇಕ್ಷಕರ ಪ್ರಮುಖ ಜವಾಬ್ದಾರಿಗಳಲ್ಲಿ ಒಂದು ತಾಳ್ಮೆ ಬೆಳೆಸಿಕೊಳ್ಳುವುದು. ಅವರು ತಮ್ಮನ್ನು ತಾವು ತಲ್ಲೀನಗೊಳಿಸುವ ಅನುಭವವನ್ನು ಆನಂದಿಸಬೇಕು. ಈಗಿನ ಕಾಲದ ಪ್ರೇಕ್ಷಕರು, ಸಹೃದಯಿಗಳು, ರಸಿಕರು ಬಹಳ ಜಾಣರು. ವಿವಿಧ ರಾಜ್ಯಗಳಲ್ಲಿ ನಾವು ಆಯೋಜಿಸಿರುವ ವಿವಿಧ ಕಾರ್ಯಕ್ರಮಗಳಿಗೆ ಅವರಿಂದ ಹೆಚ್ಚಿನ ಪ್ರತಿಕ್ರಿಯೆಯನ್ನು ಪಡೆಯುತ್ತಿದ್ದೇವೆ. ಕಲಾವಿದರು ತಮ್ಮ ಕಲಾ ಪ್ರಕಾರಗಳ ಮೂಲಕ ಉಂಟು ಮಾಡುವ ರಸವನ್ನು ಸಹೃದಯಿಗಳು ಸಂಪೂರ್ಣವಾಗಿ ಹೀರಿಕೊಳ್ಳುವಂತಾಗಬೇಕು. ಅವರು ತಮ್ಮನ್ನು ತಾವು ತಲ್ಲೀನಗೊಳಿಸುವ ಅನುಭವವನ್ನು ಆನಂದಿಸಬೇಕು. ರಸಿಕರು ಕೇವಲ ಕಾರ್ಯಕ್ರಮಗಳಿಗೆ ಹಾಜರಾಗುವುದನ್ನು ಮೀರಿ, ಕಲೆಯಲ್ಲಿ ಆಸಕ್ತಿಯು ಬೆಳೆಯುವಂತೆ ಕಲಾವಿದರು ತಮ್ಮ ಕಾರ್ಯಕ್ರಮಗಳನ್ನು ಯೋಚಿಸಿ ಯೋಜಿಸಬೇಕು. ಅವು ಆ ಕಲೆಯ ಬಗೆಗೆ ಮತ್ತಷ್ಟು ತಿಳಿದುಕೊಳ್ಳಲು ಸ್ಫೂರ್ತಿ ಮತ್ತು ಅವಕಾಶವನ್ನು ಉಂಟು ಮಾಡುವಂತಹ ಪ್ರಸ್ತುತಿಗಳಾಗಬೇಕು. ಇಂದಿನ ವೇಗದ ಗತಿಯ ಗ್ರಾಹಕ-ಚಾಲಿತ ಜಗತ್ತಿನಲ್ಲಿ, ಮನರಂಜನೆ ಹಾಗೂ ಮನೋವಿಕಾಸವೂ ಸೇರಿದಂತೆ ಬಾಯಿ ಮಾತು ಮತ್ತು ಪ್ರಚಾರ-ಪ್ರಸಾರ ಪ್ರಬಲ ಪಾತ್ರ ವಹಿಸುತ್ತದೆ. ಆದ್ದರಿಂದ, ನಿರ್ಣಾಯಕ ಜವಾಬ್ದಾರಿ ಅಂದರೆ 'ಹಂಚಿಕೊಳ್ಳುವುದು' ವಾಟ್ಸ್‌ಆ್ಯಪ್ ಸಂದೇಶ ಕಾಡ್ಗಿಚ್ಚಿನಂತೆ ಹರಡಿ ಪ್ರಸಾರ-ಪ್ರಚಾರವಾಗುವಂತೆ, ಕಲೆಗಳ ಬಗ್ಗೆ ಮೆಚ್ಚುಗೆಯೂ ರವಾನಿಸಲ್ಪಡಬೇಕು. ನಮ್ಮ ಸಾಂಸ್ಕೃತಿಕ ಪರಂಪರೆಯ ಬಗ್ಗೆ ಮೆಚ್ಚುಗೆಯನ್ನು ಉಳಿಸಿಕೊಳ್ಳುವಲ್ಲಿ ಮತ್ತು ಬೆಳೆಸುವಲ್ಲಿ ಬಾಯಿಮಾತು ಪ್ರಬಲ ಪಾತ್ರ ವಹಿಸುತ್ತದೆ. ನೀವು ಏನನ್ನಾದರೂ ಆನಂದಿಸಿದರೆ, ಅದಕ್ಕೆ ನಿಮ್ಮ ಸ್ನೇಹಿತರನ್ನೂ ಕರೆತನ್ನಿ ಮತ್ತು ಹೆಚ್ಚಿನ ಪ್ರದರ್ಶನಗಳಿಗೆ ಅವರನ್ನು ಪರಿಚಯಿಸಿ.

- **ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ನಿರ್ವಹಿಸುತ್ತಿರುವ ಪಾತ್ರಗಳ ಬಗೆಗೆ ಹೇಳಿ?**

ಬಹಳ ಉತ್ತೇಜನಕಾರಿಯಾಗಿದೆ. ಭಾರತದ ದೂರದ ಮೂಲೆಗಳಿಗೆ ನಮ್ಮ ಕಲಾ ಪ್ರಕಾರಗಳನ್ನು ಯಶಸ್ವಿಯಾಗಿ ಪರಿಚಯಿಸಿ ಸ್ಥಳೀಯ ಕಲಾವಿದರೊಂದಿಗೆ ಆಳವಾದ, ವೈಯಕ್ತಿಕ ಸಂಪರ್ಕವನ್ನು ಸ್ಥಾಪಿಸಲು ಸಾಧ್ಯವಾಗಿದೆ. ಅಪರೂಪದ ಇತಿಹಾಸವುಳ್ಳ ವಿವಿಧ ಕಾರ್ಯಕ್ರಮಗಳು ಮತ್ತು ಪ್ರದರ್ಶನಗಳನ್ನು ಆಯೋಜಿಸಲು ಸರ್ಕಾರಗಳು ಸಕ್ರಿಯವಾಗಿ ಸಹಕರಿಸುತ್ತಿವೆ.

ಕಡುಬು ಮತ್ತು ಗರಿಗಳ ಭಾನುವಾರ



ಕೊಳುಕಟ್ಟ

ಎಫ್.ಎಂ.ನಂದಗಾವ

ಗಣೇಶನ ನೈವೇದ್ಯದ ತಿಂಡಿಗಳಲ್ಲಿ ಸಿಹಿ ಹೂರಣ ತುಂಬಿದ ಅರ್ಧ ಚಂದ್ರಾಕಾರದ ಕಡುಬು ಮತ್ತು ತಲೆ ತಿರುಚಿದ ಚೆಂಡಿನಾಕಾರದ ಮೋದಕಕ್ಕೆ ಅಗ್ರಸ್ಥಾನ. ಗಣೇಶನಿಗೆ ಪ್ರಿಯವಾದ ಕಡುಬು ಕ್ರೈಸ್ತರ ಧಾರ್ಮಿಕ ಆಚರಣೆಯಲ್ಲೂ ಸೇರಿರುವುದು ಅಚ್ಚರಿ ಮತ್ತು ಆಸಕ್ತಿಕರ. ಯುರೋಪಿನ ಪೌರಾತ್ಯ ಸಂಪ್ರದಾಯದ ಕ್ರೈಸ್ತರು, ಗರಿಗಳ ಭಾನುವಾರದ ಹಿಂದಿನ ದಿನ ಶನಿವಾರವನ್ನು ಸಂತ ಲಾಸರನ ಶನಿವಾರವೆಂದು ಆಚರಿಸುತ್ತಾರೆ. ಅಂದು ಸಿಹಿ ಹೂರಣ ತುಂಬಿದ 'ಲಾಸರಿಕ' ಬನ್ನುಗಳನ್ನು ಸವಿಯುತ್ತಾರೆ. ಸಿರಿಯನ್ ಸಂಪ್ರದಾಯದ ಕೇರಳದ ಸಿರಿಯನ್ ಕ್ರೈಸ್ತರು, ಇಂಥ ಬನ್ನುಗಳ ಬದಲು ಸಿಹಿ ಕಡುಬಿನೊಂದಿಗೆ 'ಲಾಸರನ ಶನಿವಾರ'ವನ್ನು ಆಚರಿಸುತ್ತಾರೆ!

ಕ್ರೈಸ್ತರಿಗೆ ಯೇಸುಕ್ರಿಸ್ತರ ಜನ್ಮೋತ್ಸವದ ಕ್ರಿಸ್ಮಸ್ ನಂತರದ ಎರಡನೇ ದೊಡ್ಡ ಹಬ್ಬ ಎಂದರೆ ಈಸ್ಟರ್. ಈ ಈಸ್ಟರ್ ಹಬ್ಬವು ಯೇಸು ಸಾವಿನ ಮೇಲೆ ಜಯ ಸಾಧಿಸಿ ಮೃತ್ಯುಂಜಯನಾದುದನ್ನು ಸಾರುವ ಸಂಭ್ರಮದ ಹಬ್ಬ. ಯೇಸು ಪುನರುತ್ಥಾನದ ಈ ಈಸ್ಟರ್ ಹಬ್ಬದ ಮೊದಲು ಬರುವ ವಿಭೂತಿ ಬುಧವಾರದಿಂದ ಗರಿಗಳ ಭಾನುವಾರದವರೆಗಿನ ಹಿಂದಿನ ನಲವತ್ತು ದಿನ ಕ್ರೈಸ್ತರು ತಪಸ್ಸು (ಲೆಂಟ್) ಕಾಲವನ್ನು ಆಚರಿಸುತ್ತಾರೆ. ಕ್ರಿಸ್ಮಸ್ ಹಬ್ಬವಾದ ಮೇಲೆ ಸಾಧಾರಣ ಕಾಲದ ಕೆಲವು ವಾರಗಳ ನಂತರ ಬರುವ ಈ ತಪಸ್ಸು ಕಾಲದಲ್ಲಿ, ಯೇಸು ತನ್ನ ಜೀವಿತದ ಕೊನೆಯ ಅವಧಿಯಲ್ಲಿ ಪಟ್ಟಪಾಡು, ಶಿಲುಬೆ ಮರಣ ಮತ್ತು ಮರಣದ ಮೇಲೆ ಸಾಧಿಸಿದ ವಿಜಯದ ಧ್ಯಾನ ನಡೆಯುತ್ತದೆ.

ಇದು ಯೇಸುವಿನ ಪುನರುತ್ಥಾನದ ಹಬ್ಬದ ಆಚರಣೆಯ ಆಧ್ಯಾತ್ಮಿಕ ಸಿದ್ಧತೆಯ ಕಾಲ. ಶುಭ ಶುಕ್ರವಾರ ಯೇಸುವಿನ ಶಿಲುಬೆ ಮರಣದ ನಂತರ ಸಮಾಧಿ ಮಾಡಲಾಗುತ್ತದೆ. ಮೂರನೇಯ ದಿನ ಯೇಸು ಸಮಾಧಿಯಿಂದ ಎದ್ದು ಬರುತ್ತಾರೆ. ಅದರ ಆಚರಣೆಯೇ ಈಸ್ಟರ್. ಶುಭ ಶುಕ್ರವಾರದ ವಾರವನ್ನು ಪವಿತ್ರ ವಾರವೆಂದು ಪರಿಗಣಿಸಲಾಗುತ್ತದೆ. ಆ ವಾರದ ಆರಂಭದ ಭಾನುವಾರವನ್ನು ಗರಿಗಳ ಭಾನುವಾರವೆನ್ನುತ್ತಾರೆ.

ರೋಮನ್ ಆಡಳಿತಗಾರರ ದಬ್ಬಾಳಿಕೆ, ಧಾರ್ಮಿಕ ಮುಖಂಡರ ಶೋಷಣೆಗಳಿಂದ ನಲುಗಿದ್ದ ಸಾಮಾನ್ಯ ಯಹೂದಿಗಳಿಗೆ, 'ನಾವೆಲ್ಲಾ ಸೋದರರು, ದೇವರ ಮಕ್ಕಳು ಹಾಗೂ ತನ್ನಂತೆಯೇ ಪರರನ್ನು ಪ್ರೀತಿಸಬೇಕು' ಎಂದು ಬೋಧಿಸಿದ ಯೇಸು ಅರಸನಂತೆ ಕಂಡಿದ್ದ. ಶಿಲುಬೆ ಮರಣದ ಮೊದಲು ಯೇಸು ಜೆರುಸಲೇಮಿಗೆ ಬಂದಾಗ ಖರ್ಜೂರದ ಮರದ ಗರಿಗಳನ್ನು ಹಿಡಿದುಕೊಂಡು 'ಅರಸನಿಗೆ ಶುಭವಾಗಲಿ' ಎಂದು ಜನ ಅವರನ್ನು ಆದರಿಸಿದ ಘಟನೆಯ ಸ್ಮರಣೆಯಲ್ಲಿ, ಗರಿಗಳ ಭಾನುವಾರದಂದು ತೆಂಗಿನಗರಿಗಳನ್ನು ಹಿಡಿದುಕೊಂಡು ಕ್ರೈಸ್ತರು ಚರ್ಚಿನ ಆವರಣದಲ್ಲಿ ಮೆರವಣಿಗೆ ಮಾಡುತ್ತಾರೆ.

ಜುಡಾಯದ ಬೆಥಾನಿಯ ಊರಿನ ಮರಿಯ ಮತ್ತು ಮಾರ್ತ ಹಾಗೂ ಲಾಸರ್ ಎಂಬುವವರು ಯೇಸುವಿಗೆ ಆಪ್ತರಾಗಿದ್ದರು. ಅಸ್ವಸ್ಥ ಲಾಸರ್ ಮೃತಪಟ್ಟಿದ್ದ. ಅವನನ್ನು ಸಮಾಧಿ ಮಾಡಲಾಗಿತ್ತು. ಸಮಾಧಿಯ ಹತ್ತಿರ ಬಂದ ಯೇಸು ದೇವರಿಗೆ ಪ್ರಾರ್ಥನೆ ಸಲ್ಲಿಸಿ 'ಲಾಸರನೆ ಹೊರಗೆ ಬಾ' ಎಂದು ಕೂಗಿದರು. ಆಗ ಆತ ಎದ್ದು ಬಂದಿದ್ದ. ಈ ಪ್ರಸಂಗದ ಸ್ಮರಣೆಯಲ್ಲಿ ಕೆಲವು ಕ್ರೈಸ್ತ ಪಂಗಡಗಳು, ಗರಿಗಳ ಭಾನುವಾರದ ಹಿಂದಿನ ಶನಿವಾರನ್ನು 'ಲಾಸರನ ಶನಿವಾರ'ವೆಂದು ಆಚರಿಸುತ್ತವೆ. ಈ ಕ್ರೈಸ್ತರ ಪಂಚಾಂಗದಲ್ಲಿ ಧ್ಯಾನ, ಪ್ರಾರ್ಥನೆ, ಸಾತ್ವಿಕ ಜೀವನ ಮತ್ತು ಉಪವಾಸಗಳ ತಪಸ್ಸು ಕಾಲ ಹಾಗೂ ಪವಿತ್ರ ವಾರದ ಶೋಕಾಚರಣೆ ಮಧ್ಯೆ ಲಾಸರನ ಶನಿವಾರ ಮತ್ತು ಗರಿಗಳ ಭಾನುವಾರಗಳು ವಿಶೇಷತೆಯನ್ನು ಹೊಂದಿವೆ. ಆ ಸಮಯ ಯೇಸು ಅನುಭವಿಸಿದ ಯಾತನೆ, ಸಾವು ಮತ್ತು ಪುನರುತ್ಥಾನಗಳ ಮುನ್ನುಡಿಯಂತಿದೆ.



ಲಾಸರಕಿಯಾ

ಗ್ರೀಸ್ ಮತ್ತು ಸೈಪ್ರಸ್‌ಗಳಲ್ಲಿ ಸಮಾಧಿ ಬಟ್ಟೆ ತೊಟ್ಟ ಲಾಸರನನ್ನು ಹೋಲುವ ಸಿಹಿ ಬ್ರೆಡ್/ಬನ್ (ಲಾಸರಕಿಯಾ) ಗಳನ್ನು ಸವಿಯುತ್ತಾರೆ. ತಪಸ್ಸು ಕಾಲವಾದ್ದರಿಂದ 'ಲಾಸರಕಿಯಾ' ಬನ್ ತಯಾರಿಸಲು ಸಕ್ಕರೆ, ಆಲಿವ್ ಎಣ್ಣೆ, ಗೋದಿ ಹಿಟ್ಟು, ಅಕ್ರೂಟ ಕಾಯಿ, ಒಣದ್ರಾಕ್ಷಿ, ಲವಂಗ, ಏಲಕ್ಕಿ, ಚಾಕೋಲೇಟ್ ತುಂಡುಗಳು ಮತ್ತು ಚಕ್ಕೆ (ದಾಲ್ಚಿನ್ನಿ) ಪುಡಿಬೇಕು. ಗೋದಿ ಹಿಟ್ಟಿನ ಕಣಕವನ್ನು ಅಂಡಾಕಾರದಲ್ಲಿ ತಟ್ಟಿ, ಮಧ್ಯೆ ಚಾಕೋಲೇಟ್ ತುಂಡುಗಳು, ಒಣದ್ರಾಕ್ಷಿ, ಸಕ್ಕರೆ, ಏಲಕ್ಕಿ, ಚಕ್ಕೆ ಮತ್ತು ಅಕ್ರೋಟ ಕಾಯಿ ಪುಡಿಗಳ ಮಿಶ್ರಣವನ್ನು ತುಂಬಿ ಮುಚ್ಚುತ್ತಾರೆ. ನಂತರ ಕೈ ಕಟ್ಟಿದ ಆಕಾರದಲ್ಲಿ ಎರಡೂ ಬದಿಗೆ ಕಣಕದ ತುಂಡುಗಳನ್ನು ಅಂಟಿಸುತ್ತಾರೆ. ಕಣ್ಣು ಇರಬೇಕಾದ ಜಾಗದಲ್ಲಿ ಎರಡು ಲವಂಗಗಳನ್ನು ಅಂಟಿಸುತ್ತಾರೆ. ಓವನ್‌ನಲ್ಲಿ ಬೇಯಿಸಿದಾಗ 'ಲಾಸರಕಿಯಾ' ಸವಿಯಲು ಸಿದ್ಧವಾಗುತ್ತದೆ. ಅದೊಂದು ಬಗೆಯಲ್ಲಿ ಆಧ್ಯಾತ್ಮಿಕ ಸಾಂತ್ವನ ನೀಡುವ ತಿಂಡಿ ಎಂದು ಪರಿಗಣಿಸಲಾಗುತ್ತದೆ.

ಗ್ರೀಸ್ ಕ್ರೈಸ್ತರಂತೆ ಕೇರಳದ ಪೌರಾತ್ಯ ಸಿರಿಯನ್ ಸಂಪ್ರದಾಯದ ಸಂತ ತೋಮಾಸ್ ಕ್ರೈಸ್ತರು, ಲಾಸರಸ್ ಶನಿವಾರದಂದು ಅಕ್ಕಿ ಹಿಟ್ಟಿನ ಕಣಕದಲ್ಲಿ ಬೆಲ್ಲ ತೆಂಗಿನಕಾಯಿ ತುರಿಯನ್ನು ಬಳಸಿ ಕಡುಬನ್ನು ಮಾಡಿಕೊಂಡು ತಿನ್ನುತ್ತಾರೆ. ಅದನ್ನು 'ಲಾಸರಕಿಯಾ' ಎಂದು ಕರೆಯದೇ ಮಲಯಾಳ ಭಾಷೆಯಲ್ಲಿ ಅದನ್ನು ಕೊಳುಕಟ್ಟ (ಕಡುಬು) ಎಂದು ಹೆಸರಿಸುತ್ತಾರೆ. ಹೀಗಾಗಿ ಲಾಸರಸ್ ಶನಿವಾರವನ್ನು 'ಕೊಳುಕಟ್ಟ ಶನಿವಾರ' ಎಂದು ಕರೆಯುತ್ತಾರೆ.

ಮೊದಲು ಅಕ್ಕಿಹಿಟ್ಟಿಗೆ ನೀರು ಹಾಕಿ ನಾದಿ, ಕಣಕವನ್ನು ಸಿದ್ಧಪಡಿಸಲಾಗುತ್ತದೆ. ಕಣಕವನ್ನು ವೃತಾಕಾರದಲ್ಲಿ ತಟ್ಟಿ, ನಡುವೆ ಬೆಲ್ಲದ ಪಾಕದಲ್ಲಿ ತುರಿದ ಕೊಬ್ಬರಿಯನ್ನು ಹಾಕಿ ತಯಾರಿಸಿದ ಹೂರಣವನ್ನು ತುಂಬಿ ಮುಚ್ಚುತ್ತಾರೆ. ಅದು ಉಂಡೆಯ ಆಕಾರ ಪಡೆಯುತ್ತದೆ. ಹಬೆಯಲ್ಲಿ ಬೇಯಿಸಿದ ಈ ಕಡುಬು, ಕೇರಳದ ಸಿರಿಯನ್ ಕ್ರೈಸ್ತರಿಗೆ ಆಧ್ಯಾತ್ಮಿಕ ಸಾಂತ್ವನ ನೀಡುವ ತಿಂಡಿಯ ಸ್ವರೂಪ ಪಡೆದಿದೆ.

ಕಾಡುವ ಕಾಡು ಹಣ್ಣುಗಳು ರುಚಿ



ಬೀರಣ್ಣ ನಾಯಕ ಮೊಗಟಾ

ಬೇಸಿಗೆಯಲ್ಲಿ ರುಚಿಕರ ಕಾಡು ಹಣ್ಣುಗಳಿಗಾಗಿ ಹುಡುಕಾಟ ನಡೆಸುವುದು ಸಾಮಾನ್ಯ. ಕಾಡುಗಳಲ್ಲಿ ಸಿಗುವ ಹಣ್ಣುಗಳಿಗೆ ಬಲು ಬೇಡಿಕೆಯೂ ಇರುತ್ತದೆ. ಬೆಟ್ಟ, ಗುಡ್ಡ, ನದಿ, ಜಲಪಾತಗಳಿರುವ ಮಲೆನಾಡಿನಂತಹ ಊರುಗಳಿಗೆ ಹೊಂದಿಕೊಂಡಿರುವ ಕಾಡುಗಳಲ್ಲಿ ಬೇಸಿಗೆ ಬಿಸಿ ತಣಿಸಲೆಂಬಂತೆ ಫಲ ಬಿಡುವ ಕಾಡು ಹಣ್ಣುಗಳಿಗೆ ಬರವಿಲ್ಲ.

ಅರಣ್ಯ ಜಿಲ್ಲೆ ಎಂದೇ ಹೆಸರಾಗಿರುವ ಉತ್ತರ ಕನ್ನಡ, ದೇಶದಲ್ಲಿಯೇ ವಿಶಿಷ್ಟವಾದದ್ದು. ಕರಾವಳಿ, ಮಲೆನಾಡು, ಅರೆ ಮಲೆನಾಡು, ಅರೆ ಬಯಲುಸೀಮೆಗಳಿಂದ ಆವೃತವಾದ ಈ ಜಿಲ್ಲೆಯ ಜನರ ಬದುಕು ಕೂಡ ವಿಭಿನ್ನವಾದದ್ದು. ಮಾರ್ಚ್, ಏಪ್ರಿಲ್, ಮೇ ತಿಂಗಳು ಬಂತೆಂದರೆ ಬಾಲಕರಿಂದ, ವೃದ್ಧರ ವರೆಗೂ ಕಾಡುವ ಕಾಡು ಹಣ್ಣುಗಳು ಬಾಯಲ್ಲಿ ನೀರೂರಿಸಿ ಕಾಡು ಮೇಡುಗಳನ್ನು ತಿರುಗಾಡಿಸದೆ ಬಿಡವು. ಮುಳ್ಳಣ್ಣು, ಕರಿಮುಳ್ಳಣ್ಣು, ಕಡ್ಲಣ್ಣು, ಕವಳೆಹಣ್ಣು, ಉಲಗೆಹಣ್ಣು, ಗುಡ್ಡೆಗೇರು, ಸಂಪಿಗೆಹಣ್ಣು, ಕಳ್ಳಿಹಣ್ಣು, ಕಾರಿಹಣ್ಣು, ಮುರುಗಲಹಣ್ಣು, ಮುಳ್ಳುಂಜಿಹಣ್ಣು, ನೇರಳೆಹಣ್ಣು, ಚಳ್ಳೆಹಣ್ಣು, ಈಚಲಹಣ್ಣು, ಇಳ್ಳೆಹಣ್ಣು, ನರಕ್ಲಹಣ್ಣು... ಹೀಗೆ. ಇವೆಲ್ಲ ಮನುಷ್ಯರಿಗೆ ಹೇಗೆ ಇಷ್ಟವೊ ಹಾಗೆ ಪಕ್ಷಿ ಪ್ರಾಣಿಗಳಿಗೂ ಕೂಡ.


ಈ ಹಣ್ಣುಗಳನ್ನು ನೇರವಾಗಿ ತಿನ್ನುವುದರ ಜೊತೆಗೆ ಬೇರೆಬೇರೆ ಖಾದ್ಯವನ್ನಾಗಿ ಮಾಡಿ ತಿನ್ನುವುದು ಉಂಟು. ಬಹುತೇಕ ಈ ಎಲ್ಲ ಕಾಡು ಹಣ್ಣುಗಳು ಔಷಧಿಯ ಗುಣ ಹೊಂದಿದ್ದು ಕೆಲವನ್ನು ಜೂಸ್ ಮಾಡಿ ಕುಡಿಯುತ್ತಾರೆ. ಬೇರೆಬೇರೆ ಪದ್ಧತಿಯ ಮೂಲಕ ಹಲವನ್ನು ವರ್ಷಕಾಲದವರೆಗೆ ಇಟ್ಟರೆ, ಇನ್ನು ಕೆಲವು ಅಡುಗೆಯಲ್ಲಿ ಬಳಸಲ್ಪಡುತ್ತವೆ. ಈ ಎಲ್ಲಾ ಕಾಡು ಹಣ್ಣುಗಳು ದೇಹಕ್ಕೆ ತಂಪು, ಆರೋಗ್ಯಕ್ಕೆ ಹಿತ. ಈ ಕಾಡು ಹಣ್ಣುಗಳನ್ನು ಸಂಗ್ರಹಿಸಿ ಬಸ್ ನಿಲ್ದಾಣ, ಪೇಟೆ ಹಾಗೂ ಮನೆ ಮನೆಗೆ ತಿರುಗಿ ಮಾರಾಟ ಮಾಡುವುದನ್ನು ಕಾಣಬಹುದು. ಆದರೆ ಬೆಲೆಯಲ್ಲಿ ಯಾವ ನಿಖರತೆಯೂ ಇಲ್ಲ.

ಮೊದಲ ಓದು

ಓದುಗರ ಒಳಗನ್ನು ಕಲಕುವ ಕೃತಿ

ನಮ್ಮ ನಿಮ್ಮ ಮನೆಗಳಲ್ಲಿ ನಡೆಯುವ ಸಂಗತಿಗಳೇ. ಆದರೆ ಆ ಸಂಗತಿಯನ್ನು ಓದುವಾಗ ಹೌದೌದು... ಇದು ನಮ್ಮ ಸುತ್ತಲಿನ ಕತೆಯೇ. ಆದರೆ ಕತೆ ಮುಗಿದ ಮೇಲೆ ಏನಾಯ್ತು ಎಂಬ ಪ್ರಶ್ನೆಯ ಗುಂಗಿಹುಳ ಬಿಡುವುದು ಈ ಸಂಕಲನದ ಪ್ರತಿ ಕತೆಯ ವಿಶೇಷ. ಒಂದೇ ಗುಕ್ಕಿನಲ್ಲಿ ಪುಸ್ತಕ ಓದಿ ಮುಗಿಸುವಂಥದ್ದಲ್ಲ. ಪ್ರತಿ ಕತೆಯೂ ಗುಂಗು ಹಿಡಿಸಿ, ನಡುವೆ ಒಂದಷ್ಟು ಸಮಯ ಬೇಡುತ್ತದೆ. ಕತೆಯಾಗಿ ಕಾಡುವುದಷ್ಟೇ ಅಲ್ಲ, ಅದರ ಮುಂದಿನ ಕತೆಯೇನು ಎಂಬಂತೆ ತರ್ಕಕ್ಕೆ ಒಡ್ಡುತ್ತದೆ.

ಕತೆಗಳು ಮಾಡಬೇಕಾದ ಕೆಲಸವೇ ಅದು. ಒಂದು ಕಥನ, ನಿಮ್ಮೊಟ್ಟಿಗೆ ಸಾಗಿ, ಗುಕ್ಕನೆ ನಿಂತು, ಇಲ್ಲಿಂದ ಮುಂದಿನ ದಾರಿ ನಿನ್ನದು ಎಂದು ಬಿಟ್ಟುಬಿಡುವಂಥ ಅಂತ್ಯಗಳು ಇಲ್ಲಿಯ ಕತೆಗಳಿಗಿವೆ. ಪುಸ್ತಕದ ಪ್ರತಿ ಕತೆಯೂ ಒಂದು ನಿಡಿದಾದ ಉಸಿರನ್ನು ಆಚೆ ಹಾಕುವಂತೆ ಮಾಡುತ್ತದೆ. ಅಲ್ಲಿಂದಲೇ ಕತೆ ನಿಮ್ಮೊಂದಿಗೆ ಸಂವಾದಿಯಾಗುತ್ತ ನಡೆಯುತ್ತದೆ. ಮೊಬೈಲ್ ಫೋನಿನ ಸ್ಕ್ರೀನಿನಲ್ಲಿ ಸಮಾಧಾನ ಹುಡುಕುವ ನಮಗೆ ಮನುಷ್ಯ ಸಹಜ ಸ್ವಭಾವ ಮತ್ತು ಬಾಂಧವ್ಯಗಳ ಸ್ವರೂಪ ಬದಲಾಗುತ್ತಿರುವ ಆತಂಕದೊಡನೆ ಮುಖಾಮುಖಿಯಾಗಿಸುತ್ತವೆ. ಸಾಮಾಜಿಕ ಜಾಲತಾಣಗಳಲ್ಲಿ ಸಿಗುವ ಬೆಂಬಲವನ್ನೇ ಬಲವೆಂದುಕೊಳ್ಳುತ್ತ ಮನುಜ ಸಹಜ ಅಂತಃಕರಣೆಯಿಂದ, ಸಹಾನುಭೂತಿಯಿಂದ ದೂರವಾಗುವ ಕತೆಗಳು ನಮ್ಮ ಒಳಗನ್ನು ಕಲಕುತ್ತವೆ. ಮನುಷ್ಯ ಸಹಜ ಈರ್ಷೆ, ಪ್ರೀತಿ, ಪ್ರೇಮ, ವಾತ್ಸಲ್ಯ, ಮಮತೆ ಮತ್ತು ಮನುಷ್ಯತ್ವಗಳ ದಟ್ಟವಾದ ಕತೆಗಳು ಓದುಗರನ್ನು ಹಿಡಿದಿಡುತ್ತವೆ.



ಪು: 138 ₹170

ಇಲ್ಲಿಂದ ಮುಂದೆಲ್ಲ ಕಥೆ
ಲೇ: ರಘುನಾಥ ಚಹ
ಪ್ರ: ಅಂಕಿತ ಪ್ರಕಾಶನ
ಸಂ: 90191 90502

ಪಶ್ಚಿಮ ಘಟ್ಟಗಳ ವಿಪತ್ತಿನ ಕಥನ

ಮನುಷ್ಯ ತನ್ನ ದುರಾಸೆ, ಹಪಾಹಪಿ, ನಾನಾ ಕಾರಣಗಳಿಂದ ಪ್ರಕೃತಿಯನ್ನು ಆಪೋಶನ ತೆಗೆದುಕೊಂಡ, ತೆಗೆದುಕೊಳ್ಳುತ್ತಿರುವ ದುರಂತ ಕಥನಗಳ ಸರಣಿಯನ್ನೊಳಗೊಂಡ ಕೃತಿ ಇದು. ಪಶ್ಚಿಮ ಘಟ್ಟಕ್ಕೆ ಬಂದೊದಗಿದ ವಿಪತ್ತಿನ ಬಗ್ಗೆ ಲೇಖಕರ ಆತಂಕ, ಕಾಳಜಿ ಇಲ್ಲಿ ವ್ಯಕ್ತವಾಗಿದೆ. ಸರ್ಕಾರದ ಯೋಜನೆಗಳು, ಅಭಿವೃದ್ಧಿ ಹೆಸರಿನಲ್ಲಿ ಪ್ರಕೃತಿ ಮೇಲಾಗುತ್ತಿರುವ ದೌರ್ಜನ್ಯ, ಅದರಿಂದಾಗುವ ಪರಿಣಾಮ, ಒಂದು ಜೀವಿ ಅಳಿದರೆ, ಅಥವಾ ಸಂಖ್ಯೆ ಹೆಚ್ಚಾದರೆ ಪರಿಸರದ ಸಮತೋಲನದ ಏರುಪೇರಾಗುವ ಬಗೆ, ಆಹಾರ ಸರಪಳಿಯಲಿ ಮಾನವನ ಹಸ್ತಕ್ಷೇಪ, ಅವೈಜ್ಞಾನಿಕ ಪ್ರಾಣಿ ಸಂರಕ್ಷಣೆ, ಮಾನವ- ವನ್ಯಜೀವಿ ಸಂಘರ್ಷ, ಅದಕ್ಕಿರುವ ಪರಿಹಾರೋಪಾಯಗಳ ಮೇಲೆ ಇಲ್ಲಿನ ಲೇಖನಗಳು ಬೆಳಕು ಚೆಲ್ಲುತ್ತವೆ.

'ಹಾರ್ಬೆಕ್ಕಿನ ಕಟ್ಟ ಕಡೆಯ ಸ್ವಗತ' ಎನ್ನುವ ಮೊದಲ ಲೇಖನ ಸೂಕ್ಷ್ಮ ಓದುಗನ ಎದೆಗೆ ನಾಟುತ್ತದೆ. ತನ್ನ ನಾಲಗೆ ಚಪಲಕ್ಕಾಗಿ ಒಂದು ಜೀವಿಯನ್ನು ನಿರ್ವಂಶ ಮಾಡಿದ ಮನುಷ್ಯನ ದುರಾಸೆಯ ಪರಿಚಯವಾಗುತ್ತದೆ. ಹಾರ್ಬೆಕ್ಕು ತನ್ನ ಸ್ವಗತ ಹೇಳಿ ಮುಗಿಸುವಾಗ ಮನಸ್ಸು ಆರ್ದ್ರಗೊಳ್ಳುತ್ತದೆ. ಓದಿಸಿಕೊಂಡು ಹೋಗುವ ಇಂತಹ ಗುಣಗಳು ಇಲ್ಲಿನ ಎಲ್ಲಾ ಲೇಖನಗಳಲ್ಲಿ ಇವೆ. ಸರಳ ಭಾಷೆ ಹಾಗೂ ವಿವರಣೆಗಳು ಓದುಗನಿಗೆ ಆಪ್ತವಾಗುವಂತಿದೆ.

ಜಾನುವಾರುಗಳಿಗೆ ಬಳಸುವ ರೋಗ ನಿರೋಧಕದಿಂದ ಹದ್ದುಗಳು ಕಾಣೆಯಾದ ಬಗ್ಗೆ ಇರುವ ಲೇಖನ ಕುತೂಹಲ ಮೂಡಿಸುತ್ತದೆ. ಮನುಷ್ಯ ಮುಟ್ಟಿದ್ದೆಲ್ಲವೂ ವಿನಾಶ ಎನ್ನುವ ಭಾವ ಓದುಗನ ಮನಸ್ಸಿನಲ್ಲಿ ಮೂಡುವುದಲ್ಲದೆ, ಪರಿಸರದ ಸಂರಕ್ಷಣೆಗಾಗಿ ತಾನೇನು ಮಾಡಬಹುದು ಎನ್ನುವ ಪ್ರಜ್ಞೆಯ ಬೀಜವನ್ನೂ ಬಿತ್ತುತ್ತದೆ. ಸೂಕ್ಷ್ಮ ಪಶ್ಚಿಮ ಘಟ್ಟದ ಮೌನ ರೋದನೆಗೆ ಪುಸ್ತಕ ಕಿವಿಯಾಗುತ್ತದೆ. ಆನೆ, ಹುಲಿ ಕಾರಿಡಾರ್ ಯೋಜನೆಯ ಅಪಾಯಗಳು, ಅರಣ್ಯ ಇಲಾಖೆಯ ಪ್ರಜ್ಞಾಹೀನ ಕೆಲಸಗಳು, ಅರಣ್ಯ ಸಂರಕ್ಷಣೆ ಕಾಯ್ದೆಯ ಸಮಸ್ಯೆಗಳು.. ಇವೆಲ್ಲವುಗಳು ಕಡೆಯದಾಗಿ ನಮಗೆ ಮಾರಕವಾಗುತ್ತದೆ ಎನ್ನುವುದಕ್ಕೆ ಈ ಪುಸ್ತಕ ಓದಬೇಕು. ಪಶ್ಚಿಮ ಘಟ್ಟದ ನೋವನ್ನೂ ನೀವೂ ಕೇಳಬೇಕು.



ಪು: 132 ₹150

ಸೋಲುತಿದೆ ಸಹ್ಯಾದ್ರಿ
ಲೇ: ಅಖಿಲೇಶ್ ಚಿಪ್ಪಳಿ
ಪ್ರ: ಭೂಮಿ ಬುಕ್ಸ್
ಸಂ: 94491 77628

ವಿದೇಶಿ ಯಾನದ ಮೆಲುಕು

ದುಬೈನ ಶ್ರೀಮಂತಿಕೆ, ಬಾಲಿಯ ದೇವಾಲಯಗಳು, ಸಿಂಗಪುರದ ಗಗನಚುಂಬಿ ಕಟ್ಟಡಗಳು ಹಾಗೂ ಕೃತಕ ಅರಣ್ಯದಲ್ಲಿನ ಪ್ರಾಣಿಗಳ ದರ್ಶನ, ಥಾಯ್ಲೆಂಡ್‌ನ ದ್ವೀಪಗಳು, ಕಡಲ ತೀರ ಹಾಗೂ ಪಟಾಯದ ವೇಶ್ಯಾವಾಟಿಕೆ... ವಿದೇಶ ಪ್ರವಾಸದ ಹಾದಿಯಲ್ಲಿ ಕಂಡ ಹಲವು ಸಂಗತಿಗಳನ್ನು ದಾಖಲಿಸುವ ಪ್ರಯತ್ನವನ್ನು ತೀರ್ಥಹಳ್ಳಿಯ ಕನ್ನಡ ಪ್ರಾಧ್ಯಾಪಕ ಜೆ.ಕೆ. ರಮೇಶ್ ಮಾಡಿದ್ದಾರೆ.

'ಇಂಡಿಯಾದ ಹೊರಗೊಂದು ಹಣುಕು' ಎಂಬ ಪ್ರವಾಸ ಕಥನದಲ್ಲಿ ತಾವು ಕಂಡಂತೆ ಹಲವು ದೇಶಗಳ ಸಾಂಸ್ಕೃತಿಕ, ಆಚಾರ, ವಿಚಾರ, ಆರ್ಥಿಕತೆ ಮತ್ತು ಸಾಮಾಜಿಕ ಪರಿಸ್ಥಿತಿಯನ್ನು ಕೃತಿಯಲ್ಲಿ ವಿವರಿಸಿದ್ದಾರೆ. ಪ್ಯಾಕೇಜ್ ಪ್ರವಾಸ ಯೋಜನೆಯಲ್ಲಿ ತೀರ್ಥಹಳ್ಳಿಯಿಂದ ಹೊರಟು ನಾಲ್ಕಾರು ದೇಶಗಳನ್ನು ಸುತ್ತಿದ ಇವರು, ಹೋಗಿ ಬರುವವರೆಗೂ ಇಂಚಿಂಚೂ ಸಂಗತಿಗಳನ್ನು ಈ ಕೃತಿಯಲ್ಲಿ ದಾಖಲಿಸಿದ್ದಾರೆ.

ಅಧ್ಯಾತ್ಮದ ಶಿಲ್ಪಕಲೆ, ವಿವಿಧ ದೇಶಗಳಲ್ಲಿರುವ ನೃತ್ಯ ಹಾಗೂ ಇತರ ಸಾಂಸ್ಕೃತಿಕ ಪರಂಪರೆಗಳ ವಿವರಣೆ, ಗಗನಚುಂಬಿ ಕಟ್ಟಡಗಳ ನಿರ್ಮಾಣದಂತಹ ವಿಸ್ಮಯಕಾರಿ ವಿಷಯಗಳ ಜತೆಗೆ, ಬಾಲಿಯ ಬಡ ರೈತನ ಮನೆಗೆ ನೀಡಿದ ಭೇಟಿಯವರೆಗೂ ತಾವು ಕಂಡ ಹೊಸ ದೃಷ್ಟಿಕೋನವನ್ನು ಲೇಖಕ ಈ ಕೃತಿಯಲ್ಲಿ ಹೇಳಿದ್ದಾರೆ. ಕಂಡಿದ್ದನ್ನು ಕಂಡಂತೆ ದಾಖಲಿಸದೇ, ಅದನ್ನು ಸಮಗ್ರ ದೃಷ್ಟಿಕೋನದಿಂದ ನೋಡಿ ಅದಕ್ಕೆ ಅಕ್ಷರ ರೂಪ ನೀಡಿದ್ದಾರೆ. ಹೀಗೆ ನೇಪಾಳ, ಶ್ರೀಲಂಕಾ, ಭೂತಾನ್ ರಾಷ್ಟ್ರಗಳ ಭಾಷೆ, ಭಾರತದೊಂದಿಗಿನ ನಂಟು ಇವರ ಈ ಕೃತಿಯಲ್ಲಿದೆ.

ಇಷ್ಟೇ ಏಕೆ, ವಿಮಾನದಲ್ಲಿ ಗಗನಸಖಿಯರು ನೀಡುವ ಸುರಕ್ಷತೆಯ ಮಾಹಿತಿಯನ್ನು ಪ್ರಾದೇಶಿಕ ಭಾಷೆಯಲ್ಲಿ ನೀಡಬೇಕೆಂಬ ಸರ್ಕಾರದ ಆದೇಶವಿದ್ದರೂ, ಹಿಂದಿ ಹಾಗೂ ಇಂಗ್ಲಿಷ್‌ನಲ್ಲಿ ನೀಡಲಾಗುತ್ತಿದೆ. ಈ ಕುರಿತು ಆಕ್ಷೇಪಣೆ ಸಲ್ಲಿಸಲಾರದ ಕನ್ನಡಿಗರ ನಿರಭಿಮಾನದ ಕುರಿತೂ ಉಲ್ಲೇಖಿಸಿ, ಚುಚ್ಚಿದ್ದಾರೆ.



ಪು: 222 ₹230

ಇಂಡಿಯಾದ ಹೊರಗೊಂದು ಹಣುಕು
ಲೇ: ಜಿ.ಕೆ. ರಮೇಶ
ಪ್ರ: ಗೀತಾಂಜಲಿ ಪುಸ್ತಕ ಪ್ರಕಾಶನ
ಸಂ: 94498 86390

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಮಿಂಜೊಡರ್

ಮಿಂಜೊಡರ್ (ನಾ). ಕಾಂತಿಯಿಂದ ಕೂಡಿರುವ ದೀಪ

[ಮಿನ್ (< ಮಿಂಚು) + ಸೊಡರ್]

ಇಂದ್ರಜಿತುವಿನ ತಂದೆಯ ವೈಡೂರ್ಯಮಯವಾದ ರಮಣೀಯ ಕನಕ ವೈಭವದ ಮಧ್ಯಲಂಕೆಯನ್ನು ನೋಡಿ ಆಂಜನೇಯನು ನಿಬ್ಬೆರಗಾದನು. ಅಲ್ಲಿ ಮನೆಮನೆಯಲ್ಲಿ ಮಿಂಚು ನಕ್ಷತ್ರಗಳ ಗೊಂಚಲಿನಂತೆ ದೀಪಗಳು ಮಿನುಗುತ್ತಿದ್ದವು. ಕಲಶದೀಪ ಸಮೂಹಗಳು ಸಾಲು ಸಾಲಾಗಿ ಬೀದಿಬೀದಿಯನ್ನು ಶೃಂಗರಿಸಿ ಜ್ವಲಿಸುತ್ತ ರಾಸಲೀಲಾ ಪದ ಪ್ರಾಸ ವಿನ್ಯಾಸದಲ್ಲಿ ಪ್ರಕಾಶಿಸಿದವು.

ಅಲ್ಲಿಯ 'ಕಾಂತಿಯಿಂದ ಕೂಡಿರುವ ದೀಪ'ವನ್ನು ಕವಿಯು 'ಮಿಂಜೊಡರ್' ಎಂದು ಕರೆದು ಕನ್ನಡಕ್ಕೆ ಒಂದು ನವೀನ ಪದಜ್ಯೋತಿ ನೀಡಿದ್ದಾರೆ.

ಮಿನುಗಿದುವು ಮಿಂಜೊಡರ್ ಮನೆಮನೆಗೆ,
ಮಿಂಚಿನಲರಿನ ಗೊಂಚಲೋಲ್. ಪಂಕ್ತಿ ಪಂಕ್ತಿಯಿಂ,
ಚಕ್ರಗತಿಯಿಂ, ವೀಥಿವೀಥಿಯಂ ಶೃಂಗರಿಸಿ
ಜ್ವಲಿಸಿದುವು ಕಲಶ ದೀಪಸ್ತಬಕ ರಾಜಿಗಳ್.

ಮೂಗಳ್

ಮೂಗಳ್ (ಕ್ರಿ). ಹೇಳಲಾಗದೆ ಮೂಕವಾಗಿ ದುಃಖಪಡು

(ಮೂಗು + ಅಳ್)

ಸೀತೆಯು ಒಂದು ಬೆಳಿಗ್ಗೆ ಪರ್ಣಕುಟಿಯಿಂದ ಹೊರಟು ನಿಧಾನವಾಗಿ ತೊರೆಯ ತಟಿಯ ಕಡೆ ಬಂದಳು. ಅವಳು ರಾವಣನ ಕ್ರೂರ ಅಮಾನುಷ ನುಡಿಯಿಂದ ನೊಂದಿದ್ದಳು. ಅವಳು ಹೀಗೆಂದುಕೊಂಡಳು: ಕೊಟ್ಟ ಅವಧಿಯೊಳಗೆ ತನಗೆ ರಾಮನ ರಕ್ಷೆ ಒದಗದಿದ್ದರೆ, ರಾವಣ ಬಲಾತ್ಕಾರದಿಂದ ಮತ್ತು ಅವನೊಡನೆ ಬೇಯುವ ಹೇಸಿಗೆಯಿಂದ ಪಾರಾಗಲಿರುವ ಪರಮಾಶ್ರಯವಿದು! ತೊರೆಯೊಡನೆ ಧುಮುಕಿದರೆ, ನೀರಿನಂತೆಯೇ ತುಂತುರಾಗದೇನು ಈ ಬಡ ಒಡಲು? ಈ ಕರುಣೆ ನಿರ್ಝರಣೆಗೆ ನನ್ನ ಛಿದ್ರವಾದ ಶರೀರ ಹೊರೆಯಾಗುವುದಿಲ್ಲ; ಸಮುದ್ರವು ದೂರ. ನೆಲದ ಮಗಳಾದ ನನಗೆ ನೀರು ಬೇಸರಪಡುವುದೆ? ಮೀನಿಗೆ ಹಸಿವಿರುವುದಿಲ್ಲವೆ? ಹಲ್ಲಿರುವುದಿಲ್ಲವೆ? ಪರದೇಸಿಯಾದ ಈ ಹಾಳು ಶರೀರವನ್ನು ತಿಂದು ಇನ್ನಿಲ್ಲದಂತೆ ಮಾಡುವುದಿಲ್ಲವೆ?

ತನ್ನ ಕಲ್ಪನೆಯು ಮಥಿಸಿದ ತನ್ನ ದುರ್ಗತಿಗೆ ತಾನೆ ಕುದಿದಳು. ಎದೆ ಕರಗಿ ಮರುಗಿತು. ದಿವ್ಯ ದುಃಖಿನಿ ಗಂಟಲು ಕಟ್ಟಿ ಸಗದ್ಗದಳಾಗಿ ಮೂಕವಾಗಿ ರೋದಿಸಿದಳು.

ಹೀಗೆ ಸೀತೆಯ ಕುಸಿದ, ಕುದಿದ ಮನಸ್ಥಿತಿಯನ್ನು ವರ್ಣಿಸುವಾಗ ಕವಿ, ಅವಳು ಹೇಳಲಾಗದೆ ಮೂಕವಾಗಿ ದುಃಖಪಡುವ ಭಾವವಾಹಕವಾಗಿ 'ಮೂಗಳ್' ಹೊಸಪದ ಪ್ರಯೋಗಿಸಿದ್ದಾರೆ.

ಕೊರಳ್ ಬಿಗಿದು
ಮೂಗಳ್ತಳಾ ದಿವ್ಯದುಃಖಿನಿ ಸಗದ್ಗದಂ,
ತನ್ನ ಕಲ್ಪನೆ ಮಥಿಸಿದಾ ತನ್ನ ದುರ್ಗತಿಗೆ
ತಾನೆ ಕುದಿದೆರ್ದೆ ಕರಗಿ ಮರುಗಿ.


ಒಣದ್ರಾಕ್ಷಿ ವಹಿವಾಟು ಸಂಕೀರ್ಣದಲ್ಲಿ ಇ–ಟ್ರೇಡಿಂಗ್‌ನಲ್ಲಿ ಭಾಗವಹಿಸಿದ್ದ ರೈತರು

ದ್ರಾಕ್ಷಿ ತೋಟದಾಗ್...

8ನೇ ಪುಟದಿಂದ...

₹6 ಸಾವಿರ ಕೋಟಿಗೂ ಅಧಿಕ ವಹಿವಾಟು

‘ಉತ್ತರ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ದ್ರಾಕ್ಷಿ ಬೆಳೆಯುವ ಕ್ಷೇತ್ರ ಸುಮಾರು 40 ಸಾವಿರ ಹೆಕ್ಟೇರ್ ಇದ್ದು, ಇದರಲ್ಲಿ 30 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಒಣದ್ರಾಕ್ಷಿ ಉತ್ಪಾದನೆ ಮಾಡಲಾಗುತ್ತದೆ. 2.25 ಲಕ್ಷ ಟನ್‌ಗೂ ಅಧಿಕ ಒಣದ್ರಾಕ್ಷಿ ಉತ್ಪಾದನೆಯಾಗುತ್ತದೆ. ಅಂದಾಜು ₹6 ಸಾವಿರ ಕೋಟಿಗೂ ಅಧಿಕ ಮೌಲ್ಯದ ಒಣದ್ರಾಕ್ಷಿ ಉತ್ಪಾದನೆಯಾಗುತ್ತದೆ’ ಎನ್ನುತ್ತಾರೆ ವಿಜಯಪುರ ಜಿಲ್ಲಾ ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ ರಾಹುಲ್ ಭಾವಿದೊಡ್ಡಿ.

‘ದ್ರಾಕ್ಷಿ ಕಣಜ’ ಎಂದೇ ಪ್ರಸಿದ್ಧವಾದ ವಿಜಯಪುರ ಜಿಲ್ಲೆಯೊಂದರಲ್ಲೇ ಸುಮಾರು 70 ಸಾವಿರ ಎಕರೆ, ಬಾಗಲಕೋಟೆ ಜಿಲ್ಲೆಯಲ್ಲಿ 18 ಸಾವಿರ ಎಕರೆ ಮತ್ತು ಬೆಳಗಾವಿಯಲ್ಲಿ 16 ಸಾವಿರ ಎಕರೆ ದ್ರಾಕ್ಷಿ ಬೆಳೆಯಲಾಗುತ್ತಿದೆ. ಹವಾಮಾನ ವೈಪರೀತ್ಯ, ಹೆಚ್ಚಿನ ಖರ್ಚು, ರೋಗಬಾಧೆ, ಮಾರುಕಟ್ಟೆ ಕೊರತೆ ಪರಿಣಾಮ ವರ್ಷದಿಂದ ವರ್ಷಕ್ಕೆ ದ್ರಾಕ್ಷಿ ಬೆಳೆಯುವ ಕ್ಷೇತ್ರ ಕಡಿಮೆ ಆಗುತ್ತಿದೆ.

‘ವಿಜಯಪುರ, ಬಾಗಲಕೋಟೆ, ಬೆಳಗಾವಿ ಜಿಲ್ಲೆಗಳಲ್ಲಿ ಬೆಳೆಯುವ ದ್ರಾಕ್ಷಿಯಲ್ಲಿ ಶೇಕಡ 80 ರಷ್ಟನ್ನು ಒಣದ್ರಾಕ್ಷಿ ಮಾಡಲಾಗುತ್ತದೆ. ಉಳಿದ ಶೇಕಡ 20ರಷ್ಟು ಮಾತ್ರ ಹಸಿದ್ರಾಕ್ಷಿ ತಿನ್ನಲು ಬಳಕೆಯಾಗುತ್ತದೆ. ರಾಜ್ಯದಲ್ಲಿ ಒಣದ್ರಾಕ್ಷಿ ಮಾರುಕಟ್ಟೆ ಮತ್ತು ಕೋಲ್ಡ್ ಸ್ಟೋರೇಜ್ ಘಟಕಗಳ ಕೊರತೆ ಇರುವುದರಿಂದ ನೆರೆಯ ಮಹಾರಾಷ್ಟ್ರಕ್ಕೆ ರೈತರು ಶೇಕಡ 80ರಷ್ಟು ದ್ರಾಕ್ಷಿಯನ್ನು ತೆಗೆದುಕೊಂಡು ಹೋಗಿ ಮಾರಾಟ ಮಾಡುತ್ತಾರೆ’ ಎನ್ನುತ್ತಾರೆ ಕರ್ನಾಟಕ ರಾಜ್ಯ ದ್ರಾಕ್ಷಿ ಬೆಳೆಗಾರರ ಸಂಘದ ಅಧ್ಯಕ್ಷ ಅಭಯಕುಮಾರ್ ನಾಂದ್ರೇಕರ್.


ವಿಜಯಪುರದಲ್ಲಿ ದ್ರಾಕ್ಷಿ ಇ–ಟ್ರೇಡಿಂಗ್ ವ್ಯವಸ್ಥೆ ಸರಿಯಾಗಿ ನಡೆಯುತ್ತಿಲ್ಲ. ದಲ್ಲಾಳಿಗಳು ಹೊಂದಾಣಿಕೆ ಮಾಡಿಕೊಂಡು ರೈತರಿಗೆ ಸಮರ್ಪಕವಾಗಿ ಬೆಲೆ ಸಿಗದಂತೆ ವಂಚಿಸುತ್ತಿದ್ದಾರೆ ಎಂಬುದು ಬೆಳೆಗಾರರ ಗಂಭೀರ ಆರೋಪ.

ವಿಜಯಪುರ, ಬಾಗಲಕೋಟೆ, ಬೆಳಗಾವಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ದ್ರಾಕ್ಷಿ ಬೆಳೆಯಲಾಗುತ್ತಿದೆ. ನೀವು ತಿನ್ನುವ ಹಸಿ ದ್ರಾಕ್ಷಿಹಣ್ಣು, ಒಣದ್ರಾಕ್ಷಿ ಅದ್ಭುತ ಎನ್ನುವಂತಿದ್ದರೆ, ಅದು ನಮ್ಮದೇ ನೆಲದಲ್ಲಿ ಬೆಳೆದದ್ದು ಆಗಿರಬಹುದು. ಏಕೆಂದರೆ, ಈ ನೆಲ, ಹವಾಮಾನಕ್ಕೆ ಅಂಥ ಗುಣವಿದೆ.


❖ ಒಣಗಿಸಲು ಹಾಕಿರುವ ದ್ರಾಕ್ಷಿ ಹಣ್ಣು

ಮಜ ಮಜ ಮಜಕೂರ


• ಎಂ.ಎಸ್.ಪೂಜಾರ



ರಜಾ ಮಜಾ ಆಟ

ಮ್ಯಾಚಿಕ್

ಇಲ್ಲಿ ಬೆಂಕಿಕಡ್ಡಿಗಳಿಂದ 9 ಚೌಕಗಳನ್ನು ಮಾಡಲಾಗಿದೆ. ನೀವು ಇದರಲ್ಲಿ 4 ಕಡ್ಡಿಗಳನ್ನು ಮಾತ್ರ ತೆಗೆದು 5 ಚೌಕಗಳು ಉಳಿಯುವಂತೆ ಪ್ರಯತ್ನಿಸಿ.



ಅಸಾಧ್ಯತೆಯಲ್ಲೂ ಸಾಧ್ಯತೆ!

6 + 6 + 6 + 6 + 1 = 37

ಮಾಡುವುದು ಹೇಗೆ? ಭಿನ್ನವಾಗಿ ಯೋಚಿಸಿ


ಉತ್ತರ: ....

ಡಣ್ಣ ಚಕ್ಕು ಕೇಲ್ರಸ್ತು ಕಥೆಯ

ಗುಂಡನನ್ನು ಹೆದರಿಸಿದ ಗೆಳೆಯ

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು






ಗುಂಡ ರಜೆಯಲ್ಲಿ ಮನೆಯ ಹತ್ತಿರವೇ ಇದ್ದ ಈಜುಕೊಳಕ್ಕೆ ತೆರಳಿದ. ನೀರಿಗಿಳಿದ ಆತ ಈಜಲು ಆರಂಭಿಸಿದ. ಆಗ ಈಜುಕೊಳದ ಮೂಲೆಯಲ್ಲಿ ದೊಡ್ಡ ಮೀನೊಂದು ನೀರಿನೊಳಗಿಂದ ತಲೆ ಹೊರಹಾಕಿ ಬಾಯ್ತೆರೆದು ತನ್ನತ್ತ ನೋಡುತ್ತಿರುವುದನ್ನು ಗಮನಿಸಿದ. ಭಯಗೊಂಡು ತಕ್ಷಣವೇ ಹಿಂದಕ್ಕೆ ಈಜತೊಡಗಿದ. ಆಗ ಮೀನಿನ ತಲೆಯ ಆಕಾರದ ಟೊಪ್ಪಿ ಧರಿಸಿದ್ದ ಗುಂಡನ ಸ್ನೇಹಿತ ನೀರಿನೊಳಗಿಂದ ಹೊರಬಂದ. ಆತನನ್ನು ನೋಡಿದ ಬಳಿಕವೂ ಗುಂಡನಿಗೆ ಭಯ ಕಡಿಮೆಯಾಗಲಿಲ್ಲ.

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು


ಅಕ್ಷರ ಎಂ.ಎಸ್.
ಮೈಸೂರು


ರೇನಿತ್ ಜಿ.
ತುಮಕೂರು


ಅಕುಲ್ ಮಹಾರಾಜ್ ಎಂ.ಪಿ.
ಹಿರಿಯೂರು


ದಾನವಿ ಭಾವಿದೊಡ್ಡಿ
ಧಾರವಾಡ


ದುತಿ ಶ್ರೀ ಸಿ.
ಆನೇಕಲ್


ಲೋಚನ್ ಡಿ.ಎಂ.
ರಾಮನಗರ

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ

1	ಕವಿ	+	ಲಾಗ	+	ಭಾ	=	
2	ಗತಿ	+	ಜನ	+	ಣ	=	
3	ಕರ	+	ದಡಿ	+	ತ	=	
4	ಹಾರ	+	ಮಗ	+	ನ	=	
5	ಬೇಗೆ	+	ಮಸಿ	+	ಳೆ	=	

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಪ್ರತಿ ಸಾಲಿನಲ್ಲೂ ಮೂರು ಪದಗಳನ್ನು ಕೊಡಲಾಗಿದೆ. ನೀವು ಅಕ್ಷರ ಪಟ್ಟಿಯಿಂದ ಮೂರು ಅಕ್ಷರ ಆರಿಸಿಕೊಂಡು ಪ್ರತಿ ಪದದ ನಡುವೆ ತುಂಬಿ, ನಂತರ ಮೂರು ಪದ ಸೇರಿಸಿ ಓದಿದರೆ ಒಂದು ಅರ್ಥಬದ್ಧ ಕಿರು ವಾಕ್ಯವಾಗುವುದು. ಉದಾ:

ಇಲ್ಲಿ ಅಕ್ಷರ ಪಟ್ಟಿಯಿಂದ ವ,ತ್ಸ,ಡಿ ಅಕ್ಷರ ಆಯ್ದು ತುಂಬಿದರೆ, ಅದು ಸವತಿ ಮತ್ಸರ ಬಿಡಿರಿ ಆಗುತ್ತದೆ.

1	ಸ		ತಿ	ಮ		ರ	ಬಿ		ರಿ

1	ಸ		ತಿ	ಮ		ರ	ಬಿ		ರಿ
2	ಗ		ತ	ಬೇ		ಗೆ	ಶಿ		ರ
3	ನ		ಗೆ	ನೀ		ಲು	ತ		ರಿ
4	ಅ		ರ	ಆ		ಕೆ	ಇ		ದು
5	ಸೇ		ವೆ	ಹ		ರ	ಇ		ವೆ
6	ಬೇ		ನೆ	ಆ		ಳು	ಕ		ರಿ

ಅಕ್ಷರ ಪಟ್ಟಿ

ಣಿ	ಡ	ಡಿ
ಬಿ	ವ	ನ
ವ	ರ	ಟ್ಟಿ
ತು	ಸಿ	ತ್ಸ
ಕ	ಡು	ತ್ತಿ
ಗ	ಳ್ವಿ	ನ್ನಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ಕರಡಿದಾಳಿ 2.ಸ್ವರ್ಣಪದಕ 3.ಸಮರಸಾರು 4.ಕವನಬರೆ 5.ಗುಣಪಡಿಸು

ಜಾಣಪದ ಆಟ: 1.ಅಹಂಕಾರ 2.ಪ್ರತೀಕಾರ 3.ಸರಕಾರ 4.ದರಕಾರ 5.ಮಮಕಾರ 6.ಪರಕಾರ 7.ಸಬಕಾರ 8.ಅಂಧಕಾರ 9.ಅಧಿಕಾರ 10.ಹರಿಕಾರ

ಮೋಜಿನ ಇಂಗ್ಲಿಷ್: 1.DICE 2.FILE 3.KITE 4.LIKE 5.MINE 6.NINE 7.RIDE 8.SIDE 9.TIME 10.WIDE

ಗಣಿತದಲ್ಲಿ ಗರ್ದಿಗಮ್ಮತ್ತು:



488
258 230
135 123 107
68 67 56 51
32 36 31 25 26
13 19 17 14 11 15

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ



ಎರಡನೇ ಅತ್ಯಧಿಕ ಮೊತ್ತ ಬೆನ್ನಟ್ಟಿ ಗೆದ್ದ ಸನ್‌ರೈಸರ್ಸ್ ಹೈದರಾಬಾದ್

ಬೌಂಡರಿ, ಸಿಕ್ಸರ್‌ಗಳ 'ಅಭಿಷೇಕ'

ಹೈದರಾಬಾದ್ (ಪಿಟಿಐ): ಈ ಋತುವಿನಲ್ಲಿ ಮಂಕಾಗಿದ್ದ ಅಭಿಷೇಕ್ ಶರ್ಮಾ (141, 55 ಎಸೆತ) ಅವರು ರಾಜೀವ್ ಗಾಂಧಿ ಕ್ರೀಡಾಂಗಣದಲ್ಲಿ ಶನಿವಾರ ಸಿಕ್ಸರ್, ಬೌಂಡರಿಗಳ ಮಳೆಗರೆದು ಅಮೋಘ ಶತಕ ಪೋಣಿಸಿದರು. ಪಂಜಾಬ್ ಕಿಂಗ್ಸ್ ತಂಡದ 246 ರನ್‌ಗಳ ದೊಡ್ಡ ಗುರಿಯನ್ನು ಲೆಕ್ಕಕ್ಕೆ ಇಲ್ಲದಂತೆ ಎದುರಿಸಿದ ಸನ್‌ರೈಸರ್ಸ್ ಹೈದರಾಬಾದ್ ತಂಡ ಐಪಿಎಲ್ ಪಂದ್ಯದಲ್ಲಿ ಎಂಟು ವಿಕೆಟ್‌ಗಳ ನಿರಾಯಾಸ ಜಯ ಪಡೆಯಲು ಅವರ ಪರಾಕ್ರಮವೇ ಕಾರಣವಾಯಿತು.

ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಪಂಜಾಬ್ ಕಿಂಗ್ಸ್ ತಂಡ ನಾಯಕ ಶ್ರೇಯಸ್ ಅಯ್ಯರ್ (82, 36ಎ, 4x6, 6x6) ಅವರ ಮಿಂಚಿನ ಆಟದ ನೆರವಿನಿಂದ 6 ವಿಕೆಟ್‌ಗೆ 245 ರನ್‌ಗಳ ದೊಡ್ಡ ಮೊತ್ತ ದಾಖಲಿಸಿತು. ಆದರೆ ಬ್ಯಾಟರ್‌ಗಳಿಗೆ ನೆರವಾಗುತ್ತಿದ್ದ ಪಿಚ್‌ನಲ್ಲಿ ಸನ್‌ರೈಸರ್ಸ್ ತಂಡ ಇನ್ನೂ 9 ಎಸೆತಗಳಿರುವಂತೆ 2 ವಿಕೆಟ್‌ಗೆ 247 ರನ್ ಹೊಡೆದು ತವರಿನ ಪ್ರೇಕ್ಷಕರು ಸಂಭ್ರಮ ಪಡುವಂತೆ ಮಾಡಿತು. ಸತತ ನಾಲ್ಕು ಸೋಲುಗಳಿಂದ ಕಂಗಾಲಾಗಿದ್ದ ಕಳೆದ ಬಾರಿಯ ರನ್ನರ್ ಅಪ್ ತಂಡ ಈ ಮೂಲಕ ಗೆಲುವಿನ ಹಳಿಗೆ ಮರಳಿತು.


ಅಭಿಷೇಕ್ ಮೊದಲ ವಿಕೆಟ್‌ಗೆ ಟ್ರಾವಿಸ್ ಹೆಡ್ (66, 37ಎಸೆತ) ಅವರೊಡನೆ 171 ರನ್‌ಗಳ ಭರ್ಜರಿ ಜೊತೆಯಾಟವಾಡಿದರು. ಅಭಿಷೇಕ್ ಆಟದಲ್ಲಿ 14 ಬೌಂಡರಿಗಳು ಮತ್ತು 10 ಭರ್ಜರಿ ಸಿಕ್ಸರ್‌ಗಳಿದ್ದವು. ಅವರು ಐಪಿಎಲ್ ಇತಿಹಾಸದಲ್ಲಿ ಮೂರನೇ ಗರಿಷ್ಠ ವೈಯಕ್ತಿಕ ಮೊತ್ತ ದಾಖಲಿಸಿದರು.

ಹೆಡ್ ನಿರ್ಗಮನದ ನಂತರ ಅಭಿಷೇಕ್ ಎರಡನೇ ವಿಕೆಟ್‌ಗೆ ಹೆನ್ರಿಚ್ ಕ್ಲಾಸೆನ್ (ಔಟಾಗದೇ 21) ಜೊತೆ 51 ರನ್ ಸೇರಿಸಿ ತಂಡ ಗೆಲುವಿನ ಹಾದಿಯಲ್ಲೇ ಮುಂದುವರಿಯುವಂತೆ ನೋಡಿಕೊಂಡರು. ಪಂಜಾಬ್‌ನ ಎಂಟು ಮಂದಿ ಬೌಲರ್‌ಗಳು ಈ ಪಂದ್ಯದಲ್ಲಿ ಬೌಲಿಂಗ್ ಮಾಡಿದರು!

ಮಿಂಚಿದ ಅಯ್ಯರ್: ಇದಕ್ಕೆ ಮೊದಲು ಶ್ರೇಯಸ್ ಅಯ್ಯರ್ ನೇತೃತ್ವದಲ್ಲಿ ಪಂಜಾಬ್ ಕಿಂಗ್ಸ್ ತಂಡ ಸವಾಲಿನ ಮೊತ್ತ ಗಳಿಸಿತ್ತು. ಆರಂಭ ಆಟಗಾರರಾದ ಪ್ರಿಯಾಂಶ್ ಆರ್ಯ (36;13ಎ, 4x2, 6x4) ಮತ್ತು ಪ್ರಭಸಿಮ್ರನ್ ಸಿಂಗ್ (42;23ಎ, 4x7, 6x1) ಅವರು ಮೊದಲ ವಿಕೆಟ್‌ಗೆ ಬಿರುಸಿನ 66 (24ಎ) ರನ್ ಸೇರಿಸಿದ್ದರು.

ಸನ್‌ರೈಸರ್ಸ್‌ನ ಯಶಸ್ವಿ ಬೌಲರ್ ಹರ್ಷಲ್ ಪಟೇಲ್ (42ಕ್ಕೆ4) ಅವರು ಪ್ರಿಯಾಂಶ್ ಆರ್ಯ ವಿಕೆಟ್ ಪಡೆದು ಜೊತೆಯಾಟ ಮುರಿದರು. ಇನ್ನೊಂದೆಡೆ ಅಯ್ಯರ್ ರನ್ ವೇಗ ಏರುಗತಿಯಲ್ಲೇ ಇರುವಂತೆ ನೋಡಿಕೊಂಡರು. ಹೀಗಾಗಿ ಪವರ್‌ಪ್ಲೇನಲ್ಲಿ ಪಂಜಾಬ್ ತಂಡ 1 ವಿಕೆಟ್‌ಗೆ 89 ರನ್ ಗಳಿಸಿತು.

ಸ್ಕೋರುಗಳು: ಪಂಜಾಬ್ ಕಿಂಗ್ಸ್: 20 ಓವರುಗಳಲ್ಲಿ 6ಕ್ಕೆ 245 (ಪ್ರಿಯಾಂಶ್ ಆರ್ಯ 36, ಪ್ರಭಸಿಮ್ರನ್ ಸಿಂಗ್ 42, ಶ್ರೇಯಸ್ ಅಯ್ಯರ್ 82, ಮಾರ್ಕಸ್ ಸ್ಟೊಯಿನಿಸ್ ಔಟಾಗದೇ 34; ಹರ್ಷಲ್ ಪಟೇಲ್ 42ಕ್ಕೆ4, ಇಶಾನ್ ಮಾಲಿಂಗ 45ಕ್ಕೆ2); ಸನ್‌ರೈಸರ್ಸ್ ಹೈದರಾಬಾದ್: 18.3 ಓವರುಗಳಲ್ಲಿ 2ಕ್ಕೆ 247 (ಟ್ರಾವಿಸ್ ಹೆಡ್ 66, ಅಭಿಷೇಕ್ ಶರ್ಮಾ 141, ಹೆನ್ರಿಚ್ ಕ್ಲಾಸೆನ್ ಔಟಾಗದೇ 21) ಪಂದ್ಯದ ಆಟಗಾರ: ಅಭಿಷೇಕ್ ಶರ್ಮಾ.



ಎಎಫ್‌ಪಿ ಚಿತ್ರ

ಐಪಿಎಲ್‌ನಲ್ಲಿ ಗರಿಷ್ಠ ರನ್ ಚೇಸಿಂಗ್

ತಂಡ	ಗಳಿಸಿದ ರನ್	ಗುರಿ	ಎದುರಾಳಿ	ವರ್ಷ
ಕಿಂಗ್ಸ್ ಇಲೆವೆನ್	2ಕ್ಕೆ 262	262	ಕೋಲ್ಕತ್ತ ನೈಟ್ ರೈಡರ್ಸ್	2024
ಸನ್‌ರೈಸರ್ಸ್ ಹೈದರಾಬಾದ್	2ಕ್ಕೆ 247	246	ಪಂಜಾಬ್ ಕಿಂಗ್ಸ್	2025
ರಾಜಸ್ಥಾನ ರಾಯಲ್ಸ್	6ಕ್ಕೆ226	224	ಕಿಂಗ್ಸ್ ಇಲೆವೆನ್	2020
ರಾಜಸ್ಥಾನ ರಾಯಲ್ಸ್	8ಕ್ಕೆ224	224	ಕೋಲ್ಕತ್ತ ನೈಟ್ ರೈಡರ್ಸ್	2024
ಮುಂಬೈ ಇಂಡಿಯನ್ಸ್	6ಕ್ಕೆ219	219	ಚೆನ್ನೈ ಸೂಪರ್ ಕಿಂಗ್ಸ್	2021

ಚೀಟಿ ತೋರಿಸಿ ಶರ್ಮಾ ಸಂಭ್ರಮ

ಈ ಐಪಿಎಲ್‌ನಲ್ಲಿ ವೈವಿಧ್ಯಮಯ ಸಂಭ್ರಮಗಳು ಕಂಡುಬರುತ್ತಿವೆ. ಶನಿವಾರ ಪಂಜಾಬ್ ಕಿಂಗ್ಸ್ ಎದುರು ಶತಕದ ಮೈಲಿಗಲ್ಲು ತಲುಪಿದ ತಕ್ಷಣ ಅಭಿಷೇಕ್ ಶರ್ಮಾ ಅವರು ಕಿಸೆಯಲ್ಲಿದ್ದ ಚೀಟಿಯನ್ನು ಪ್ರೇಕ್ಷಕರೆದುರು ಪ್ರದರ್ಶಿಸಿದರು. 'ಇದು ಆರೆಂಜ್ ಆರ್ಮಿಗಾಗಿ' (ದಿಸ್ ಒನ್ ಫಾರ್ ಆರೇಂಜ್ ಆರ್ಮಿ) ಎಂದು ಅದರಲ್ಲಿ ಬರೆಯಲಾಗಿತ್ತು.

ಈ ಪಂದ್ಯದಲ್ಲಿ ಒಟ್ಟು 492 ರನ್‌ಗಳು ಹರಿದುಬಂದವು.

ಆರ್‌ಸಿಬಿಗೆ ಇಂದು ರಾಯಲ್ಸ್ ಸವಾಲು


ವಿರಾಟ್ ಕೊಹ್ಲಿ

ಕೊಹ್ಲಿ, ಸಾಲ್ಟ್– ಆರ್ಚರ್ ಮುಖಾಮುಖಿ

ಜೈಪುರ (ಪಿಟಿಐ): ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಭಾನುವಾರ ನಡೆಯುವ ಐಪಿಎಲ್ ಪಂದ್ಯದಲ್ಲಿ ಆತಿಥೇಯ ರಾಜಸ್ಥಾನ ರಾಯಲ್ಸ್ ತಂಡವನ್ನು ಎದುರಿಸಲಿದ್ದು, ಉಭಯ ತಂಡಗಳು ಗೆಲುವಿನ ಹಳಿಗೆ ಮರಳುವ ಯತ್ನದಲ್ಲಿವೆ. ಈ ಪಂದ್ಯವು ಫಿಲ್ ಸಾಲ್ಟ್, ವಿರಾಟ್ ಕೊಹ್ಲಿ ಎದುರು ರಾಯಲ್ಸ್‌ನ ಎಕ್ಸ್‌ಪ್ರೆಸ್ ವೇಗಿ ಜೋಫ್ರಾ ಆರ್ಚರ್ ಮುಖಾಮುಖಿಗೆ ವೇದಿಕೆಯೂ ಆಗಿದೆ.

ಆರ್‌ಸಿಬಿಯು ತವರಿನಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್‌ಗೆ ಆರು ವಿಕೆಟ್‌ಗಳಿಂದ ಸೋತಿತ್ತು. ಸಂಜು ಸ್ಯಾಮ್ಸನ್ ಪಡೆ ತನ್ನ ಹಿಂದಿನ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ಎದುರು 58 ರನ್‌ಗಳ ಸೋಲು ಅನುಭವಿಸಿತ್ತು. ರಜತ್ ಪಾಟೀದಾರ್ ಪಡೆ ಐದು ಪಂದ್ಯಗಳಲ್ಲಿ ಮೂರು ಗೆದ್ದಿದೆ. ರಾಜಸ್ಥಾನ ತಂಡವು ಅಷ್ಟೇ ಪಂದ್ಯಗಳಿಂದ ಎರಡರಲ್ಲಿ ಜಯ ಸಾಧಿಸಿದೆ.


ಮೊದಲ ಪಂದ್ಯದಲ್ಲಿ 4 ಓವರುಗಳಲ್ಲಿ 76 ರನ್ನಿತ್ತು ಐಪಿಎಲ್ ಇತಿಹಾಸದಲ್ಲೇ ದುಬಾರಿ ಎನಿಸಿದ್ದ ಇಂಗ್ಲೆಂಡ್‌ನ ವೇಗಿ ಆರ್ಚರ್ ನಂತರ ಪುಟಿದೆದ್ದಿದ್ದಾರೆ. ಗಂಟೆಗೆ 144 ಕಿ.ಮೀ. ವೇಗದಲ್ಲಿ ಬೌಲ್ ಮಾಡಿ ಬ್ಯಾಟರ್‌ಗಳನ್ನು ಕಂಗೆಡಿಸಿದ್ದಾರೆ. ಪಂಜಾಬ್ ಕಿಂಗ್ಸ್ ವಿರುದ್ಧ 25 ರನ್ನಿಗೆ 3 ವಿಕೆಟ್ ಪಡೆದು ತಮ್ಮ ತಂಡ ಪಂದ್ಯ ಗೆಲ್ಲಲು ಕಾರಣರಾಗಿದ್ದರು. ಟೈಟನ್ಸ್ ವಿರುದ್ಧ ಪಂದ್ಯದಲ್ಲಿ ಗಿಲ್ ಅವರನ್ನು 147.7 ಕಿ.ಮೀ. ವೇಗದ ಇನ್‌ಸ್ವಿಂಗರ್ ಎಸೆತದಲ್ಲಿ ಬೌಲ್ಡ್ ಮಾಡಿದ್ದರು.

ಕೊಹ್ಲಿ (186 ರನ್) ಮತ್ತು ಇಂಗ್ಲೆಂಡ್‌ನ ಕೀಪರ್ ಸಾಲ್ಟ್ (143 ರನ್) ಅವರನ್ನು ನಿಯಂತ್ರಿಸುವ ಸವಾಲು ಈಗ ಆರ್ಚರ್ ಮುಂದಿದೆ. ಕೊಹ್ಲಿ ಈ ಬಾರಿ ಪರಿಮಿತ ಕಂಡಿದ್ದಾರೆ. ಆದರೆ ಸಾಲ್ಟ್ ಪ್ರತಿ ಪಂದ್ಯದಲ್ಲಿ ಆಕ್ರಮಣಕಾರಿ ಆಟಕ್ಕೆ ಮುಂದಾಗುತ್ತಿದ್ದಾರೆ. ದೇವದತ್ತ ಪಡಿಕ್ಕಲ್ ಅವರಿಗೆ ದೊಡ್ಡ ಮೊತ್ತ ಗಳಿಸುವ ಸವಾಲು ಇದೆ. ಪಾಟೀದಾರ್, ಟಿಮ್ ಡೇವಿಡ್ ಸಹ ಈ ಬಾರಿ ನಿರಾಸೆ ಮೂಡಿಸಿಲ್ಲ. ಲಿವಿಂಗ್‌ಸ್ಟೋನ್ ಕೆಲವು ಪಂದ್ಯಗಳಲ್ಲಿ ಮಿಂಚಿದ್ದಾರೆ.

ಆರ್‌ಸಿಬಿ ಪರ ವೇಗಿಗಳಾದ ಹೇಜಲ್‌ವುಡ್ ಮತ್ತು ಭುವನೇಶ್ವರ್ ಕುಮಾರ್ ಈ ಋತುವಿನಲ್ಲಿ ಉತ್ತಮವಾಗಿ ಬೌಲ್ ಮಾಡಿದ್ದಾರೆ. ಆದರೆ ಸ್ಪಿನ್ ವಿಭಾಗದಲ್ಲಿ ಸ್ಥಿರ ಪ್ರದರ್ಶನ ಮೂಡಿಬಂದಿಲ್ಲ. ರಾಯಲ್ಸ್ ತಂಡದಲ್ಲಿ ಸಂಜು ಸ್ಯಾಮ್ಸನ್, ರಿಯಾನ್ ಪರಾಗ್, ಯಶಸ್ವಿ ಜೈಸ್ವಾಲ್ ಮತ್ತು ನಿತೀಶ್ ರಾಣಾ ಅಂಥ ಅನುಭವಿಗಳಿದ್ದಾರೆ. ಕೆಳ ಮಧ್ಯಮ ಕ್ರಮಾಂಕದಲ್ಲಿ ಧ್ರುವ್ ಜುರೇಲ್, ಶಿಮ್ರಾನ್ ಹೆಟ್ಮೆಯರ್ ಕೂಡ ಉಪಯುಕ್ತ ಕೊಡುಗೆ ನೀಡಬಲ್ಲರು.

ಪಂದ್ಯ ಆರಂಭ: ಮಧ್ಯಾಹ್ನ 3.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಬಲಾಬಲ
32 ಒಟ್ಟು ಪಂದ್ಯ | 14 ಆರ್‌ಆರ್ ಗೆಲುವು | 15 ಆರ್‌ಸಿಬಿ ಜಯ
3 ಫಲಿತಾಂಶವಿಲ್ಲ


ಜೋಫ್ರಾ ಆರ್ಚರ್

ಪಾಯಿಂಟ್ಸ್ ಪಟ್ಟಿ

	ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
1	ಡಿಸಿ	4	4	0	8	1.278
2	ಜಿಟಿ	6	4	2	8	1.081
3	ಎಲ್‌ಎಸ್‌ಜಿ	6	4	2	8	0.162
4	ಕೆಕೆಆರ್	6	3	3	6	0.803
5	ಆರ್‌ಸಿಬಿ	5	3	2	6	0.539
6	ಪಿಬಿಕೆಎಸ್	5	3	2	6	0.065
7	ಆರ್‌ಆರ್	5	2	3	4	-0.733
10	ಎಸ್‌ಆರ್‌ಎಚ್	6	2	4	4	-1.245
8	ಎಂಐ	5	1	4	2	-0.010
9	ಸಿಎಸ್‌ಕೆ	6	1	5	2	-1.554

ಆರೇಂಜ್ ಕ್ಯಾಪ್
ನಿಕೋಲಸ್ ಪೂರನ್ (ಎಲ್‌ಎಸ್‌ಜಿ) 349 ರನ್

ಪರ್ಪಲ್ ಕ್ಯಾಪ್
ನೂರ್ ಅಹ್ಮದ್ (ಸಿಎಸ್‌ಕೆ) 12 ವಿಕೆಟ್

ರಾಹುಲ್–ಬೂಮ್ರಾ ಮುಖಾಮುಖಿಗೆ ವೇದಿಕೆ

ನವದೆಹಲಿ (ಪಿಟಿಐ): ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅವರು ಐಪಿಎಲ್‌ನಲ್ಲಿ ಲಯ ಕಂಡುಕೊಳ್ಳಲು ಪರದಾಡುತ್ತಿದ್ದಾರೆ. ಮುಂಬೈ ಇಂಡಿಯನ್ಸ್ ತಂಡ ಭಾನುವಾರ ನಡೆಯುವ ಪಂದ್ಯದಲ್ಲಿ ಪ್ರಬಲ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಎದುರಿಸಲಿದ್ದು, ರೋಹಿತ್‌ಗೆ ಎದುರಾಳಿ ಸ್ಪಿನ್ನರ್‌ಗಳಿಂದ ಸವಾಲು ಎದುರಾಗಬಹುದು.

ಇನ್ನೊಂದು ಕಡೆ ಯಶಸ್ಸಿನ ಅಲೆಯಲ್ಲಿರುವ ಡೆಲ್ಲಿ ತಂಡದ ತಾರೆ ಕೆ.ಎಲ್. ರಾಹುಲ್ ಅವರನ್ನು ಕಟ್ಟಿಹಾಕಲು ಮುಂಬೈ ಇಂಡಿಯನ್ಸ್ ತಂಡವು ವೇಗದ ಅಸ್ತ್ರ ಜಸ್‌ಪ್ರೀತ್ ಬೂಮ್ರಾ ಅವರನ್ನು ನೆಚ್ಚಿಕೊಂಡಿದೆ.


ಕೆ.ಎಲ್. ರಾಹುಲ್


ಜಸ್‌ಪ್ರೀತ್ ಬೂಮ್ರಾ

ಹಾಲಿ ಟೂರ್ನಿಯಲ್ಲಿ ಮೊದಲ 25 ಪಂದ್ಯಗಳ ನಂತರ ಏಕೈಕ ಅಜೇಯ ತಂಡವಾಗಿರುವ ಡೆಲ್ಲಿ ಕ್ಯಾಪಿಟಲ್ಸ್ ತಂಡ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆಯುವ ಈ ಪಂದ್ಯವನ್ನೂ ಗೆಲ್ಲುವ ನೆಚ್ಚಿನ ತಂಡವೆನಿಸಿದೆ. ಡೆಲ್ಲಿ ಯಶಸ್ಸಿನ ಓಟದಲ್ಲಿದ್ದರೆ, ಮುಂಬೈ ತಂಡ ಆರು ಪಂದ್ಯಗಳಲ್ಲಿ ಐದನೇ ಸೋಲನ್ನು ತಪ್ಪಿಸಿಕೊಳ್ಳುವ ಒತ್ತಡದಲ್ಲಿದೆ. 2024ರ ಆವೃತ್ತಿಯಲ್ಲಿ ಮುಂಬೈ ಇಂಡಿಯನ್ಸ್‌ಗೆ ಕೊನೆಯ ಸ್ಥಾನದ ಮುಖಭಂಗ ಎದುರಾಗಿತ್ತು.

ನಾಯಕ ಹಾರ್ದಿಕ್ ಪಾಂಡ್ಯ ಮಾತ್ರ ಮುಂಬೈ ಪರ ಸ್ಥಿರ ಪ್ರದರ್ಶನ ನೀಡುತ್ತಿದ್ದಾರೆ. ಡೆಲ್ಲಿ ನಾಯಕ ಅಕ್ಷರ್ ಪಟೇಲ್, ಕುಲದೀಪ್ ಯಾದವ್ ಮತ್ತು ವಿಪ್ರಜ್ ನಿಗಮ್ ಅವರು ರೋಹಿತ್ ಅವರಿಗೆ ಸವಾಲೊಡ್ಡುವ ಸಾಧ್ಯತೆಯಿದೆ. ಕುಲದೀಪ್ 4 ಪಂದ್ಯಗಳಿಂದ 8 ವಿಕೆಟ್ ಕಬಳಿಸಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30

ಸತತ ಮೂರನೇ ಗೆಲುವು ದಾಖಲಿಸಿದ ಲಖನೌ ಸೂಪರ್ ಜೈಂಟ್ಸ್

ಪೂರನ್, ಮರ್ಕರಂ ಭರ್ಜರಿ ಆಟ

ಲಖನೌ (ಎಎಫ್‌ಪಿ): ಆರಂಭ ಆಟಗಾರ ಏಡನ್ ಮರ್ಕರಂ ಮತ್ತು ಅಮೋಘ ಲಯದಲ್ಲಿರುವ ನಿಕೋಲಸ್ ಪೂರನ್ ಅವರ ಬಿರುಸಿನ ಅರ್ಧ ಶತಕಗಳ ನೆರವಿನಿಂದ ಲಖನೌ ಸೂಪರ್ ಜೈಂಟ್ಸ್ ತಂಡ ಶನಿವಾರ ನಡೆದ ಐಪಿಎಲ್ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ಮೇಲೆ ಆರು ವಿಕೆಟ್‌ಗಳ ಸುಲಭ ಜಯಪಡೆಯಿತು. ಇದು ಲಖನೌ ತಂಡಕ್ಕೆ ಸತತ ಮೂರನೇ ಗೆಲುವು.

ಏಕನಾ ಕ್ರೀಡಾಂಗಣದಲ್ಲಿ ಗೆಲುವಿಗೆ 181 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಲಖನೌ ಮೂರು ಎಸೆತಗಳಿರುವಂತೆ 4 ವಿಕೆಟ್‌ಗೆ 186 ರನ್ ಹೊಡೆಯಿತು.

ಮರ್ಕರಂ ಬಿರುಸಿನ 58 ರನ್ (31ಎ, 4x9, 6x1) ಹೊಡೆದರು. ಪೂರನ್ (61, 34ಎ, 4x1, 6x7) ನಾಲ್ಕನೇ ಅರ್ಧ ಶತಕ ಬಾರಿಸಿ ಗೆಲುವಿನಲ್ಲಿ ಮಿಂಚಿದರು. ಪೂರನ್ 349 ರನ್‌ಗಳೊಡನೆ ಬ್ಯಾಟರ್‌ಗಳ ಪಟ್ಟಿಯಲ್ಲಿ ಸಾಯಿ ಸುದರ್ಶನ್ (329 ರನ್) ಅವರನ್ನು ಹಿಂದೆಹಾಕಿ ಮತ್ತೆ ಅಗ್ರಸ್ಥಾನಕ್ಕೇರಿದರು. ಲಖನೌಗೆ ಈ ಪಂದ್ಯದಲ್ಲಿ ಮಿಚೆಲ್ ಮಾರ್ಷ್ ಅಲಭ್ಯತೆ ಕಾಡಲಿಲ್ಲ. ಪುತ್ರಿಯ ಅಸೌಖ್ಯದಿಂದ ಮಾರ್ಷ್ ಆಡಿರಲಿಲ್ಲ.

ಹತ್ತು ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಇನಿಂಗ್ಸ್ ಆರಂಭಿಸಿದ ನಾಯಕ ರಿಷಭ್ ಪಂತ್ (21, 18ಎ) ಮೊದಲ ವಿಕೆಟ್‌ಗೆ ಮರ್ಕರಂ ಜೊತೆ 6.1 ಓವರುಗಳಲ್ಲಿ 65 ರನ್ ಸೇರಿಸಿದ್ದರು. ಪಂತ್‌ಗೆ ಆರಂಭದಲ್ಲೇ ವಿಕೆಟ್ ಕೀಪರ್ ಬಟ್ಲರ್ ಅವರಿಂದ ಜೀವದಾನ ದೊರೆತರೂ, ಅದರ ಪೂರ್ಣಲಾಭ ಪಡೆಯಲಾಗಲಿಲ್ಲ. ಪ್ರಸಿದ್ಧಕೃಷ್ಣ (26ಕ್ಕೆ2) ಬೌಲಿಂಗ್‌ನಲ್ಲಿ ಡೀಪ್ ಥರ್ಡ್‌ಮ್ಯಾನ್‌ನಲ್ಲಿ ಕ್ಯಾಚಿತ್ತರು. ಇಂಪ್ಯಾಕ್ಟ್ ಸಬ್‌ಸ್ಟಿಟ್ಯೂಟ್ ಆಯುಷ್ ಬಡೋನಿ ಅಜೇಯ 28 ರನ್ ಗಳಿಸಿದರು.


ಭರ್ಜರಿ ಹೊಡೆತ ಪ್ರಯೋಗಿಸಿದ ಲಖನೌ ಸೂಪರ್ ಜೈಂಟ್ಸ್ ತಂಡದ ನಿಕೋಲಸ್ ಪೂರನ್ ಪಿಟಿಐ ಚಿತ್ರ

ಇದಕ್ಕೆ ಮೊದಲು, ಬ್ಯಾಟಿಂಗ್‌ಗೆ ಕಳುಹಿಸಲ್ಪಟ್ಟ ಗುಜರಾತ್ ತಂಡವನ್ನು, ಲಖನೌ ನಿಧಾನಗತಿಯ ಬೌಲರ್‌ಗಳು 6 ವಿಕೆಟ್‌ಗೆ 180 ರನ್‌ಗಳಿಗೆ ಸೀಮಿತಗೊಳಿಸಿದ್ದರು. ಒಳ್ಳೆಯ ಫಾರ್ಮ್‌ನಲ್ಲಿರುವ ಸಾಯಿ ಸುದರ್ಶನ್ (56, 37ಎ, 4x7, 6x1) ಮತ್ತು ನಾಯಕ ಶುಭಮನ್ ಗಿಲ್ (60, 38ಎ, 4x6, 6x1) ಮೊದಲ ವಿಕೆಟ್‌ಗೆ 12 ಓವರುಗಳಲ್ಲಿ 120 ರನ್ ಸೇರಿಸಿ ಭದ್ರ ಅಡಿಪಾಯ ಹಾಕಿಕೊಟ್ಟಿದ್ದರು.

ಆದರೆ ನಂತರದ ಎಂಟು ಓವರುಗಳಲ್ಲಿ ಗುಜರಾತ್ ಕೇವಲ 60 ರನ್‌ಗಳಷ್ಟೇ ಗಳಿಸಲಷ್ಟೇ ಶಕ್ತವಾಯಿತು. ಆರು ವಿಕೆಟ್‌ಗಳನ್ನೂ ಕಳೆದುಕೊಂಡಿತು. ಸ್ಪಿನ್ನರ್‌ಗಳಾದ ರವಿ ಬಿಷ್ಣೋಯಿ (36ಕ್ಕೆ2), ದಿಗ್ವೇಶ್ ರಾಠಿ (30ಕ್ಕೆ1) ಲಖನೌ ಮರಳಿ ಹಿಡಿತ ಪಡೆಯಲು ಕಾರಣರಾದರು.

ಸಂಕ್ಷಿಪ್ತ ಸ್ಕೋರು: ಗುಜರಾತ್ ಟೈಟನ್ಸ್: 20 ಓವರುಗಳಲ್ಲಿ 6 ವಿಕೆಟ್‌ಗೆ 180 (ಸಾಯಿ ಸುದರ್ಶನ್ 56, ಶುಭಮನ್ ಗಿಲ್ 60, ಶೆರ್ಫೇನ್ ರುದರ್‌ಫೋರ್ಡ್ 22; ಶಾರ್ದೂಲ್ ಠಾಕೂರ್ 34ಕ್ಕೆ2, ರವಿ ಬಿಷ್ಣೋಯಿ 36ಕ್ಕೆ2); **ಲಖನೌ ಸೂಪರ್ ಜೈಂಟ್ಸ್:** 19.3 ಓವರ್‌ಗಳಲ್ಲಿ 4 ವಿಕೆಟ್‌ಗೆ 186 (ಏಡನ್ ಮರ್ಕರಂ 58, ರಿಷಭ್ ಪಂತ್ 21, ನಿಕೋಲಸ್ ಪೂರನ್ 61, ಆಯುಷ್ ಬಡೋನಿ ಔಟಾಗದೇ 28; ಪ್ರಸಿದ್ಧ ಕೃಷ್ಣ 26ಕ್ಕೆ2); **ಪಂದ್ಯದ ಆಟಗಾರ:** ಏಡನ್ ಮರ್ಕರಂ 58 (31ಎ), 2 ಕ್ಯಾಚ್

ಇನ್ನಷ್ಟು ಕ್ರೀಡಾ ಸುದ್ದಿಗಳು 07

ಸಂಕ್ಷಿಪ್ತ ಸುದ್ದಿ

ಐಪಿಎಲ್‌ನಿಂದ ಫಿಲಿಪ್ಸ್ ಹೊರಕ್ಕೆ

ನವದೆಹಲಿ (ಎಎಫ್‌ಪಿ): ತೊಡೆಸಂದು ನೋವಿನಿಂದಾಗಿ ನ್ಯೂಜಿಲೆಂಡ್‌ನ ಆಲ್‌ರೌಂಡರ್ ಗ್ಲೆನ್ ಫಿಲಿಪ್ಸ್ ಅವರು ಐಪಿಎಲ್‌ನಲ್ಲಿ ಆಡುವ ಗುಜರಾತ್ ಟೈಟನ್ಸ್ ತಂಡದಿಂದ ಹೊರಬಿದ್ದಿದ್ದಾರೆ.

ಏ. 6ರಂದು ಸನ್‌ರೈಸರ್ಸ್ ವಿರುದ್ಧ ಪಂದ್ಯದಲ್ಲಿ ಅವರಿಗೆ ನೋವು ಕಾಣಿಸಿಕೊಂಡಿತ್ತು ಎಂದು ಫ್ರಾಂಚೈಸಿಯ ಪ್ರಕಟಣೆ ತಿಳಿಸಿದೆ. ಅವರು ಈ ಋತುವಿನಲ್ಲಿ ಒಂದೂ ಪಂದ್ಯ ಆಡಿರಲಿಲ್ಲ. ಆದರೆ ಸನ್‌ರೈಸರ್ಸ್ ವಿರುದ್ಧದ ಪಂದ್ಯದಲ್ಲಿ ಸಬ್‌ಸ್ಟಿಟ್ಯೂಟ್ ಆಗಿ ಕಣಕ್ಕೆ ಇಳಿದಿದ್ದರು.

ಚೆಸ್: ದೀಪನ್‌ಗೆ ಮಣಿದ ಕರೆನ್

ಬೆಂಗಳೂರು: ಭಾರತದ ಗ್ರ್ಯಾಂಡ್ ಮಾಸ್ಟರ್ ದೀಪನ್ ಚಕ್ರವರ್ತಿ ಅವರು 'ನಮ್ಮ ಬೆಂಗಳೂರು ಇಂಟರ್ ನ್ಯಾಷನಲ್ ಗ್ರ್ಯಾಂಡ್‌ಮಾಸ್ಟರ್ಸ್ ಓಪನ್ ಚೆಸ್ ಟೂರ್ನಿ'ಯ ನಾಲ್ಕನೇ ಸುತ್ತಿನಲ್ಲಿ ದ್ವಿತೀಯ ಶ್ರೇಯಾಂಕದ ಕರೆನ್ ಗ್ರೆಗೋರಿಯನ್ ಅವರನ್ನು ಸೋಲಿಸಿ, ಶನಿವಾರದ ಕೊನೆಗೆ ಆರು ಮಂದಿ ಆಟಗಾರರೊಂದಿಗೆ ಮುನ್ನಡೆ ಹಂಚಿಕೊಂಡಿದ್ದಾರೆ.

ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಈ ಟೂರ್ನಿಯಲ್ಲಿ ಏಳು ಮಂದಿ ಆಟಗಾರರು ತಲಾ 4 ಅಂಕ ಗಳಿಸಿದ್ದಾರೆ. ಎರಡನೇ ದಿನ ಇಬ್ಬರು ಐಎಂ ಆಟಗಾರರನ್ನು ಸೋಲಿಸಿ ಗಮನ ಸೆಳೆದಿದ್ದ ಪರಾಸ್ ಭೋಯಿರ್ ಅವರು ಅಗ್ರ ಶ್ರೇಯಾಂಕದ ಪಾ ಇನಿಯನ್ (ತಮಿಳುನಾಡು, 3.5) ಅವರಿಗೆ ಮಣಿದರು. ಜಿಎಂಗಳಾದ ದೀಪನ್ ಚಕ್ರವರ್ತಿ (ತಮಿಳುನಾಡು), ಮ್ಯಾನುವೆಲ್ ಪೆಟ್ರೋಸಿಯಾನ್ (ಅರ್ಮೇನಿಯಾ), ಪ್ರಣವ್ ಆನಂದ್ (ಕರ್ನಾಟಕ), ಸಂಕೇತ್ ಚಕ್ರವರ್ತಿ (ಪಶ್ಚಿಮ ಬಂಗಾಳ), ಲೆವೊನ್ ಪಂಟ್ಸುಲಾಲಿಯಾ (ಜಾರ್ಜಿಯಾ) ಮತ್ತು ಐಎಂಗಳಾದ ವಿಯಾನಿ ಡಿಕುನ್ಹಾ (ಕರ್ನಾಟಕ) ಮತ್ತು ವಿ.ಎ.ವಿ. ರಾಜೇಶ್ ಮುನ್ನಡೆ ಹಂಚಿಕೊಂಡಿದ್ದಾರೆ.